… ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 03
ರೂ. 2.00

ಐಕ್ಯರಂಗ

15 ಜನವರಿ 1995



ಹೇಡಿತನ, ಸರ್ವಾಧಿಕಾರ ಪ್ರದರ್ಶಿಸಿದ ಸುಗ್ರೀವಾಜ್ಞೆಗಳು

ವಿಶ್ವ ವ್ಯಾಪಾರ ಸಂಘಟನೆ ಸದಸ್ಯತ್ವ

ಡಿಸೆಂಬರ್ 30ರಂದು ಭಾರತ ರಾಯಭಾರಿ ಜಿನೇವಾದಲ್ಲಿ ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯು.ಟಿ.ಓ) ಒಪ್ಪಂದಕ್ಕೆ ಸಹಿ ಹಾಕಿಕೊಟ್ಟಿದ್ದಾರೆ. ಈ ಒಪ್ಪಂದದ ಒಂದೆರಡು ಶರತ್ತುಗಳನ್ನು ಪೂರೈಸಲು ಡಿಸೆಂಬರ್ 31ರಂದು ಕೇಂದ್ರ ಸರಕಾರ ಎರಡು ಸುಗ್ರೀವಾಜ್ಞೆಗಳನ್ನು ಹೊರಡಿಸಿದೆ. ಅದರಲ್ಲಿ ಒಂದು 1970ರ ಭಾರತೀಯ ಪೇಟೆಂಟ್ ಕಾಯಿದೆಯನ್ನು ಮಾರ್ಪಡಿಸುವ ಸುಗ್ರೀವಾಜ್ಞೆ. ಈ ಮೂಲಕ ತಾನು ಸಂಸತ್ತನ್ನು, ಅದು ಪ್ರತಿನಿಧೀಕರಿಸುವ ದೇಶದ 90 ಕೋಟಿ ಜನಗಳನ್ನು ಎದುರಿಸಲಾರೆನೆಂಬ ಹೇಡಿತನವನ್ನು ನರಸಿಂಹರಾವ್ ಸರಕಾರ ಪ್ರದರ್ಶಿಸಿದೆ. ಒಂದು ರೀತಿಯಲ್ಲಿ ಇದು ಸರ್ವಾಧಿಕಾರದ ಲಕ್ಷಣವೂ ಹೌದು.

ಪ್ರಜಾಪ್ರಭುತ್ವದಲ್ಲಿ ಸುಗ್ರೀವಾಜ್ಞೆ ಹೊರಡಿಸುವುದು ತೀವ್ರ ತುರ್ತು ಪ್ರಸಂಗವಿದ್ದಾಗ ಮಾತ್ರ. ಅದಕ್ಕೆ ಅವಕಾಶ ಇರುವುದೂ ಆಗಲೇ. ಯಾವುದನ್ನು ಸಂಸತ್ತಿನ ಮೂಲಕ ಜನತೆಯ ಚರ್ಚೆಗೆ ಒಳಪಡಿಸಿ ಅದರ ಅನುಮತಿ ಪಡೆದು ಮಸೂದೆ ಮಾಡಲು ಸಾಧ್ಯವಿದೆಯೋ ಅದನ್ನು ಆ ರೀತಿಯೇ ಮಾಡಬೇಕು. ಎಲ್ಲ ಅವಕಾಶವಿದ್ದರೂ ಚರ್ಚೆಗೊಳಪಡಿಸದೆ ಸುಗ್ರೀವಾಜ್ಞೆ ಹೊರಡಿಸಿದರೆ ಅದು ಸರ್ವಾಧಿಕಾರದ ಸೂಚನೆ ನೀಡುತ್ತದೆ.

ಸಿಪಿಐ(ಎಂ)ನ ಕೇಂದ್ರ ಸಮಿತಿ ಇತ್ತೀಚೆಗೆ ಸಭೆ ಸೇರಿದಾಗ ಇಂತಹ ಸುಗ್ರೀವಾಜ್ಞೆ ಹೊರಡಿಸಬಾರದೆಂದು ಕೇಂದ್ರ ಸರ್ಕಾರಕ್ಕೆ ಎಚ್ಚರಿಕೆ ನೀಡಿತು. ಸರಕಾರ ಈ ಬಗ್ಗೆ ಯಾವುದೇ ಸುಗ್ರೀವಾಜ್ಞೆ ಹೊರಡಿಸದಂತೆ ಹಾಗೂ ಸಂಸತ್ತಿನಲ್ಲಿ ಒಂದು ಪೂರ್ಣ ಹಾಗೂ ಬಹಿರಂಗ ಚರ್ಚೆ ನಡೆಸಲೂ ಅದಕ್ಕೆ ಸಲಹೆ ನೀಡಬೇಕು ಎಂದು ರಾಷ್ಟ್ರಪತಿಗಳಿಗೂ ಸಿಪಿಐ(ಎಂ) ಮನವಿ ಮಾಡಿತ್ತು. ಆದರೆ ಕೇಂದ್ರ ಸರ್ಕಾರಕ್ಕೆ ಇಂತಹ ಎಚ್ಚರಿಕೆಗಳಿಗೆ ಗಮನ ನೀಡುವ ಧೈರ್ಯ, ವ್ಯವಧಾನ ಎರಡೂ ಇರಲಿಲ್ಲ. ಐ.ಎಂ.ಎಫ್. ಮತ್ತು ವಿಶ್ವ ಬ್ಯಾಂಕ್ ಗಳ ಗುಲಾಮನಂತೆ ವರ್ತಿಸುವ ಈ ಸರ್ಕಾರಕ್ಕೆ ಈ ಧಣಿಗಳಿಂದ ಒತ್ತಡ ಬಹಳವಾಗಿ ಬಂದಿರಲೇಬೇಕು. ಆದ್ದರಿಂದಲೇ ಅದು ಈ ದುಸ್ಸಾಹಸಕ್ಕೆ ಕೈ ಹಾಕಿದೆ. ದೇಶದ ಹಿತಾಸಕ್ತಿಗೆ ಮಾರಕವಾದ ಬದಲಾವಣೆಗಳನ್ನು ತರಲು ಮುಂದಾಗಿದೆ.

ಈಗ ಪೇಟೆಂಟ್ ಕಾಯಿದೆಯಡಿ ಉತ್ಪನ್ನ ಪೇಟೆಂಟ್‌ಗಳಿಗಾಗಿ ಅರ್ಜಿ ಹಾಕುವ ಅವಕಾಶವಿರುತ್ತದೆ. ಬಹುರಾಷ್ಟ್ರೀಯ ಕಂಪೆನಿಗಳಿಗೆ ಅತ್ಯಂತ ಲಾಭದಾಯಕವಾಗುವ ಈ ಕಾನೂನು ದೇಶೀಯ ಉದ್ದಿಮೆಯನ್ನು ಪೂರ್ಣವಾಗಿ ಪರಾವಲಂಬಿಯಾಗಿ ಮಾರ್ಪಡಿಸಲಿದೆ. ಅದೇ ಈ ಸುಗ್ರೀವಾಜ್ಞೆಯ ಹೆಚ್ಚುಗಾರಿಕೆ.

ಇಲ್ಲಿ ಸಾಮಾಜಿಕ ಹಿತಾಸಕ್ತಿಗಳಿಗೆ ಧಕ್ಕೆ ಬರದಂತೆ ಸರ್ಕಾರ ಮಧ್ಯಪ್ರವೇಶಿಸಲು ಅವಕಾಶವಿದೆ ಮತ್ತು ಇಂತಹ ಸರಕು ಸೇವೆಗಳ ಬೆಲೆ ನಿಯಂತ್ರಿಸಲು ಅವಕಾಶವಿದೆ ಎಂದು ಹೇಳಲಾಗುತ್ತಿದೆ. ಆದರೆ ಇವೆಲ್ಲ ಬರೀ ಕಾನೂನಿನಲ್ಲಿ, ಈ ಕಾನೂನುಗಳಲ್ಲಿ ಲೋಪಗಳನ್ನು ಕಂಡು ಹಿಡಿಯಲು ಬಹುರಾಷ್ಟ್ರೀಯ ಕಂಪೆನಿಗಳಿಗೆ ಯಾರೂ ಹೇಳಿಕೊಡಬೇಕಾಗಿಲ್ಲ. ಹಾಗೆ ಮಾಡಿದಾಗ ಅದನ್ನು ತಡೆಯುವ ಧೈರ್ಯವಂತೂ ನರಸಿಂಹರಾವ್ ಸರಕಾರಕ್ಕಿಲ್ಲ.

ಹೊಸ ವಿಶ್ವ ವ್ಯಾಪಾರ ಸಂಘಟನೆ (ಡಬ್ಲ್ಯು.ಟಿ.ಓ)ಗೆ ಸಂಬಂಧಪಟ್ಟಂತೆಯೂ ಬಲ್ಲಿದರು ಇದನ್ನೇ ಹೇಳುತ್ತಿದ್ದಾರೆ. ಹೇಳಲಿಕ್ಕೇನೋ ಈ ಸಂಘಟನೆಗೆ ಎಲ್ಲಾ ಸದಸ್ಯ ದೇಶಗಳು ತಾನು ರೂಪಿಸಿದ ವ್ಯಾಪಾರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡುವ 'ಅಧಿಕಾರ' ಇದೆ. ಆದರೆ ವಾಸ್ತವಿಕವಾಗಿ ಅಧಿಕಾರ ಇರುವುದು ಆರ್ಥಿಕ ಶಕ್ತಿಯುಳ್ಳ ಅಮೇರಿಕಾದಂತಹ ದೇಶಗಳಿಗೆ ಮಾತ್ರ. ಅಮೇರಿಕನ್ ಸಂಸತ್ತು ಈ ಒಪ್ಪಂದಕ್ಕೆ ಅನುಮೋದನೆ ಮಾಡಿದ ರೀತಿಯೇ ಇದಕ್ಕೆ ಸಾಕ್ಷಿ. ಈ ವಿಶ್ವ ಸಂಘಟನೆಯ ನೀತಿ-ನಿಯಮಗಳನ್ನು ಅರ್ಥೈಸಬೇಕಾದಲ್ಲಿ ಅದನ್ನು ಸಂಘಟನೆಯ ಎಲ್ಲಾ ಸದಸ್ಯರು ಸಾಮೂಹಿಕವಾಗಿ ಮಾಡಬೇಕು. ಇದು ಅಂತರರಾಷ್ಟ್ರೀಯ ಕಾನೂನು. ಆದರೆ ಅಮೇರಿಕಾ ಸರಕಾರ ಈ ನೀತಿ-ನಿಯಮಗಳನ್ನು ಅರ್ಥೈಸಲು, ತಾನೇ ಒಂದು ಪ್ರತ್ಯೇಕ ವ್ಯವಸ್ಥೆ ಮಾಡಿರುವುದಾಗಿ ತನ್ನ ಸಂಸತ್ತಿಗೆ ತಿಳಿಸಿದೆ. ಡಬ್ಲ್ಯು.ಟಿ.ಓ. ಅಮೇರಿಕಾ ವ್ಯಾಪಾರ ನಿಯಮಗಳನ್ನು ಪಾಲಿಸದ ಬಗ್ಗೆ ಏನಾದರೂ ನಿರ್ಣಯ ಕೈಗೊಂಡರೆ ಅದನ್ನು ಅಮೇರಿಕಾ ನೇರವಾಗಿ ಒಪ್ಪುವುದಿಲ್ಲ, ಬದಲಾಗಿ ತನ್ನ ಐವರು ನಿವೃತ್ತ ನ್ಯಾಯಾಧೀಶರ ಒಂದು ವಿಶೇಷ ಸಮಿತಿ ಆ ನಿರ್ಣಯಗಳನ್ನು ವಿಮರ್ಶಿಸುತ್ತದಂತೆ. ಆದ್ದರಿಂದ ಒಬ್ಬ ವಿಷ್ಯಾದ ರಾಯಭಾರಿ "ನಮ್ಮದು ಬಹಳ ಅಸಮಾನ ಜಗತ್ತು" ಎಂದರಂತೆ. ಈ ಅಸಮಾನ ಜಗತ್ತಿಗೆ ಅಧಿಕೃತ ರೂಪಕೊಟ್ಟಿರುವ ಡಬ್ಲ್ಯು.ಟಿ.ಓ. ಗೆ ನಮ್ಮ ಸಂಸತ್ತಿನಲ್ಲಿ ಆ ಬಗ್ಗೆ ಚರ್ಚೆಯನ್ನು ಕೂಡಾ ತಪ್ಪಿಸಿ ಭಾರತವನ್ನು ನರಸಿಂಹರಾವ್ ಸರಕಾರ ಕಟ್ಟಿಹಾಕಿದೆ.

ಅನಿಸಿಕೆ

ವಿಶ್ವ ವ್ಯಾಪಾರ ಸಂಘಟನೆ(WTO) ಬಹಳ ಬಲಶಾಲಿ ಎಂದೆಲ್ಲಾ ಅದರ ಸದ್ಗುಣ ಗಳನ್ನು ಹಾಡಿ ಹೊಗಳುತ್ತಿದ್ದ ಗ್ಯಾಟ್‌ನ ಮಹಾ ನಿರ್ದೇಶಕ ಸೂದರ್‌ಲ್ಯಾಂಡ್ ಇತ್ತೀಚೆಗೆ ಇದು ಎಲ್ಲಾ ಪ್ರಮುಖ ದೇಶಗಳು WTO ನಿಯಮಾವಳಿಗಳಿಗೆ ಬದ್ಧವಾಗುತ್ತವೆಯೋ ಎಂಬುದನ್ನು ಅವಲಂಬಿಸಿದೆ ಎನ್ನಲಾರಂಭಿಸಿದ್ದಾರೆ. ಮುಂಬರುವ ಕೇಡಿನ ಮುನ್ಸೂಚನೆ ಕಂಡವರ ದನಿಯಿದು ಎಂದನಿಸುತ್ತಿದೆಯೇ?

– ಚಿತ್ರಾ ಸುಬ್ರಮಣ್ಯಂ
ವಿಶೇಷ ಅಂಕಣಕಾರರು

ಸಿಪಿಐ(ಎಂ) 15ನೇ ಕರ್ನಾಟಕ ರಾಜ್ಯ ಸಮ್ಮೇಳನ ಮಾರ್ಚ್ 7, 8, 9, 10ರಂದು ಗುಲ್ಬರ್ಗದಲ್ಲಿ

ಸಿಪಿಐ(ಎಂ) ಪಕ್ಷದ ಅಖಿಲ ಭಾರತ ಸಮ್ಮೇಳನ 1995 ಎಪ್ರಿಲ್ ರಿಂದ 8 ರವರೆಗೆ ಪಂಜಾಬ್ ರಾಜ್ಯದ ಚಂಢೀಗಡದಲ್ಲಿ ಸೇರುತ್ತದೆ. ಅದರ ಹಿನ್ನೆಲೆಯಾಗಿ ಕರ್ನಾಟಕ ರಾಜ್ಯ ಸಮ್ಮೇಳನವನ್ನು 1995 ಮಾರ್ಚ್ 7, 8, 9, 10 ರಂದು ಗುಲ್ಬರ್ಗಾ ನಗರದಲ್ಲಿ ನಡೆಸುವ ನಿರ್ಣಯವನ್ನು ರಾಜ್ಯ ಸಮಿತಿ ಕೈಗೊಂಡಿದೆ. 1971 ನವಂಬರ್ ತಿಂಗಳಲ್ಲಿ ಅಂದರೆ 24 ವರ್ಷಗಳ ಹಿಂದೆ 9ನೇ ರಾಜ್ಯ ಸಮ್ಮೇಳನ ಗುಲ್ಬರ್ಗದಲ್ಲಿ ಸೇರಿತ್ತು. ಕಳೆದ ಇಪ್ಪತ್ನಾಲ್ಕು ವರ್ಷಗಳಲ್ಲಿ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳಾದ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿಗಳಲ್ಲಿ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಬೆಳೆದು ಬಂದಿವೆ. ಹೋದ ವರ್ಷ ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಜೈಲ್ ಭರೋ ಕಾರ್ಯಕ್ರಮದಲ್ಲಿ ಈ ನಾಲ್ಕು ಜಿಲ್ಲೆಗಳಲ್ಲಿ ಅತಿ ಹೆಚ್ಚು ಜನ ಪಾಲ್ಗೊಂಡಿದ್ದರು. ಮೊನ್ನೆ ನಡೆದ ಚುನಾವಣೆಯಲ್ಲಿ ಈ ಭಾಗದಿಂದ 5 ಜನ ಪಕ್ಷದ ಉಮೇದುವಾರರು ಸ್ಪರ್ಧಿಸಿದ್ದರು. ಚುನಾವಣೆ ಪ್ರಚಾರದಲ್ಲಿ ನೂರಾರು ಉತ್ತಮ ಕಾರ್ಯಕರ್ತರು ಸಿಕ್ಕಿದ್ದಾರೆ. ಚುನಾವಣೆಯಲ್ಲಿ ಸೋತಿದ್ದರೂ ಚುನಾವಣೆ ಪ್ರಚಾರಕ್ಕಾಗಿ ಸಾಕಷ್ಟು ಹಣ ಖರ್ಚಾಗಿದ್ದರೂ ಕೂಡಾ ಹೊಸ ಸ್ಫೂರ್ತಿ ತುಂಬಿದ ಉತ್ಸಾಹಿ ತರುಣರ ಬೆಂಬಲದಿಂದ ಗುಲ್ಬರ್ಗಾ ನಗರದಲ್ಲಿ ಪಕ್ಷದ 1ನೇಯ ರಾಜ್ಯ ಸಮ್ಮೇಳನ ನಡೆಸಲು ತೀರ್ಮಾನಿಸಲಾಗಿದೆ.


ಸ್ವಾಗತ ಸಮಿತಿ ರಚನೆ: ಡಿಸೆಂಬರ್ 26, 27ರಂದು ನಡೆದ ಗುಲ್ಬರ್ಗಾ ಜಿಲ್ಲಾ ಸಮಿತಿ ಸಭೆಯಲ್ಲಿ ಸ್ವಾಗತ ಸಮಿತಿಯನ್ನು ಅದರ ಕೆಳಗೆ ಆರ್ಥಿಕ ಸಮಿತಿ, ಆಹಾರ ಸಮಿತಿ, ಪ್ರಚಾರ ಸಮಿತಿ, ಸ್ವಯಂ ಸೇವಕ ಸಮಿತಿ, ಸ್ಮರಣಸಂಚಿಕೆ ಸಮಿತಿಗಳನ್ನು ರಚಿಸಲಾಯಿತು. ಅಧ್ಯಕ್ಷರಾಗಿ ಮಾರುತಿ ಮಾನ್ಪಡೆ, ಕಾರ್ಯಾಧ್ಯಕ್ಷರಾಗಿ ಎ.ಬಿ.ದಾಸ್, ಪ್ರಧಾನ ಕಾರ್ಯದರ್ಶಿಗಳಾಗಿ, ಸಿ.ಎ ಪಾಟೀಲ, ಮೇಘರಾಜ ಕಠಾರೆ ಖಜಾಂಚಿಯಾಗಿರುವ ಸ್ವಾಗತ ಸಮಿತಿಯನ್ನು ರಚಿಸಲಾಯಿತು. ಸೆಕ್ರೆಟಾರಿಯೇಟ್ ಸದಸ್ಯರಾದ ಎನ್.ಕೆ.ಉಪಾಧ್ಯಾಯರು ಮಾರ್ಗದರ್ಶನ ನೀಡಿದರು.

ಡಿಸೆಂಬರ್ 31,1994ರಂದು ಶಾಖಾಕಾರ್ಯದರ್ಶಿಗಳ, ಮತ್ತಿನ್ನಿತರ ಸಾಮೂಹಿಕ ಸಂಘಟನೆಗಳ ಸಭೆ ನಡೆಯಿತು. ಎನ್.ಕೆ. ಉಪಾಧ್ಯಾಯರು ಭಾಷಣ ಮಾಡಿ ರಾಜ್ಯ ಸಮ್ಮೇಳನ ಗುಲ್ಬರ್ಗದಲ್ಲಿ ಸೇರುವ ಮಹತ್ವವನ್ನು ವಿವರಿಸಿದರು. ಮಾರುತಿ ಮಾನ್ಪಡೆ, ಸಿ.ಎ. ಪಾಟೀಲ, ಕಲ್ಲಪ್ಪ ಕಿರಣಗಿ, ಮರಡಿ ವಕೀಲರೆಲ್ಲ ಸಮ್ಮೇಳನವನ್ನು ಯಶಸ್ವಿಗೊಳಿಸುವ ಕುರಿತು ಮಾತನಾಡಿದರು.

ಹೈದರಾಬಾದ್ ಕರ್ನಾಟಕ ಜಿಲ್ಲಾ ಸಮಿತಿಗಳ ಗಮನಕ್ಕೆ: ರಾಜ್ಯದ ಸಮ್ಮೇಳನದ ಅಂಗವಾಗಿ ಮಾರ್ಚ್ 7ರಂದು ಗುಲ್ಬರ್ಗದಲ್ಲಿ ಬೃಹತ್ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ಇರುವುದರಿಂದ ಬೀದರ್, ರಾಯಚೂರು, ಬಳ್ಳಾರಿ, ಬಿಜಾಪುರ ಜಿಲ್ಲೆಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಈಗಿನಿಂದಲೇ ತಯಾರಿ ನಡೆಸಬೇಕೆಂದು ರಾಜ್ಯ ಸಮಿತಿ ವಿನಂತಿಸಿದೆ.

ವಾರದ ವ್ಯಂಗ್ಯಚಿತ್ರ

"ಟೈಮ್ಸ್ ಆಫ್ ಇಂಡಿಯಾ"ದಲ್ಲಿ ಲಕ್ಷ್ಮಣ್



1994: ಹಿನ್ನೋಟ

ಸಾಂಸ್ಕೃತಿಕ

ಮಹಾಚೈತ್ರ ಶರಣ ಚಳುವಳಿಯ ಆಶಾದಾಯಕ ನಿಲುವಿನ ಕೃತಿ

-ಜಿ.ಎನ್.

ಸಿಂಧನೂರು: ವಿವಾದಕ್ಕೊಳಗಾಗಿ ಇತ್ತೀಚೆಗೆ ಬಹಳಷ್ಟು ಸುದ್ದಿ ಮಾಡಿದ ಎಚ್.ಎಸ್. ಶಿವಪ್ರಕಾಶರ ನಾಟಕ "ಮಹಾಚೈತ್ರ" ಪಠ್ಯ ಪುಸ್ತಕದ ಕುರಿತು, ಎಸ್.ಎಫ್.ಐ. ಮತ್ತು ಡಿ.ವೈ.ಎಫ್.ಐ ನೇತೃತ್ವದಲ್ಲಿ ವಿಚಾರ ಸಂಕಿರಣವೊಂದು ಜರುಗಿತು. ಖ್ಯಾತ ಬಂಡಾಯ ಸಾಹಿತಿ ಅಲ್ಲಮಪ್ರಭು ಬೆಟ್ಟದೂರ ಮತ್ತು ಶರಣ ಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನದಲ್ಲಿ ತೊಡಗಿಸಿಕೊಂಡ ಜಿ.ಎನ್. ನಾಗರಾಜ್ ವಿಷಯ ಮಂಡಿಸಿದರು.

ವಿವಾದಗ್ರಸ್ತವಾದ ಕೃತಿಯ ಬಗ್ಗೆ ಮೊದಲು ಅಲ್ಲಮಪ್ರಭು ಬೆಟ್ಟದೂರ ಮಾತನಾಡುತ್ತಾ, "ಈ ಕೃತಿಯನ್ನು ನಾನು ಪದವಿ ತರಗತಿಯ ವಿದ್ಯಾರ್ಥಿಗಳಿಗೆ ಬೋಧಿಸುತ್ತಿದ್ದೇನೆ. ನನಗಾಗಲೀ ನನ್ನ ವಿದ್ಯಾರ್ಥಿಗಳಿಗಾಗಲೀ ಯಾವುದೇ ವಿವಾದಾಸ್ಪದ ಅಂಶಗಳಿವೆಯೆಂದು ಇದುವರೆಗೆ ಅನ್ನಿಸಿಯೇ ಇಲ್ಲ"ವೆಂದು ನುಡಿದರು. ಮಾತೆ ಮಹಾದೇವಿಯವರು ಅನವಶ್ಯಕ ವಿವಾದವನ್ನು ಸೃಷ್ಟಿ ಮಾಡಿದ್ದಾರೆ. ಇದು ಕೃತಿಯ ಹೊರಗಿನ ಕಾರಣಗಳಿಗಾಗಿ ಮತ್ತು ಲೇಖಕನ ಮೇಲಿನ ವೈಯುಕ್ತಿಕ ದ್ವೇಷದಿಂದಾಗಿ ಉಂಟಾದ ವಿವಾದವೆಂದರು. ನಿಜವಾಗಿಯೂ 'ಮಹಾಚೈತ್ರ' ಶರಣ ಚಳುವಳಿಯ ಬಗೆಗೆ ಆಶಾದಾಯಕ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ. ಅದನ್ನು ಓದುವ ಯಾರಿಗಾದರೂ ಈ ಅನುಭವ ಬರಲು ಸಾಧ್ಯವೆಂದರು. ಮಹಾಚೈತ್ರಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಮತ್ತು ಇದು ನೂರು ಯಶಸ್ವಿ ರಂಗಪ್ರಯೋಗಗಳನ್ನು ಕಂಡ ನಾಟಕ. ಮಂಗಳೂರು ವಿಶ್ವವಿದ್ಯಾಲಯದವರು ಪಠ್ಯಪುಸ್ತಕವನ್ನಾಗಿಸಿದ ಕೃತಿಯೆಂದರು. ಪುರೋಹಿತಶಾಹಿಯ ವಿರುದ್ಧ ಸಿಡಿದೆದ್ದ ಶರಣ ಚಳುವಳಿ ಅಂದಿಗೆ ವೈಫಲ್ಯತೆಯಲ್ಲಿ ಕೊನೆಗೊಂಡಿದ್ದರೂ ಅದು ಮತ್ತೆ ಚಿಗುರಬೇಕೆನ್ನುವ ಆಶಾಭಾವನೆಯನ್ನು ವ್ಯಕ್ತಪಡಿಸುತ್ತಾ ಕೊನೆಗೊಳಿಸುವ ಶಿವಪ್ರಕಾಶರ ಈ ನಾಟಕ ಎಲ್ಲಾ ಬಸವಪ್ರೇಮಿಗಳು ಅಭಿಮಾನ ಪಡಬೇಕಾದ ಕೃತಿಯೆಂದರು. ಪುರೋಹಿತಶಾಹಿಗಳು ವಿರೋಧಿಸಬೇಕಾದ ಈ ಕೃತಿಯನ್ನು ಬಸವ ಪ್ರೇಮಿಗಳು ವಿರೋಧಿಸುತ್ತಿರುವುದು ವಿಷಾದನೀಯವೆಂದು ನೊಂದು ನುಡಿದರು.

ಮಾತೆ ಮಹಾದೇವಿಯವರು ಶರಣರ ಆಯಗಳನ್ನು ಧಿಕ್ಕರಿಸಿ ವೈದಿಕ ಪರಂಪರೆಯ ಮೌಲ್ಯಗಳನ್ನು ಸ್ಥಿರೀಕರಿಸುತ್ತಿದ್ದಾರೆ. ಶರಣ ಚಳುವಳಿಯ ಬಗ್ಗೆ ಅಪಾರ ಗೌರವವನ್ನಿಟ್ಟು ಕೊಂಡಿರುವ ನಮ್ಮಂಥವರಿಗೆ ಮಾತೆ ಮಹಾದೇವಿಯವರ ಇಂಥ ಶರಣದ್ರೋಹಿ ಕೆಲಸದ ಬಗ್ಗೆ ಜಿಗುಪ್ಸೆಯುಂಟಾಗಿದೆ ಎಂದರು. ಜ್ಞಾನಕ್ಕಿಂತ ಕ್ರಿಯೆ ಮೇಲೆಂದು ಸರಳ ಸಹಜ ಬದುಕಿಗಾಗಿ, ಸರ್ವರ ಸಮಾನತೆಗಾಗಿ ನಡೆದ ಚಳುವಳಿ ಶರಣರ ಚಳುವಳಿಯೆಂದರು. ದೇವಾಲಯಗಳು ಶೋಷಣೆಯ ಕೇಂದ್ರವಾಗಿದ್ದುದನ್ನು ವಿರೋಧಿಸಿದ ಶರಣರು ಸ್ಥಾವರಕಳಿವುಂಟು ಜಂಗಮಕ್ಕಳಿವಿಲ್ಲ ಎಂದು ದೇವಾಲಯದ ಅಸ್ತಿತ್ವವನ್ನು ವಿರೋಧಿಸಿದರು. ಅಂಥವುದರಲ್ಲಿ ಮಾತೆ ಮಹಾದೇವಿ ದೇವಾಲಯಗಳನ್ನು ಕಟ್ಟುತ್ತಾ ಪೀಠಸ್ತ ಸಂಸ್ಕೃತಿಯನ್ನು ಅಪ್ಪಿಕೊಂಡು ಶರಣ ಚಳುವಳಿಯ ಮೂಲ ಆಶಯಗಳಿಗೆ ವಿರೋಧಿಯಾಗಿದ್ದಾರೆಂದು ಆರೋಪಿಸಿದರು.

ಕೃತಿಯನ್ನು ಓದದೇ ಕೃತಿಯ ಬಗ್ಗೆ ಪೂರ್ವಗ್ರಹಪೀಡಿತರಾಗುವುದು ಬೇಡವೆಂದರು. ಮಹಾಚೈತ್ರವನ್ನು ಓದಿ ಅದರ ಬಗ್ಗೆ ನಿಮ್ಮದೇ ಆದ ಸ್ವತಂತ್ರ ವಿಚಾರವನ್ನು ಬೆಳೆಸಿಕೊಳ್ಳಿ ಎಂದು ವಿಚಾರ ಸಂಕಿರಣದಲ್ಲಿ ಭಾಗವಹಿಸಿದವರಿಗೆ ಕರೆ ನೀಡಿದರು.

ಬಸವಣ್ಣನವರ ನಿರ್ಗಮನದ ನಂತರ ಈ ನಾಟಕ ಪ್ರಾರಂಭವಾಗುತ್ತದೆ. ಒಂದು ಚಳುವಳಿಯಲ್ಲಿ ವಿಚಾರವೇ ನಾಯಕ ಇದನ್ನು ಪ್ರತಿಬಿಂಬಿಸುವ ಭೌತಿಕ ಸ್ವರೂಪದಲ್ಲಿ ಒಬ್ಬ ವ್ಯಕ್ತಿ ಇರುತ್ತಾರೆ. ವ್ಯಕ್ತಿಯ ನಿರ್ಗಮನದಿಂದ ವಿಚಾರ ನಿರ್ಗಮನವಾಗುವುದಿಲ್ಲ, ಆ ಚಳುವಳಿಯಲ್ಲಿ ಸೆಳೆಯಲ್ಪಟ್ಟ ಒಂದು ಚಳುವಳಿ ಪಡೆಯೇನಿರುತ್ತದೆ ಅದು ಆ ಚಳುವಳಿಯನ್ನು ಮುಂದುವರಿಸಿಕೊಂಡು ಹೋಗುತ್ತದೆ. ಇದು ಯಾವುದೇ ಚಳುವಳಿಗೆ ಅನ್ವಯಿಸಬಹುದಾದ ಏಕರೂಪದ ಸೂತ್ರ. ಹೀಗೆಯೇ ಬಸವಣ್ಣನ ನಿರ್ಗಮನದ ನಂತರವೂ ಶರಣ ಚಳುವಳಿ ಉಳಿಯುತ್ತದೆ, ಬೆಳೆಯುತ್ತದೆ ಎಂದು ಆಶಿಸುವ ಲೇಖನ ಆಶಾದಾಯಕ ಮನೋಭಾವ ಇಡೀ ವಚನ ಚಳುವಳಿಯ ಪ್ರಸ್ತುತತೆಯನ್ನು ಪ್ರತಿಬಿಂಬಿಸುತ್ತದೆ ಎಂದರು.

ಇನ್ನೊಬ್ಬ ವಿಷಯ ಮಂಡಕ ಜಿ.ಎನ್. ನಾಗರಾಜ್‌ರವರು ಮಾತನಾಡುತ್ತಾ, ಮಹಾಚೈತ್ರ ಶರಣ ಚಳುವಳಿಯ ಬಗ್ಗೆ ಆಶಾದಾಯಕ ಮನೋಧರ್ಮವನ್ನು ಬಿಂಬಿಸುವ ನಾಟಕವೆಂದರು. ಮಾತೆ ಮಹಾದೇವಿಯವರು ಎತ್ತಿದ ಕೆಲ ಕ್ಷುಲ್ಲಕ ಅಂಶಗಳಿಂದ ಕೃತಿಯನ್ನು ನೋಡಬಾರದು, ಇದೇ ರೀತಿ ತರ್ಕಿಸಿದರೆ ಕನ್ನಡ ಸಾಹಿತ್ಯದ ಯಾವೊಂದೂ ಕೃತಿಯೂ ವಿದ್ಯಾರ್ಥಿಗಳಿಗೆ ಪಠ್ಯವಾಗಲು ಅನರ್ಹವಾಗುತ್ತದೆ ಎಂದು ಪಂಪನ ವಿಕ್ರಮಾರ್ಜುನ ವಿಜಯ, ಕುವೆಂಪುರವರ ಶಂಬೂಕ ವಧೆ, ಕಾಳಿದಾಸನ ಅಭಿಜ್ಞಾನ ಶಾಕುಂತಲದಂತಹ ಕೃತಿಗಳು ಬಗ್ಗೆ ಯಾವುದೇ ಖಚಿತ ಐತಿಹಾಸಿಕ ವಿವರಗಳು ಸಿಕ್ಕಿಲ್ಲವಾದ್ದರಿಂದ ಲೇಖಕ ಈ ಅವಧಿಯನ್ನು ತನ್ನ ಕಲ್ಪನೆಯ ಸೃಷ್ಟಿಗೆ ಬಳಸಿಕೊಳ್ಳುವುದು ಸ್ವಾಭಾವಿಕವೆಂದರು.


"ಮಹಾಚೈತ್ರ" ಈ ಹಿಂದೆ ಬಂದಂಥ ಗಿರೀಶ್ ಕಾರ್ನಾಡರ "ತಲೆದಂಡ" ಮತ್ತು ಲಂಕೇಶರ "ಸಂಕ್ರಾಂತಿ"ಗಿಂತ ತುಂಬಾ ಭಿನ್ನವಾದ ಕೃತಿಯೆಂದರು. ತಲೆದಂಡ ಮತ್ತು ಸಂಕ್ರಾಂತಿಯಂಥ ನಾಟಕಗಳು ಶರಣ ಚಳುವಳಿಯ ವಿಫಲತೆಯ ಕಾರಣವನ್ನು ಹುಡುಕಲು ಪ್ರಯತ್ನ ಪಟ್ಟರೆ ಮಹಾಚೈತ್ರದಲ್ಲಿ ಶರಣಚಳುವಳಿಗೆ ಅಂದುಂಟಾದ ವಿಫಲತೆಯ ಬಿಕ್ಕಟ್ಟಿನಿಂದ ಅದು ಕೊನೆಗೊಳ್ಳಲಿಲ್ಲ, ಮತ್ತೆ ಅದು ಮುಂದುವರಿಯುತ್ತದೆ, ಬಸವಣ್ಣನ ನಂತರ ಮಾಚಿದೇವ ಮತ್ತು ಅಪ್ಪಣ್ಣ ಅದನ್ನು ಮುಂದುವರೆಸಿಕೊಂಡು ಹೋಗುವುದರ ಕುರಿತು ಲೇಖಕರು ಮಾತನಾಡಿಸುತ್ತಾರೆ, ಹೀಗಾಗಿ ಇದೊಂದು ಶರಣ ಸಾಹಿತ್ಯದಲ್ಲೇ ಸಕಾರಾತ್ಮಕವಾಗಿರುವ ಕೃತಿಯೆಂದು ನಾಗರಾಜ್ ಅಭಿಪ್ರಾಯಪಟ್ಟರು.

ಮಾತೆ ಮಹಾದೇವಿ ಎತ್ತಿರುವ ಕೆಲವು ಅಂಶಗಳಲ್ಲಿ ಯಾವುದೇ ಹುರುಳಿಲ್ಲವೆಂದು ನಾಗರಾಜ್ ನುಡಿದರು. ಕೃತಿಯ ವಾಸ್ತವಿಕತೆಯನ್ನು ಕಾಪಾಡಲು ಲೇಖಕರು ಅಕ್ಕಮಹಾದೇವಿಯನ್ನು ಹಾಗೆ ಚಿತ್ರಿಸಿದ್ದಾರೆಂದೂ ಮತ್ತು ಅದು ಸಹಜವಾದದ್ದೆ ಎಂದರು.

ಬಸವಣ್ಣನ ನಿರ್ಗಮನದ ನಂತರ ಮಾಚಿದೇವನ ಬಾಯಲ್ಲಿ ಬರುವ ಮಾತುಗಳು ಕೂಡಾ ಅಷ್ಟೇ ಸಹಜವಾದವು, ಬಸವಣ್ಣ ಹೋದರೂ ನಾವು ಸ್ವತಂತ್ರ್ಯವಾಗಿ ಆಲೋಚಿಸಿ ಇಡೀ ಶರಣ ಚಳುವಳಿಯ ಮೂಲ ಆಶಯಗಳನ್ನು ಮುಂದೆ ಕೊಂಡೊಯ್ಯಬೇಕೆಂಬ ಹಿನ್ನೆಲೆಯಲ್ಲಿ ಬಂದ ಮಾತುಗಳೆಂದರು. ಒಂದು ಕಲ್ಯಾಣ ನಾಶವಾದರೇನಂತೆ ಇಂಥ ನೂರಾರು ಕಲ್ಯಾಣಗಳನ್ನು ಕಟ್ಟೋಣವೆಂಬ ಆಶಾದಾಯಕ ಮನೋಧರ್ಮ ಶರಣ ಚಳುವಳಿಯನ್ನು ಸಕಾರಾತ್ಮಕ ದೃಷ್ಟಿಕೋನದಿಂದ ನೋಡಿದ ಮನೋಧರ್ಮವೆಂದರು. ಹೀಗಾಗಿ ಕೃತಿಗೆ ತನ್ನದೇ ಆದ ವಿಶಿಷ್ಟತೆಯಿದೆ ಎಂದರು. ಯಾವುದೇ ಚಳುವಳಿ ಒಂದು ಬಿಕ್ಕಟ್ಟಿನ ಹಂತ ತಲುಪಿಸಿದಾಗ ಅಲ್ಲಿ ಮುನ್ನಾಲ್ಕು ದೃಷ್ಟಿಕೋನಗಳು ಒಡಮೂಡುವುದು ಸಹಜವೆಂದು, ಹಾಗೇಯೇ ಶರಣ ಚಳುವಳಿಯಲ್ಲಿ ತಲೆದೋರಿದ ಅಂದಿನ ಬಿಕ್ಕಟ್ಟಿನ ಬೇರೆ ದೃಷ್ಟಿಕೋನಗಳು ವ್ಯಕ್ತವಾಗಿರಲಿಕ್ಕೆ ಸಾಧ್ಯವೆಂದರು.

ಅಧ್ಯಕ್ಷತೆಯ ವಹಿಸಿದ್ದ ಶರಬಣ್ಣನಾಗಲಾಪೂರ ರವರು ಮಾತನಾಡುತ್ತಾ ಮಾತೆ ಮಹಾದೇವಿಯವರು ಬಸವಣ್ಣನಿಗೆ ದೈವತ್ವ ಆರೋಪಿಸಿ ಸ್ಥಾವರವನ್ನಾಗಿಸುತ್ತಿದ್ದಾರೆ, ಶರಣ ಚಳುವಳಿಯ ಎಲ್ಲ ಸಂಘರ್ಷಗಳನ್ನು ಚರ್ಚೆಯ ತೆಕ್ಕೆಗೆ ತೆಗೆದುಕೊಂಡು ಜೀವಂತವಾಗಿಡುವ ನಾವುಗಳು ಆ ಚಳುವಳಿಯನ್ನು ಜಂಗಮಗೊಳಿಸುತ್ತಿದ್ದೇವೆ ಎಂದು ನುಡಿದರು.

ಕೊನೆಯಲ್ಲಿ ನಾರಾಯಣ ಕಿಲ್ಲೇದ್ ವಂದನಾರ್ಪಣೆ ಮಾಡುವುದರ ಮೂಲಕ ಕಾರ್ಯಕ್ರಮ ಮುಗಿಸಿದರು. ಎಸ್.ಎಫ್.ಐ.ನ ಹನುಮಂತ ಕಾರ್ಯಕ್ರಮ ನಡೆಸಿದರು. ಮತ್ತು ಶಿವಮೂರ್ತಿ ಸ್ವಾಗತ ಕೋರಿದರು.



ಅಧ್ಯಾಯ 18

ಅಂತರ್‌ರಾಷ್ಟ್ರೀಯ ಆಂದೋಲನದಲ್ಲಿ ಸಮಸ್ಯೆಗಳು

ದೇಶದಲ್ಲಿ ಶಕ್ತಿಗಳ ಹೊಸ ಧ್ರುವೀಕರಣ

(ಹಿಂದಿನ ಸಂಚಿಕೆಯಿಂದ)

1988 ಮೇ ತಿಂಗಳಲ್ಲಿ ನಮ್ಮ ಪಕ್ಷದ ಕೇಂದ್ರ ಸಮಿತಿ ಅಂಗೀಕರಿಸಿ 'ನಿರ್ದಿಷ್ಟ ಸೈದ್ಧಾಂತಿಕ ಪ್ರಶ್ನೆಗಳು' ಎಂಬ ಶೀರ್ಷಿಕೆಯ ಗೊತ್ತುವಳಿ 1957ರಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದ ಸಮ್ಮೇಳನದ ನಂತರದಲ್ಲಿ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ ಉದ್ಭವಿಸಿದ್ದ ಮುಖ್ಯ ವಿವಾದಗಳನ್ನು ಪರಿಶೀಲಿಸಿತು. ಹಾಗೂ ನಾನಾ ಹಂತಗಳಲ್ಲಿ ಸಿಪಿಐ(ಎಂ) ತಳೆದಿದ್ದ ನಿಲುವನ್ನು ವಿವರಿಸಿತು.

ಅಕ್ಟೋಬರ್ ಕ್ರಾಂತಿಯ 70ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಗೊರ್ಬಚೆವ್ ಮಂಡಿಸಿದ್ದ ವರದಿ ವೈರುಧ್ಯಗಳು ಸುಧಾರಿಸುತ್ತಿವೆ ಎಂದು ಚಿತ್ರಿಸಲು ಪ್ರಯತ್ನಿಸಿದೆ. ಜನತೆ ಮತ್ತು ಸಾಮ್ರಾಜ್ಯಶಾಹಿ ನಡುವಿನ ಸಂಘರ್ಷವನ್ನು ನಿವಾರಿಸಬೇಕೆಂದು ಪ್ರತಿಪಾದಿಸಿದೆ. ಹಾಗೂ ಕಾರ್ಮಿಕ ವರ್ಗದ ಹಿತಾಸಕ್ತಿಯನ್ನು ಸಾಮ್ರಾಜ್ಯಶಾಹಿ ಮತ್ತು ಬಂಡವಾಳಶಾಹಿಗಳ ಹಿತಾಸಕ್ತಿಯೊಂದಿಗೆ ಹೇಗೆ ಹೊಂದಿರಬಹುದೆಂಬ ಬಗ್ಗೆ ಸಲಹೆ ನೀಡಿದೆ ಎಂದು ನಮ್ಮ ಪಕ್ಷದ ಈ ಗೊತ್ತುವಳಿ ತೋರಿಸಿಕೊಟ್ಟಿತು. ಸಮಾಜವಾದಿ ಮತ್ತು ಸಾಮ್ರಾಜ್ಯಶಾಹಿ ಈ ಎರಡು ಜಗತ್ತುಗಳ ಹೆಚ್ಚುತ್ತಿರುವ ಅಂತರ ಅವಲಂಬನೆ ಮತ್ತು ಸಂಬಂಧಗಳ ಹೊಸ ಪರಿಕಲ್ಪನೆಯನ್ನು ಗೊರ್ಬಚೆವ್ ವರದಿ ಮುಂದಿಟ್ಟಿತು. ಆರ್ಥಿಕ ಸಂಬಂಧಗಳ ಜಾಗತೀಕರಣವು ಸಮಾನತೆಯ ನೆಲೆಯಲ್ಲಿ ಆಗುತ್ತಿಲ್ಲ, ಜಗತ್ತಿನ ಉಳಿದ ಭಾಗವನ್ನು ಇನ್ನಷ್ಟು ಶೋಷಿಸಲು ಅದು ಸಾಮ್ರಾಜ್ಯಶಾಹಿಗಳಿಗೆ ಅವಕಾಶ ಒದಗಿಸಿದೆಯಷ್ಟೆ ಎಂದು ನಮ್ಮ ಪಕ್ಷದ ಗೊತ್ತುವಳಿ ಹೇಳಿತು.

ವೈಜ್ಞಾನಿಕ ಮತ್ತು ತಂತ್ರಜ್ಞಾನ ಕ್ರಾಂತಿಯನ್ನು ಕೂಡ ಮುಂದುವರಿದ ದೇಶಗಳು ಇತರರ ಮೇಲೆ ಮೇಲುಗೈ ಸಾಧಿಸಲು ಸಾಧನವನ್ನಾಗಿ ಬಳಸುತ್ತಿವೆ. ಸಾಮ್ರಾಜ್ಯಶಾಹಿ ದೇಶಗಳೊಂದಿಗೆ ಮೂರನೇ ಜಗತ್ತಿನ ದೇಶಗಳ ಸಂಬಂಧ ಕುರಿತ ಗೊರ್ಬಚೆವ್ ಪರಿಕಲ್ಪನೆಯನ್ನು ಗೊತ್ತುವಳಿ ವಿಶ್ಲೇಷಿಸಿತು. ಅಭಿವೃದ್ಧಿಶೀಲ ದೇಶಗಳು (ಮೂರನೇ ಜಗತ್ತಿನ ದೇಶಗಳು) ಸಾಮ್ರಾಜ್ಯಶಾಹಿ ದೇಶಗಳ ಶೋಷಣೆಯನ್ನು ಸಹಿಸಿಕೊಳ್ಳಬೇಕು. ಶೋಷಣೆಯ ಸಂಬಂಧಗಳನ್ನು ನಾಶಪಡಿಸಲು ಪ್ರಯತ್ನಿಸುವ ಮೂಲಕ ದುರಂತವನ್ನು ಸೃಷ್ಟಿಸಲು ಅವು ಯೋಚಿಸಬಾರದು ಎಂಬುದು ಗೊರ್ಬಚೆವ್ ಅಭಿಪ್ರಾಯವಾಗಿದೆ ಎಂದು ಗೊತ್ತುವಳಿ ಟೀಕಿಸಿತು. 1988 ಆಗಸ್ಟ್‌ನಲ್ಲಿ ನಮ್ಮ ಪಕ್ಷ 'ಸೋವಿಯತ್ ಒಕ್ಕೂಟದಲ್ಲಿನ ವಿದ್ಯಮಾನಗಳು' ಎಂಬ ಶೀರ್ಷಿಕೆಯ ಗೊತ್ತುವಳಿಯನ್ನು ಅಂಗೀಕರಿಸಿತು. ಸಿಪಿಎಸ್‌ಯುನ 19ನೇ ಮಹಾಧಿವೇಶನದ ಚರ್ಚೆಗಳು ಹಾಗೂ ನಿರ್ಣಯಗಳನ್ನು ಗಮನದಲ್ಲಿಟ್ಟುಕೊಂಡು ಇದನ್ನು ಅಂಗೀಕರಿಸಲಾಯಿತು. ಕಮ್ಯುನಿಸ್ಟ್ ಪಕ್ಷಗಳು ಎದುರಿಸುತ್ತಿರುವ ರಾಜಕೀಯ ಸಮಸ್ಯೆಗಳ ಹಿನ್ನೆಲೆಯಲ್ಲಿ ಸೋವಿಯತ್ ಒಕ್ಕೂಟ ಮತ್ತಿತರ ಸಮಾಜವಾದಿ ದೇಶಗಳಲ್ಲಿನ ವಿದ್ಯಮಾನಗಳನ್ನು ಅಧ್ಯಯನಮಾಡಿಕೊಳ್ಳಬೇಕು ಎಂದು ಗೊತ್ತುವಳಿ ಹೇಳಿತು. 1986ರಲ್ಲಿ, ಸಿಪಿಎಸ್‌ಯುನ 27ನೇ ಮಹಾಧಿವೇಶನದ ನಿರ್ಣಯಗಳು ಪ್ರಜಾಪ್ರಭುತ್ವವನ್ನು ಎತ್ತಿ ಹಿಡಿಯುವ ಹಾಗೂ ಆರ್ಥಿಕ ಆಡಳಿತದ ಪುನರ್ ರಚನೆಯ ಕ್ರಮಗಳೆಂದು ಅವನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಬೆಂಬಲಿಸಿತು. ಸಿಪಿಎಸ್‌ಯು 19ನೇ ಸಮ್ಮೇಳನದಲ್ಲಿ ಮಂಡಿಸಲಾದ ನಿರ್ದಿಷ್ಟ ಪ್ರಸ್ತಾವಗಳು ಸಿಪಿಎಸ್‌ಯುನ ಇಡೀ ಹಾದಿಯನ್ನೇ ತಿರಸ್ಕರಿಸಿದಂತಿದ್ದವು. ಸಾಮಾಜಿಕ ಪರಿವರ್ತನೆಯಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದ ಮಾರ್ಗದರ್ಶಿ ಪಾತ್ರ ಹಾಗೂ ಪಕ್ಷದ ನಾಯಕತ್ವ ಪಾತ್ರ ಅತ್ಯಂತ ಅವಶ್ಯವಾದ ಅಂಶಗಳು. ಅದನ್ನೇ ಪಕ್ಷದ 19ನೇ ಸಮ್ಮೇಳನ ತಿರಸ್ಕರಿಸಿತ್ತು.

1988 ಆಗಸ್ಟ್‌ನ ಕೇಂದ್ರ ಸಮಿತಿ ಗೊತ್ತುವಳಿಗಳು ಸೋವಿಯತ್ ಒಕ್ಕೂಟದಲ್ಲಿನ ಅಂದಿನ ತಾಜಾ ವಿದ್ಯಮಾನಗಳನ್ನು ಅಂದಾಜು ಮಾಡಲು ಚೌಕಟ್ಟನ್ನು ಒದಗಿಸಿತು. ಯಾವ ದೇಶದಲ್ಲೇ ಆದರೂ ಸಮಾಜವಾದದ ಮುನ್ನಡೆಯೊಂದಿಗೆ ಆರ್ಥಿಕತೆ ಮತ್ತು ಪ್ರಭುತ್ವ ವನ್ನು (ಸ್ಟೇಟ್) ನಡೆಸುವಲ್ಲಿ ಜನಸಮೂಹದ ಹೆಚ್ಚಿನ ಉಪಕ್ರಮವೂ ಜೊತೆಜೊತೆಯಾಗಿ ಇರಬೇಕು ಎಂದು ಸಿಪಿಐ(ಎಂ) ಮನವರಿಕೆ ಮಾಡಿಕೊಂಡಿತ್ತು ಎಂಬುದನ್ನು ಗೊತ್ತುವಳಿ ಗಮನಿಸಿತ್ತು. ಸಮಾಜವಾದದ ಬೆಳವಣಿಗೆಯೊಂದಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದದ ವಿಜ್ಞಾನಕ್ಕೆ ಬದ್ಧವಾಗಿದ್ದು ಸಮಾಜದ ನಾಯಕ ಶಕ್ತಿಯಾಗಿ ಪಕ್ಷದ ಪಾತ್ರವನ್ನು ಸಂರಕ್ಷಿಸುವಾಗಲೇ ಪ್ರಜಾಪ್ರಭುತ್ವದ ಬೇರುಗಳನ್ನು ಬಲಪಡಿಸುವುದೂ ಅಗತ್ಯ.

ದೇಶೀಯ ರಂಗದಲ್ಲಿ, ಸಾರ್ವಜನಿಕ ರಂಗವನ್ನು ನಾಶಪಡಿಸುವ ನಿಟ್ಟಿನ ರಾಜೀವ್ ಗಾಂಧಿಯವರ ಆರ್ಥಿಕ ನೀತಿಯ ಅಪಾಯವನ್ನು ಜನತೆಗೆ ತೋರಿಸಿಕೊಡುವಲ್ಲಿ ನಮ್ಮ ಪಕ್ಷ ಮುಂಚೂಣಿಯಲ್ಲಿತ್ತು. ಭಾರತೀಯ ಕೈಗಾರಿಕೆಗಳ ಹಿತವನ್ನು ಬಲಿಕೊಡಲು ವಿದೇಶೀ ಬಂಡವಾಳಕ್ಕೆ ರಿಯಾಯಿತಿ ಕೊಡಬೇಕೆಂಬ ಒತ್ತಡಕ್ಕೆ ಬಲಿ ಬೀಳುವುದನ್ನು ಸಿಪಿಐ(ಎಂ) ಪ್ರಬಲವಾಗಿ ವಿರೋಧಿಸಿತು. ಹಾಗೂ ಲೈಸೆನ್ಸ್ ಗಳ ಸಡಿಲಿಕೆ ಬೇಡಿಕೆಗಳನ್ನು ಮುಂದಿಟ್ಟ ವಿಶ್ವ ಬ್ಯಾಂಕ್‌ಗೆ ಶರಣಾಗುವುದರ ವಿರುದ್ಧ ಪಕ್ಷ ಸತತವಾಗಿ ಪ್ರಚಾರ ಮಾಡಿತು. ಪಕ್ಷದ ಉಪಕ್ರಮದ ಮೇರೆಗೆ, ಪಕ್ಷದ ಸದಸ್ಯರು ಕೆಲಸ ಮಾಡುತ್ತಿರುವ ಟ್ರೇಡ್ ಯೂನಿಯನ್‌ಗಳು ಸಾರ್ವಜನಿಕ ರಂಗದ ಕಾರ್ಮಿಕರರು ಅಖಿಲ ಭಾರತ ಮುಷ್ಕರವನ್ನು ಯಶಸ್ವಿಯಾಗಿ ಸಂಘಟಿಸಲಾಯಿತು. ಸಾರ್ವಜನಿಕ ರಂಗವನ್ನು ನಾಶಪಡಿಸುವುದನ್ನು ಪ್ರತಿಭಟಿಸುವುದು ಇದರ ಉದ್ದೇಶವಾಗಿತ್ತು. 20 ಲಕ್ಷ ಕಾರ್ಮಿಕರು ಮತ್ತು ಅಧಿಕಾರಿಗಳು ಇದರಲ್ಲಿ ಪಾಲ್ಗೊಂಡರು. ಕಾರ್ಮಿಕರು, ರೈತರು ಮತ್ತು ಮಧ್ಯಮ ವರ್ಗದವರ ಮೇಲೆ ಹಣದುಬ್ಬರದ ಹೊರೆಯನ್ನು ವರ್ಗಾಯಿಸುವುದನ್ನು ಪ್ರತಿಭಟಿಸಲು ಅನೇಕ ರಾಜ್ಯಗಳಲ್ಲಿ ಸಾಮೂಹಿಕ ಕಾರ್ಯಾಚರಣೆಗಳು ನಡೆದವು. ಈ ಅವಧಿಯಲ್ಲಿ ಸಿಪಿಐ(ಎಂ) ಮತ್ತು ಒಟ್ಟಾರೆಯಾಗಿ ಎಡಪಕ್ಷಗಳು ಹಲವಾರು ಸ್ವತಂತ್ರ ಸಾಮೂಹಿಕ ಹೋರಾಟಗಳನ್ನು ನಡೆಸಿದವು. ಎ.ಐ.ಕೆ.ಎಸ್. ಮತ್ತು ಎ.ಐ.ಎ.ಡಬ್ಲ್ಯುಯು ಸಂಘಟಿಸಿದ ಬೃಹತ್ 'ಜೈಲ್ ಭರೋ', ಎಸ್.ಎಫ್.ಐ.-ಡಿ.ವೈ.ಎಫ್.ಐ.ಗಳ ಭಾರೀ ಅಖಿಲ ಭಾರತ ರ್‍ಯಾಲಿ, ದೆಹಲಿಯಲ್ಲಿನ ಕೋಮುವಾದ ವಿರೋಧಿ ಸಮ್ಮೇಳನ, ನಾಗಪುರದಲ್ಲಿ ಎಡಪಕ್ಷಗಳ ಬೃಹತ್ ಪ್ರದರ್ಶನ, ಕೇರಳದಲ್ಲಿ ಹತ್ತುಲಕ್ಷ ಜನರು ಪಾಲ್ಗೊಂಡಿದ್ದ ಮಾನವ ಸರಪಳಿ ರಚನೆ, ನೀತಿಗೆ ಸಂಬಂಧಿಸಿದ ಅನೇಕ ವಿಷಯಗಳ ಮೇಲೆ ಪಶ್ಚಿಮ ಬಂಗಾಳ ಮತ್ತು ಕೇರಳದಲ್ಲಿ ಜನರನ್ನು ದೊಡ್ಡ ಪ್ರಮಾಣದಲ್ಲಿ ಬೀದಿಗಿಳಿಸಿದ್ದು, ತ್ರಿಪುರಾದಲ್ಲಿ ಮತದಾರರನ್ನು ಭ್ರಷ್ಟಗೊಳಿಸಲು ಕಾಂಗ್ರೆ ನಡೆಸಿದ ಪ್ರಯತ್ನದ ವಿರುದ್ಧ ಜಾಗೃತಿ, ಉತ್ತರ ಪ್ರದೇಶದಲ್ಲಿ ಚಟುವಟಿಕೆ ಆಂದೋಳನಗಳು ಇವುಗಳಲ್ಲಿ ಪ್ರಮುಖವಾಗಿವೆ.

1987 ಡಿಸೆಂಬರ್ 9ರಂದು ಸಿಪಿಐ(ಎಂ) ಮತ್ತು ಎಡಪಕ್ಷಗಳ ನೇತೃತ್ವದಲ್ಲಿ ರೈತರು, ಕೃಷಿ ಕಾರ್ಮಿಕರು ಮತ್ತು ಕೈಗಾರಿಕಾ ಕಾರ್ಮಿಕ ಅಭೂತಪೂರ್ವ ರ್‍ಯಾಲಿ ನಡೆಯಿತು. ಸರಕಾರದ ಆರ್ಥಿಕ ನೀತಿಯಲ್ಲಿ ಬದಲಾವಣೆಯನ್ನು ಈ ರ್‍ಯಾಲಿ ಪ್ರತಿಧ್ವನಿಸಿತು. ಈ ರ್‍ಯಾಲಿಯಿಂದಾಗಿ ರಾಷ್ಟ್ರ ರಾಜಧಾನಿ ಕೆಂಪು ಸಾಗರವಾಗಿ ಪರಿಣಮಿಸಿತ್ತು. ದೇಶದ ವಿವಿಧ ಮೂಲೆಗಳಿಂದ ಹೊರಟ ಆರು ಜಾಥಾಗಳು ದೇಶದಲ್ಲೆಡೆ ಪ್ರಚಾರ ಪ್ರಕ್ಷೋಭೆ ನಡೆಸಿ ದೆಹಲಿ ತಲುಪುವಾಗ ಅದು ಬೃಹತ್ ರ್‍ಯಾಲಿಯಾಗಿ ಪರಿವರ್ತಿತವಾಗಿತ್ತು. ಅದು ಒಂದು ತಿಂಗಳು ಕಾಲ ನಡೆದ ಜಾಥಾ ಪ್ರಚಾರ ಹಾಗೂ ಈ ರ್‍ಯಾಲಿ ಎಡಪಕ್ಷಗಳ ಸ್ವಾತಂತ್ರ್ಯ ಪಾತ್ರದ ಮಹತ್ವವನ್ನು ತೋರಿಸಿಕೊಟ್ಟಿತು. ಮಾತ್ರವಲ್ಲ ಶಕ್ತಿಗಳ ಹೊಸ ಧ್ರುವೀಕರಣಕ್ಕೆ ಕೊಡುಗೆ ನೀಡಿತು.

(ಮುಂದುವರೆಯುವುದು)

ಬಿಜೆಪಿ ಗೆಲುವು ಧ್ವಜಾರೋಹಣಕ್ಕೆ ಆದೇಶವಲ್ಲ

ಹುಬ್ಬಳ್ಳಿ: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹುಬ್ಬಳ್ಳಿ ಧಾರವಾಡದಲ್ಲಿ ಬಿಜೆಪಿ 3 ಸ್ಥಾನಗಳನ್ನು ಗೆದ್ದಿರುವುದು ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜ ಹಾರಿಸಲು ಜನತೆ ನೀಡಿದ ಆದೇಶ ಎಂಬ ಬಿಜೆಪಿಯ ಪ್ರಚಾರವನ್ನು ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಖಂಡಿಸಿ ತಿರಸ್ಕರಿಸಿದೆ. ಚುನಾವಣೆಯ ಫಲಿತಾಂಶವನ್ನು ವಿಮರ್ಶೆ ಮಾಡಲು ನಡೆದ ಎರಡು ದಿನಗಳ ಸಭೆಯಲ್ಲಿ ಸಿಪಿಐ(ಎಂ) ಈ ಕೆಳಗಿನಂತೆ ಅಭಿಪ್ರಾಯಪಟ್ಟಿದೆ.

ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಧ್ವಜಾರೋಹಣದ ವಿವಾದ ಲಾಭ ಪಡೆಯಲು ಭಾರೀ ಪ್ರಯತ್ನ ನಡೆಸಿದ ಬಿಜೆಪಿಗೆ ಹುಬ್ಬಳ್ಳಿ-ಧಾರವಾಡದ ಒಟ್ಟು 4 ವಿಧಾನಸಭಾ ಕ್ಷೇತ್ರಗಳ 5.7 ಲಕ್ಷ ಮತದಾರರ ಪೈಕಿ ಕೇವಲ 22 ಪ್ರತಿಶತ ಮತಗಳು ದೊರಕಿವೆ. ಇಡೀ ಧಾರವಾಡ ಜಿಲ್ಲೆಯಲ್ಲಿ ಬಿಜೆಪಿಗೆ ಸಿಕ್ಕಿರುವ ಮತಗಳು ಕೇವಲ ಶೇ. 16 ಪ್ರತಿಶತ ಮಾತ್ರ. ಹುಬ್ಬಳ್ಳಿ ಧಾರವಾಡ ಜಿಲ್ಲೆಯ 84 ಪ್ರತಿಶತ ಮತದಾರರು ಬಿಜೆಪಿಯನ್ನು ತಿರಸ್ಕರಿಸಿದ್ದಾರೆ. ಧಾರವಾಡ ಜಿಲ್ಲೆಯಲ್ಲಿ 4 ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗಿದ್ದರೂ ಬಿಜೆಪಿಗೆ ಜಿಲ್ಲೆಯಲ್ಲಿ ಮತದಾರರ ಬಹುಮತ ಒಲವು ಇಲ್ಲ ಎಂಬುದು ಈ ಅಂಕಿ ಅಂಶಗಳು ತೋರಿಸಿಕೊಡುವುದರಿಂದ ಬಿಜೆಪಿಗೆ ಈದ್ಗಾ ಮೈದಾನದಲ್ಲಿ ಧ್ವಜಾರೋಹಣಕ್ಕೆ ಜನಾದೇಶ ಲಭಿಸಿದೆ ಎಂದು ಹೇಳಲು ಬಿಜೆಪಿಗೆ ಯಾವುದೇ ನೈತಿಕ ಹಕ್ಕು ಇರುವುದಿಲ್ಲ ಎಂದು ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಅಭಿಪ್ರಾಯಪಟ್ಟಿದೆ.

ಸರ್ವಸಮ್ಮತಿ ಪರಿಹಾರಕ್ಕೆ ಸರ್ಕಾರದ ಪ್ರಯತ್ನ

ದೇವೇಗೌಡರ ನೇತೃತ್ವದ ಜನತಾದಳ ಸರ್ಕಾರವು ವಿವಾದಕ್ಕೆ ಸರ್ವಸಮ್ಮತ ಪರಿಹಾರವನ್ನು ಕಂಡು ಹುಡುಕಲು ಗಮನ ನೀಡಲಾರಂಭಿಸಿದ್ದನ್ನು ಸ್ವಾಗತಿಸುತ್ತಾ ಆದರೆ ಯಾವುದೇ ತೀರ್ಮಾನವು ದೇಶದ ಸರ್ವೋಚ್ಛ ನ್ಯಾಯಾಲಯದ ಈಗ ಜಾರಿಯಲ್ಲಿರುವ ಆದೇಶಕ್ಕೆ ವಿರುದ್ಧವಾಗಲು ಸಾಧ್ಯವಿಲ್ಲ. ವಿವಾದಿತ ಸ್ಥಳ ಅಂಜುಮನ್-ಎ-ಇಸ್ಲಾಂ ಸಂಸ್ಥೆಗೆ ಸೇರಿದ್ದು ಎಂದು ಒಪ್ಪಿಕೊಂಡು ಸರ್ವೋಚ್ಛ ನ್ಯಾಯಾಲಯದಲ್ಲಿ ಬಿಜೆಪಿ ಬೆಂಬಲಿಗರೇ ಹೂಡಿರುವ ಮೊಕದ್ದಮೆಗಳನ್ನು ಹಿಂತೆಗೆದುಕೊಳ್ಳಲು ಬಿಜೆಪಿ ಮುಂದಾದಲ್ಲಿ ಅಲ್ಲಿ ಅಂಜುಮನ್-ಎ-ಇಸ್ಲಾಂ ಸಂಸ್ಥೆಯವರಿಗೆ ಧ್ವಜಾರೋಹಣ ಮಾಡಿಕೊಡಲು ಯಾವುದೇ ಅಡ್ಡಿ ಇಲ್ಲದಂತಾಗುವುದು ಎಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಅಭಿಪ್ರಾಯಪಟ್ಟಿದೆ.

ಅದೊಂದು ಸಾರ್ವಜನಿಕ ಸ್ಥಳವೆಂದು ಬಿಜೆಪಿಯ ನಿಲುಮೆಯಾದರೆ ಸರ್ವೋಚ್ಛ ನ್ಯಾಯಾಲಯದ ತೀರ್ಪಿಗೆ ಎಲ್ಲರೂ ಕಾಯಬೇಕಾಗುತ್ತದೆ. ಯಥಾಸ್ಥಿತಿಯನ್ನು ಕಾಯ್ದುಕೊಂಡು ಹೋಗಲು ಸರ್ವೋಚ್ಛ ನ್ಯಾಯಾಲಯದ ಆದೇಶ ಇರುವಾಗ ಇಲ್ಲಿ ಸರ್ಕಾರವೇ ಆಗಲೀ ಮಹಾನಗರ ಸಭೆಯವರಾಗಲೀ, ಶಾಸಕರಾಗಲೀ, ಮುಸ್ಲಿಂ ಮುಖಂಡರೇ ಆಗಲಿ, ಧ್ವಜಾರೋಹಣ ಮಾಡಲು ಪ್ರಯತ್ನಿಸುವುದು ನ್ಯಾಯಾಲಯದ ನಿಂದನೆ ಆಗುತ್ತದೆ ಎಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಅಭಿಪ್ರಾಯಪಟ್ಟಿದೆ.

ನಗರದಲ್ಲಿ ಶಾಂತಿಯನ್ನು ನೆಲೆಗೊಳಿಸುವ ದೃಷ್ಟಿಯಿಂದ ಬಿಜೆಪಿಯ ಧ್ವಜಾರೋಹಣ ತನ್ನ ಹಠಮಾರಿ ಧೋರಣೆಯನ್ನು ಕೈ ಬಿಟ್ಟು ನಗರದ ಅಭಿವೃದ್ಧಿಗಾಗಿ ರಚನಾತ್ಮಕ ಕಾರ್ಯಗಳಲ್ಲಿ ತೊಡಗುವುದು ಹೆಚ್ಚು ಸೂಕ್ತವಾದೀತು ಎಂದು ಅಭಿಪ್ರಾಯಪಡುತ್ತ ನಗರದಲ್ಲಿ ಧ್ವಜಾ ಹಾರಿಸುವ ಹೆಸರಿನಲ್ಲಿ ಮೇಲಿಂದ ಮೇಲೆ ಕೋಮು ಗಲಭೆ ಪ್ರಚೋದನೆ ನೀಡುವುದರ ವಿರುದ್ಧ ಎಲ್ಲ ಶಾಂತಿಪ್ರಿಯ ಜನತೆ ಧ್ವನಿ ಎತ್ತಲು ಮುಂದಾಗಬೇಕೆಂದು ಜಿಲ್ಲಾ ಸಮಿತಿ ಮನವಿ ಮಾಡಿದೆ.

ಜನತಾದಳಕ್ಕೆ ಜಯ:- ಧಾರವಾಡ ಜಿಲ್ಲೆಯಲ್ಲಿ 18 ವಿಧಾನಸಭಾ ಸ್ಥಾನಗಳ ಪೈಕಿ 10 ಸ್ಥಾನಗಳನ್ನು ಜನತಾದಳ ಪಡೆದುಕೊಳ್ಳಲು ಸಾಧ್ಯವಾಗಿರುವುದನ್ನು ಸಿಪಿಐ(ಎಂ) ಸ್ವಾಗತಿಸಿದೆ. ಜಿಲ್ಲೆಯಲ್ಲಿ ಹಾಗೂ ಇಡೀ ರಾಜ್ಯದಲ್ಲಿ ಕಾಂಗ್ರೆ ಪಕ್ಷಕ್ಕೆ ಉಂಟಾದ ಹೀನಾಯ ಸೋಲಿಗೆ ಅವರ ಹಿಂದಿನ 5 ವರ್ಷಗಳ ದುರಾಡಳಿತ, ಭ್ರಷ್ಟಾಚಾರ, ಅಧಿಕಾರಕ್ಕಾಗಿ ನಡೆದ ಕಿತ್ತಾಟ ಕಾರಣವಾಗಿದೆ. ಅಲ್ಲದೆ, ಬೆಲೆ ಏರಿಕೆ, ಸಬ್ಸಿಡಿ ರದ್ಧತಿ, ಖಾಸಗೀಕರಣ, ನಿರುದ್ಯೋಗದ ಹೆಚ್ಚಳಕ್ಕೆ ಕಾರಣವಾದ ಕೇಂದ್ರ ಕಾಂಗ್ರೆ ಸರಕಾರದ ಆರ್ಥಿಕ ನೀತಿಯು ಕಾರಣವಾಗಿದೆ ಎಂದು ಸಿಪಿಐ(ಎಂ) ಅಭಿಪ್ರಾಯಪಟ್ಟಿದೆ. ಕೋಮುವಾದದ ಬೆಳವಣಿಗೆಯನ್ನು ತಡೆಯಲು ಕಾಂಗ್ರೆ ಪಕ್ಷದ ಸರಕಾರ ಪ್ರಾಮಾಣಿಕ ಪ್ರಯತ್ನ ಮಾಡದೇ ಹೋಗಿರುವುದರಿಂದಲೂ ಜನತೆ ದೊಡ್ಡ ಪ್ರಮಾಣದಲ್ಲಿ ಕಾಂಗ್ರೆಯನ್ನು ತಿರಸ್ಕರಿಸಿದೆ ಎಂದು ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ತೀರ್ಮಾನಿಸಿದೆ.

ಕೇಂದ್ರ ಸರಕಾರದ ವಿನಾಶಕಾರಿ ಆರ್ಥಿಕ ನೀತಿಯ ವಿರುದ್ಧ ಮತ್ತು ಕೋಮುವಾದದ ವಿರುದ್ಧ ಎಡಪಕ್ಷಗಳು ಕಳೆದ ಮೂರು ವರ್ಷಗಳಲ್ಲಿ ನಡೆಸುತ್ತ ಬಂದಿರುವ ಪ್ರಚಾರ ಪ್ರಕ್ಷೋಭೆ ಹಾಗೂ ಚಳುವಳಿಗಳು, ರಾಜ್ಯದ ಜನತೆ ಕಾಂಗ್ರೆ ಅನ್ನು ಮತ್ತು ಬಿಜೆಪಿಯನ್ನು ತಿರಸ್ಕರಿಸಿ ಜನತಾದಳವನ್ನು ಆಯ್ಕೆ ಮಾಡುಲು ತುಂಬಾ ಸರಕಾರಿಯಾಗಿದೆ. ಈಗ ಅಧಿಕಾರಕ್ಕೆ ಬಂದಿರುವ ಜನತಾದಳವು ಪರಸ್ಪರ ಕಚ್ಚಾಡುವುದನ್ನು ನಿಲ್ಲಿಸಿ ಕೇಂದ್ರದ ಜನ ವಿರೋಧಿ ಆರ್ಥಿಕ ನೀತಿಯನ್ನು ಬಲವಾಗಿ ವಿರೋಧಿಸಲು ಮತ್ತು ಕೋಮುದದ ವಿರುದ್ಧ ಹೋರಾಡಲು ಹಿಂದೇಟು ಹಾಕದೇ ಜನತೆಗೆ ಕಾಂಗ್ರೆಗಿಂತ ಭಿನ್ನವಾದ ಆಡಳಿತವನ್ನು ನೀಡಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಗಮನ ನೀಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಡಿಸೆಂಬರ್ 24 ಮತ್ತು 25, 1994 ರಂದು ಎರಡು ದಿನಗಳ ಸಭೆಯ ಅಧ್ಯಕ್ಷತೆಯನ್ನು ಪ್ರೊ. ವಿ.ಎನ್. ದೇಶಪಾಂಡೆ ಅವರು ವಹಿಸಿದ್ದು, ಜಿಲ್ಲಾ ಸಮಿತಿ ಕಾರ್ಯದರ್ಶಿ ನಿತ್ಯಾನಂದಸ್ವಾಮಿ, ಸದಸ್ಯರಾದ ಸಿ.ಆರ್.ಭಟ್, ವಿ.ಎನ್. ಹಳಕಟ್ಟಿ, ಪಕೀರಪ್ಪ, ಹೋತನಹಳ್ಳಿ, ಎಂ.ಎಚ್. ಮುಲ್ಲಾ, ಎಸ್.ಎಚ್.ಕಪ್ಪಣ್ಣನವರು, ಡಿ.ಜಿ. ಗೋಂದಕರ್, ಎಲ್.ಎಸ್.ನಾಯಕ, ವಿ.ಪಿ.ಕುಲಕರ್ಣಿ ಹಾಗೂ ಬಸವಂತಪ್ಪ ಹಾಜರಿದ್ದರು.

ವಿದ್ಯಾರ್ಥಿ ಸಮೂಹದ ಸಮಸ್ಯೆಗಳ ಪರಿಹಾರ ಒತ್ತಾಯಿಸಿ ಹೊಸ ಸರ್ಕಾರಕ್ಕೆ ಎಸ್.ಎಫ್.ಐ. ಮನವಿ

ಭಾರತ ವಿದ್ಯಾರ್ಥಿ ಫೆಡರೇಷನ್ ರಾಜ್ಯ ಸಮಿತಿಯ ನಿಯೋಗವೊಂದು ಜನವರಿ 2 ರಂದು ಮುಖ್ಯಮಂತ್ರಿಗಳಿಗೆ ರಾಜ್ಯದ ವಿದ್ಯಾರ್ಥಿ ಸಮೂಹದ ಸಮಸ್ಯೆಗಳನ್ನು ಕುರಿತಂತೆ ಒಂದು ಮನವಿ ಅರ್ಪಿಸಿ ಸಮಸ್ಯೆಗಳನ್ನು ಪರಿಗಣಿಸಬೇಕೆಂದು ಒತ್ತಾಯಿಸಿದೆ.

ಕಾಂಗ್ರೆ ಸರ್ಕಾರದ ವಿದ್ಯಾರ್ಥಿ-ವಿರೋಧಿ, ಶಿಕ್ಷಣ-ವಿರೋಧಿ ನೀತಿಗಳನ್ನು ರಾಜ್ಯದ ವಿದ್ಯಾರ್ಥಿ ಸಮುದಾಯ ದೊಡ್ಡ ಪ್ರಮಾಣದಲ್ಲಿ ವಿರೋಧಿಸಿದೆ, ಈ ಕಾರಣಕ್ಕಾಗಿ ಎಸ್.ಎಫ್.ಐ. ಇತ್ತೀಚಿನ ವಿಧಾನಸಭಾ ಚುನಾವಣೆಗಳಲ್ಲಿ ಎಡಪಕ್ಷಗಳು ಹಾಗೂ ಜನತಾದಳದ ಅಭ್ಯರ್ಥಿಗಳನ್ನು ಬೆಂಬಲಿಸಿತ್ತು ಎಂದು ನೆನಪಿನಿಂದ ಎಸ್.ಎಫ್.ಐ. ಮುಖಂಡರು ಹೊಸ ಜನತಾದಳ ಸರಕಾರ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸುತ್ತದೆ ಎಂಬ ಭರವಸೆ ವ್ಯಕ್ತಪಡಿಸಿದರು.

ಮಾತೃಭಾಷಾ"ಶಿಕ್ಷಣ ಮಾಧ್ಯಮ, ಪ್ರಾಥಮಿಕ ಶಿಕ್ಷಣ ಕಡ್ಡಾಯವಾಗಿ ಮಾತೃಭಾಷೆಯಲ್ಲಿ, ಶಿಕ್ಷಕರ ಹುದ್ದೆಗಳ ಭರ್ತಿ, ಅರೆಕಾಲಿಕ ಕಾಲೇಜು ಉಪನ್ಯಾಸಕರ ಖಾಯಂ, ಶಿಕ್ಷಣದ ಖಾಸಗೀಕರಣಕ್ಕೆ ತಡೆ, ಶಾಲಾ-ಕಾಲೇಜುಗಳಲ್ಲಿ ಪ್ರಜಾಪ್ರಭುತ್ವೀಕರಣ, ಪರೀಕ್ಷಾ ವ್ಯವಸ್ಥೆಯಲ್ಲಿ ಭ್ರಷ್ಟಾಚಾರಕ್ಕೆ ತಡೆ ಮುಂತಾದ ಶೈಕ್ಷಣಿಕ ಸಮಸ್ಯೆಗಳಲ್ಲದೆ ವಿದ್ಯಾರ್ಥಿಗಳ ನಿರ್ದಿಷ್ಟ ಸಮಸ್ಯೆಗಳನ್ನು ಸರಕಾರದ ಗಮನಕ್ಕೆ ತರಲಾಯಿತು.

ಬಸ್ ಪಾಸ್ ಕೂಪನ್ ವ್ಯವಸ್ಥೆಯನ್ನು ರದ್ದುಗೊಳಿಸಬೇಕು, ಕಾಲೇಜು ವಿದ್ಯಾರ್ಥಿಗಳಿಗಿರುವ ರೀತಿಯಲ್ಲೇ ಹೈಸ್ಕೂಲ್ ವಿದ್ಯಾರ್ಥಿಗಳಿಗೂ ಬಸ್ ಪಾಸ್ ಗುರುತಿನ ಚೀಟಿಯನ್ನು ನೀಡಬೇಕು. ಪರಿಶಿಷ್ಟ ಜಾತಿ- ಪಂಗಡ ಮತ್ತು ಹಿಂದುಳಿದ ವರ್ಗಗಳ ಅಭಿವೃದ್ಧಿಯ ದೃಷ್ಟಿಯಲ್ಲಿ ಹಾಸ್ಟೇಲ್‌ಗಳ ಸಮಸ್ಯೆಯನ್ನು ಬಗೆಹರಿಸಬೇಕು. ವಿದ್ಯಾರ್ಥಿಗಳು ಶುಲ್ಕದಲ್ಲಿ ರಿಯಾಯಿತಿಯನ್ನು ಪಡೆಯಲು ಆದಾಯ ಮಿತಿಯನ್ನು ರೂ. 10,000 ಕ್ಕೆ ಹೆಚ್ಚಿಸಬೇಕು. ಶಿಕ್ಷಣಕ್ಕೆ ಹೆಚ್ಚಿನ ಹಣವನ್ನು ನೀಡಬೇಕು. ರಾಜ್ಯ ಸರ್ಕಾರ ತನ್ನ ಬಜೆಟ್ ನಲ್ಲಿ ಶೇ. 25 ರಷ್ಟು ಮೀಸಲಿಡಬೇಕು. ಪ್ರೌಢ ಶಿಕ್ಷಣ ಹಂತದಿಂದಲೇ ವೈಜ್ಞಾನಿಕ ಮತ್ತು ವೃತ್ತಿಪರ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕು. ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ನೀಡಲು ವ್ಯಾಪಕ ಕ್ರಮಗಳನ್ನು ಜಾರಿಗೆ ತರಬೇಕು. ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಪೂರ್ಣ ಪ್ರಮಾಣದಲ್ಲಿ ಪ್ರಾರಂಭ ಮಾಡುವ ಹಾಗೂ ಆ ಮೂಲಕ ಸಾವಿರಾರು ಉದ್ಯೋಗಗಳನ್ನು ಸೃಷ್ಟಿಸುವಂತಹ ಯೋಜನೆಗಳತ್ತ ಗಮನಹರಿಸಬೇಕು. ಉದ್ಯೋಗವಿಲ್ಲದ ವಿದ್ಯಾವಂತರಿಗೆ ನಿರುದ್ಯೋಗ ಭತ್ಯೆ ನೀಡಬೇಕು. ಎಂದು ಮನವಿ ಒತ್ತಾಯಿಸಿದೆ.

ಐಟಿಐ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಪರಿಹರಿಸುವಂತೆಯೂ ಒತ್ತಾಯಿಸಲಾಯಿತು.

ಮೈಸೂರು ವಿಶ್ವ ವಿದ್ಯಾಯದ ಹೊಸ ಶಿಕ್ಷಣ ನೀತಿಯನ್ನು ವಿರೋಧಿಸಿ ಮದ್ದೂರು ತಾಲೂಕಿನ ಭಾರತೀ ಕಾಲೇಜಿನ ವಿದ್ಯಾರ್ಥಿಗಳು ನಡೆಸಿದ ಹೋರಾಟದ ಸಂದರ್ಭದಲ್ಲಿ ಕಿಡಿಗೇಡಿಗಳು ಉಂಟುಮಾಡಿದ ಗಲಭೆಗೆ 22 ಜನ ಅಮಾಯಕ ವಿದ್ಯಾರ್ಥಿಗಳ ಮೇಲೆ ಹಾಕಲಾಗಿರುವ ಪೋಲೀಸ್ ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು. ಅದೇ ರೀತಿ ಕಾಂಗ್ರೆಸ್ ಸರ್ಕಾರದ ಹೊಸ ಶಿಕ್ಷಣ ನೀತಿ ಹಾಗೂ ಆರ್ಥಿಕ ನೀತಿಯನ್ನು ವಿರೋಧಿಸಿ ರಾಜ್ಯಾದ್ಯಂತ "ಕಾನೂನು ಭಂಗ ಚಳುವಳಿ" ನಡೆಸಿದ ವಿದ್ಯಾರ್ಥಿ-ಯುವಜನರ ಮೇಲೆ ಹಾಕಿರುವ ಕೇಸುಗಳನ್ನು (ವಿದ್ಯಾರ್ಥಿಗಳನ್ನು ಜೈಲಿಗೂ ಸಹ ಹಾಕಲಾಗಿತ್ತು) ಹಿಂತೆಗೆದುಕೊಳ್ಳಬೇಕು ಎಂದು ಮನವಿ ಹೇಳಿದೆ.

ಹಿಂದಿನ ಸರ್ಕಾರ ತಂದಿದ್ದ ಗೊಂದಲಕಾರಿ ಮೀಸಲಾತಿ ನೀತಿಯನ್ನು ಜಾರಿ ಮಾಡಬಾರದು. ಎಲ್ಲ ಜನವಿಭಾಗಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ವೈಜ್ಞಾನಿಕವಾದ ಮೀಸಲಾತಿ ನೀತಿಯನ್ನು ಅಳವಡಿಸಬೇಕು. ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಬದಲಾವಣೆಗಳನ್ನು ತರಬೇಕಾದಾಗ ವಿದ್ಯಾರ್ಥಿ ಸಂಘಟನೆಗಳ ಅಭಿಪ್ರಾಯ ಕೇಳಬೇಕು.

ಹಾಗೂ ವಿಶ್ವ ವಿದ್ಯಾಲಯಗಳ ದಕ್ಷತೆಯನ್ನು ಹೆಚ್ಚಿಸಬೇಕು ಮತ್ತು ವಿ.ವಿ. ಶಿಕ್ಷಣವನ್ನು ಸ್ಥಳೀಯ ಅಗತ್ಯಗಳಿಗೆ ಸ್ಪಂದಿಸುವಂತೆ ರೂಪೀಕರಿಸಬೇಕು ಎಂದು ಮನವಿ ಒತ್ತಾಯಿಸಿದೆ.

ಎಸ್.ಎಫ್.ಐ. ನಿಯೋಗದಲ್ಲಿ ರಾಜ್ಯ ಎಸ್.ಎಫ್.ಐ ಅಧ್ಯಕ್ಷ ಶಾಂತಾರಾಮ್ ನಾಯಕ್, ಕಾರ್ಯದರ್ಶಿ ಪ್ರಕಾಶ್ ಕೆ., ರಾಜ್ಯ ಸಮಿತಿ ಸದಸ್ಯರುಗಳಾದ ಮೀನಾಕ್ಷಿ ಸುಂದರಂ ಮತ್ತು ಲೀಲಾ ಇದ್ದರು.

ಅಗರಬತ್ತಿ ಕಾರ್ಮಿಕರ ಸಭೆ

ಬೆಂಗಳೂರು ಜಿಲ್ಲಾ ಅಗರಬತ್ತಿ ಕಾರ್ಮಿಕರ ಸಂಘದ ಸದಸ್ಯರು ದಿನಾಂಕ 30-12-1994 ರಂದು ಶ್ರೀರಾಮಪುರದಲ್ಲಿರುವ ಶಾಲಮ್ಮ ಕಲ್ಯಾಣ ಮಂಟಪದಲ್ಲಿ ಕಾಂ. ಶೇಲ್ವರಾಜುರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಅಗರಬತ್ತಿ ಕಾರ್ಮಿಕರು ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಚರ್ಚಿಸಿ ಕೆಳಕಂಡ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

1) ಅಗರಬತ್ತಿ ಕಾರ್ಮಿಕರಿಗೆ ಸಾವಿರ ಕಡ್ಡಿಯಕಟ್ಟು ಒಂದಕ್ಕೆ ರೂ.11.50 ಕನಿಷ್ಠ ಕೂಲಿ ನಿಗದಿಪಡಿಸಬೇಕು.

2) ಅಗರಬತ್ತಿ ಕಾರ್ಮಿಕರಿಗೆ ಸರ್ಕಾರ ನಿಗದಿ ಪಡಿಸಿರುವ ಕನಿಷ್ಠ ಕೂಲಿಯನ್ನು ಕೂಡಲೇ ಜಾರಿ ಮಾಡಬೇಕು ಹಾಗೂ ಎಲ್ಲಾ ಅಗರಬತ್ತಿ ಕಾರ್ಮಿಕರಿಗೆ ಪಾಸ್ ಬುಕ್ ಗಳನ್ನು ಮತ್ತು ತುಟ್ಟಿ ಭತ್ಯೆ ನೀಡಬೇಕು.

3) ಅಗರಬತ್ತಿ ಕಾರ್ಮಿಕರ ಬೇಡಿಕೆಗಳನ್ನು ಜಾರಿಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿ ಜನವರಿ ತಿಂಗಳ ಕಡೆ ವಾರದಲ್ಲಿ ಫ್ಯಾಕ್ಟರಿಗಳ ಮುಂದೆ ಸಾಮೂಹಿಕ ಧರಣಿ ನಡೆಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಈ ಸಭೆಯಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ. ಎಸ್. ಸೂರ್ಯನಾರಾಯಣರಾವ್ ಹಾಗೂ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ. ನಾಯರ್‌ರವರುಗಳು ಮಾತನಾಡಿದರು.

ಸಿಪಿಐ(ಎಂ) ಬಿಜಾಪುರ ಜಿಲ್ಲಾ ಸಮ್ಮೇಳನ ಫೆಬ್ರವರಿಯಲ್ಲಿ

ಸಿಪಿಐ(ಎಂ) ಬಿಜಾಪುರ ಜಿಲ್ಲಾ ಸಮ್ಮೇಳನವನ್ನು 1995 ಫೆಬ್ರವರಿ 3,4 ರಂದು ನಡೆಸಲಾಗುವುದು ಎಂದು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ. ಭೀಮಶೀ ಕಲಾದಗಿ ಹಾಗೂ ಕಾಂ. ಅಣ್ಣಾರಾಯ ಈಳಗೇರಿ ಅವರು ತಿಳಿಸಿದ್ದಾರೆ.

ವಿಜಾಪೂರ ನಗರದಲ್ಲಿಯೇ ನಡೆಯಲಿರುವ ಈ ಜಿಲ್ಲಾ ಸಮ್ಮೇಳನದಲ್ಲಿ ಕೇಂದ್ರ ಕಾಂಗ್ರೆಸ್ ಸರಕಾರದ ಹೊಸ ಆರ್ಥಿಕ ನೀತಿ ಬೋಫೋರ್ಸ್ ಹಗರಣ, ಶೇರು ಹಗರಣ, ಸಕ್ಕರೆ ಹಗರಣದಂತ ಉಚ್ಚ ಮಟ್ಟದ ಭ್ರಷ್ಟಾಚಾರ, ಬೆಲೆ ಏರಿಕೆ ಬಿಜೆಪಿಯ ಕೋಮುವಾದಗಳ ವಿರುದ್ಧ ಹೋರಾಟಗಳ ವಿಷಯಗಳ ಜೊತೆಗೆ ಸ್ಥಳೀಯ ಸಮಸ್ಯೆಗಳಾದ ಕೃಷ್ಣಾ ನೀರಾವರಿ ಯೋಜನೆ ತೀವ್ರ ಮುಗಿಸುವಿಕೆ, ಕುಡಿಯುವ ನೀರಿನ ಸಮರ್ಪಕ ಪೂರೈಕೆ, ಸೋಲ್ಲಾಪುರ-ಗದಗ ರೈಲ್ವೇ ಬ್ರಾಡ್ ಗೇಜ್ ರಚನೆ ಶಾಶ್ವತ ಬರಗಾಲ ಪರಿಹಾರ ಕಾಮಗಾರಿ ಮುಂತಾದ ವಿಷಯಗಳನ್ನು ಚರ್ಚಿಸಲಾಗುವುದು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೃಷ್ಣಾ ಪ್ರಾಧಿಕಾರದ ಪುನರ್‌ಪರಿಶೀಲನೆಗೆ ಒತ್ತಾಯ

ಕೃಷ್ಣಾ ಪ್ರಾಧಿಕಾರದಡಿಯಲ್ಲಿ ಕೃಷ್ಣಾ ನದಿಯ ಜೊತೆಗೆ ಘಟಪ್ರಭಾ, ಮಲಪ್ರಭಾ ನದಿಗಳನ್ನು ಜೋಡಿಸಿ ಕೃಷ್ಣಾ ಯೋಜನೆಗೆ ಬರುವ ಜಾಗತಿಕ ಬ್ಯಾಂಕಿನ ಸಾಲಹಣವನ್ನು ಅವುಗಳಿಗೆ ಖರ್ಚು ಮಾಡುವುದರಿಂದ ಕೃಷ್ಣಾ ಯೋಜನೆಯ ಅಪೂರ್ಣವಾಗುವ ಸಂಭವ ವಿದ್ದು ಈ ಬಗ್ಗೆ ಸರಕಾರವು ಕೂಡಲೇ ಪುನರ್ ಪರಿಶೀಲಿಸಿ ಕೃಷ್ಣಾ ಯೋಜನೆಗೆ ಬರುವ ಹಣವನ್ನು ಅದಕ್ಕೆ ಮಾತ್ರ ಖರ್ಚು ಮಾಡಬೇಕೆಂದು ಸಿಪಿಐ(ಎಂ) ಜಿಲ್ಲಾ ಸಮಿತಿ ಸಭೆಯು ಸರ್ಕಾರವನ್ನು ಒತ್ತಾಯಿಸಿದೆ. ಈಗಾಗಲೇ ಕೈ ಬಿಡಲು ನಿರ್ಧರಿಸಿರುವ ೪೪೦ ಇಂಜಿನೀಯರುಗಳ ಕೆಲಸವನ್ನು ಮುಂದುವರಿಸುವಂತೆ ಕ್ರಮ ಕೈಗೊಂಡು ಕೃಷ್ಣಾ ಯೋಜನೆಯ ೨೦೦೦ನೇ ಇಸ್ವಿಯೊಪ್ಪತ್ತಿಗೆ ಪೂರ್ಣ ಗೊಳಿಸಬೇಕೆಂದು ಸಭೆಯು ಆಗ್ರಹಿಸಿದೆ. ರಾಜ್ಯ ಕಾರ್ಯದರ್ಶಿ ಮಂಡಳಿಯ ಸಸದಸ್ಯರಾದ ಕಾಂ. ಎನ್.ಕೆ. ಉಪಾಧ್ಯಾಯರು ಪಾಲುಗೊಂಡಿದ್ದ ಸಭೆಗೆ ಕಾಂ. ಸಾಯಬಣ್ಣ ಹುಂಡಿಗನೂರ ಅಧ್ಯಕ್ಷತೆ ವಹಿಸಿದ್ದರು.

ನೀರಿನ ದರ ಏರಿಕೆ ನಿಲ್ಲಿಸಲು ಪ್ರತಿಭಟನೆ

ಜಲಮಂಡಳಿಯು ಜನವರಿ 1ರಿಂದ ನೀರಿನ ದರ ಹೆಚ್ಚಿಸುವ ಕ್ರಮವನ್ನು ಪ್ರತಿಭಟಿಸಿ ಡಿಸೆಂಬರ್ 29ರಂದು ಕಾವೇರಿ ಭವನದ ಜಲಮಂಡಳಿ ಎದುರು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಪ್ರತಿಭಟನೆ ನಡೆಸಿ ಜಲಮಂಡಳಿ ಅಧ್ಯಕ್ಷರಿಗೆ ಮನವಿ ಸಲ್ಲಿಸಿದೆ.

ಈ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಡಿ.ವೈ.ಎಫ್.ಐ. ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ಮಾತನಾಡಿ ಬೆಲೆ ಏರಿಕೆ ವಿರೋಧಿಸಿ ಜನತಾದಳ ಸರ್ಕಾರಕ್ಕೆ ರಾಜ್ಯದ ಜನರು ಮಾನ್ಯತೆ ನೀಡಿದ್ದಾರೆ. ಅದನ್ನು ಮರೆಯದೆ ನೀರಿನ ದರ ಏರಿಕೆ ಕೈಬಿಡಬೇಕೆಂದರು.

ಜಿಲ್ಲಾ ಡಿ.ವೈ.ಎಫ್.ಐ. ಅಧ್ಯಕ್ಷರಾದ ಕಾಂ. ಅಶೋಕನ್, ಎಸ್.ಎಫ್.ಐ. ಜಿಲ್ಲಾ ಕಾರ್ಯದರ್ಶಿ ರಾಮಕೃಷ್ಣ ಮಾತನಾಡಿ ಇಂತಹ ಜನವಿರೋಧಿ ನೀತಿಯನ್ನು ಖಂಡಿಸಿದರಲ್ಲದೆ ನೀರಿನ ದರ ಇಳಿಸದಿದ್ದರೆ ವಿದ್ಯಾರ್ಥಿ -ಯುವಜನರು ಒಗ್ಗೂಡಿ ಪ್ರಬಲ ಚಳುವಳಿ ನಡೆಸುವುದಾಗಿ ಎಚ್ಚರಿಸಿದರು.

ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಪ್ರಕಾಶ್ ಮಾತನಾಡಿ -ಕೇಂದ್ರದ ಹೊಸ ರ್ಥಿಕ ನೀತಿಗೆ ಸಹಕರಿಸುವುದಾಗಿ ಮುಖ್ಯಮಂತ್ರಿ ದೇವೇಗೌಡರು ಹೇಳಿರುವುದು ಖಂಡನೀಯವೆಂದರು. ಹೊಸ ಆರ್ಥಿಕ ನೀತಿಯ ಫಲವಾಗಿಯೇ ಈ ನೀರಿನ ದರ ಏರಿಸುತ್ತಿದ್ದಾರೆ. ಇಂತಹ ನೀತಿಯ ವಿರುದ್ಧ ವಿದ್ಯಾರ್ಥಿ ಯುವಜನರು ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಕೊನೆಯಲ್ಲಿ ಡಿ.ವೈ.ಎಫ್.ಐ. ಜಿಲ್ಲಾ ಖಜಾಂಚಿ ಕೆ. ಶ್ರೀನಿವಾಸ್ ವಂದಿಸಿದರು.

ಸುದ್ದಿ ಸಮಾಚಾರ

ಕಾಂ. ಸುಂದರೇಶ್ ನಿಧನಕ್ಕೆ ಸಿ.ಪಿ.ಐ(ಎಂ) ಶೋಕ

ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ರಾಜ್ಯ ಸಮಿತಿ ಕಾರ್ಯದರ್ಶಿಮಂಡಳಿ ಸಿಪಿಐ ಪಕ್ಷದ ಪ್ರಮುಖ ಕಾರ್ಮಿಕ ಮುಂದಾಳಾದ ಕಾಂ ಬಿ.ಕೆ. ಸುಂದರೇಶರವರು ರೇಲ್ವೇ ಅಪಘಾತಕ್ಕೆ ಒಳಗಾಗಿ ಮೃತಪಟ್ಟ ಸುದ್ದಿ ಕೇಳಿ ದುಃಖಕ್ಕೆ ಒಳಗಾಗಿದೆ. ಕಾಂ ಬಿ.ಕೆ. ಸುಂದರೇಶ್ ಈಗಾಗಲೇ ಕಾರ್ಮಿಕ ಕ್ಷೇತ್ರದಲ್ಲಿ ಹೆಸರು ಪಡೆದವರು. ಮಾತ್ರವಲ್ಲ ಚಿಕ್ಕಮಗಳೂರಿನ ರಾಜಕೀಯ ಕ್ಷೇತ್ರದಲ್ಲಿ ತಮ್ಮ ಅಚ್ಚೊತ್ತಿದ್ದರು ಎಂದಿರುವ ಸಿಪಿಐ(ಎಂ) ಕಾರ್ಯದರ್ಶಿಮಂಡಳಿಯು ಸಿಪಿಐ ಪಕ್ಷಕ್ಕೂ ಸುಂದರೇಶ್‌ರವರ ಕುಟುಂಬಕ್ಕೂ ತನ್ನ ಹೃತ್ಪೂರ್ವಕ ಸಂತಾಪವನ್ನು ವ್ಯಕ್ತಪಡಿಸಿದೆ..

ಡಿವೈಎಫ್‌ಐ ಸಂತಾಪ

ರೈಲು ದುರಂತದಲ್ಲಿ ಮಡಿದ ಸಿಪಿಐ ಮುಖಂಡರಾದ ಸಂಗಾತಿ ಬಿ.ಕೆ. ಸುಂದರೇಶ್ ರವರಿಗೆ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ರಾಜ್ಯ ಸಮಿತಿಯು ತೀವ್ರ ಸಂತಾಪ ವ್ಯಕ್ತಪಡಿಸಿದೆ.

ಕಾಂ ಬಿ.ಕೆ. ಸುಂದರೇಶ್‌ರವರು ರಾಜ್ಯದಲ್ಲಿ ವಿಧ್ಯಾರ್ಥಿ-ಯುವಜನ ಚಳುವಳಿ ಕಟ್ಟುವಲ್ಲಿ ಅಪಾರ ಸೇವೆ ಸಲ್ಲಿಸಿದ್ದರು. ಸಿಪಿಐ ನಾಯಕರು ಸಹ ಆಗಿದ್ದ ಇವರ ಅಗಲಿಕೆಯಿಂದ ಎಡಪ್ರಜಾಪ್ರಭುತ್ವ ಚಳುವಳಿಗೆ ತುಂಬಾ ನಷ್ಟವಾಗಿದೆ ಎಂದು ಡಿ.ವೈ.ಎಫ್.ಐ. ಶ್ರದ್ಧಾಂಜಲಿ ಅರ್ಪಿಸಿದೆ.

ಎಸ್.ಎಫ್.ಐ ಸಂತಾಪ

ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಚಳುವಳಿಗೆ ದೊಡ್ಡ ಕೊಡುಗೆ ನೀಡಿದ, ಕಾರ್ಮಿಕ ಮುಂದಾಳು ಸಿಪಿಐ ಯುವ ನಾಯಕ ಬಿ.ಕೆ. ಸುಂದರೇಶ್‌ರವರು ರೈಲ್ವೇ ಅಪಘಾತದಲ್ಲಿ ನಿಧನರಾದ ಬಗ್ಗೆ ಎಸ್.ಎಫ್.ಐ ರಾಜ್ಯ ಸಮಿತಿ ತೀವ್ರ ಸಂತಾಪ ಸೂಚಿಸಿ ಶ್ರದ್ಧಾಂಜಲಿ ಅರ್ಪಿಸಿದೆ. ಸುಂದರೇಶ್ ಅವರ ಬಂಧುಗಳಿಗೆ ಎಸ್.ಎಫ್.ಐ. ಸಾಂತ್ವನ ನೀಡುತ್ತಾ ಇವರ ಸಾವಿನಿಂದ ಪ್ರಜಾಸತ್ತಾತ್ಮಕ, ಪ್ರಗತಿಪರ ಚಳುವಳಿಗೆ ರಾಜ್ಯದಲ್ಲಿ ದೊಡ್ಡ ಹೊಡೆತ ಬಿದ್ದಂತಾಗಿದೆ ಎಂದಿದೆ.

ಸಿಪಿಐ(ಎಂ) ಸಂತಾಪ

ಸಿಪಿಐ(ಎಂ)ನ ತುಮಕೂರು ಜಿಲ್ಲಾ ಸಮಿತಿ 1.1.95ರಂದು ಸಭೆ ಸೇರಿ ಕಾಂ. ಸುಂದರೇಶ್ ರವರಿಗೆ ಶ್ರದ್ಧಾಂಜಲಿ ಸಲ್ಲಿಸಿತು. ಸಭೆಯಲ್ಲಿ ಸಿ.ರಾಜು, ಈ.ಬಸವರಾಜು, ಮಾತನಾಡಿದರು.

ಜೆಎಂಎಸ್ ಸಂತಾಪ

ಹೊಸವರ್ಷವನ್ನು ಸಂಭ್ರಮದಿಂದ ಸ್ವಾಗತಿಸಬೇಕಾದ ಸಂದರ್ಭದಲ್ಲಿ ಜರುಗಿದ ಭೀಕರ ರೈಲುದುರಂತ ರಾಜ್ಯದ ಜನರ ಪಾಲಿಗ ಕರಾಳ ದಿನವಾಗಿ ಪರಿಣಮಿಸಿದೆ ಎಂದಿರುವ ಜನವಾದಿ ಮಹಿಳಾ ಸಂಘಟನೆ ಈ ಅಪಘಾತದಲ್ಲಿ ಕಾಂ.ಬಿ.ಕೆ. ಸುಂದರೇಶ್ ರವರು ಅಕಾಲ ಮೃತ್ಯುವಿಗೀಡಾದ ಬಗ್ಗೆ ತೀವ್ರ ಶೋಕ ವ್ಯಕ್ತಪಡಿಸಿದೆ.

ಸಿಐಟಿಯು ಶ್ರದ್ಧಾಂಜಲಿ

ಡಿಸೆಂಬರ್ 31ರಂದು ರೈಲ್ವೇ ಅಪಘಾತದಲ್ಲಿ ನಿಧನರಾದ ಎ.ಐ.ಟಿ.ಯು.ಸಿ. ಮುಖಂಡರಾದ ಕಾಂ. ಬಿ.ಕೆ. ಸುಂದರೇಶ್ ರವರಿಗೆ ಸಿಐಟಿಯು ರಾಜ್ಯ ಸಮಿತಿಯು ತೀವ್ರ ಸಂತಾಪ ವ್ಯಕ್ತಪಡಿಸಿದೆ. ಅವರ ಅಗಲುವಿಕೆಯಿಂದಾಗಿ ರಾಜ್ಯದ ಎಡ ಚಳುವಳಿಗೆ ನಷ್ಟವಾಗಿದೆಯೆಂದು ಸಿಐಟಿಯುನ ರಾಜ್ಯ ಸಮಿತಿ ತಿಳಿಸಿದೆ.

1994 - ಹಿನ್ನೋಟ

ಎರಡು ಲೇಖನಗಳು
ದೇಶದಲ್ಲಿ-ವಿಶ್ವದಲ್ಲಿ

ಹೋರಾಟಗಳ ವರ್ಷ ಹೊಸ ಭರವಸೆ ಚಿಗುರಿಸಿದ ವರ್ಷ

-ಸುರ್ಜಿತ್

ಕಾಂಗ್ರೆಸ್(ಐ)ನ ನೀತಿಗಳು ನಮ್ಮ ಸ್ವಾವಲಂಬೀ ಬೆಳವಣಿಗೆಯ ದಾರಿಯನ್ನು ತಪ್ಪಿಸಿದ್ದರೆ, ಕೋಮುವಾದಿ ಪಕ್ಷಗಳು ವಾತಾವರಣವನ್ನು ಕಲುಷಿತಗೊಳಿಸಿದೆ. ಆದರೆ 1994 ಒಂದು ದೂರದೃಷ್ಟಿಯ ನಿಲುವು ತಳೆದರೆ ಈ ಎರಡೂ ಬೆದರಿಕೆಗಳನ್ನು ಎದುರಿಸಿ ನಿಲ್ಲಲು ಸಾಧ್ಯ ಎಂಬ ಆಶಾಭಾವನೆಯೊಂದಿಗೆ 1994 ಮುಗಿದಿದೆ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ। ಹರ್ಕಿಶನ್ ಸಿಂಗ್ ಸುರ್ಜಿತ್

1994 ಕೊನೆಗೊಳ್ಳುತ್ತಿದ್ದಂತೆ ಆಳುವ ಪಕ್ಷದಲ್ಲಿನ ಬಿಕ್ಕಟ್ಟು ಇನ್ನಷ್ಟು ಆಳವಾಗಿದೆ. ಜನಗಳ ತುರ್ತು ಸಮಸ್ಯೆಗಳನ್ನು ಪರಿಹರಿಸುವಲ್ಲಿನ ಆ ಪಕ್ಷದ ಅಸಮರ್ಥತೆಯಿಂದಾಗಿ ಹೀಗಾಗಿದೆ. ಒಂದು ಸಂಘಟನೆಯಾಗಿ ಆ ಪಕ್ಷ ನಿಷ್ಪ್ರಯೋಜಕವಾಗಿದೆ. ಒಬ್ಬ ವ್ಯಕ್ತಿಯನ್ನೇ ಅವಲಂಬಿಸಿದ ಮುಖಂಡತ್ವದ ಪರಿಪಾಟ ಮುಂದುವರಿಯುತ್ತಲೇ ಇದೆ. ಚುನಾವಣೆಗಳಲ್ಲಿ ಮಾತ್ರ ಕಾರ್ಯಕರ್ತರಿಗೆ ಪಾತ್ರ...ಇಲ್ಲೂ ಎಲ್ಲಾ ಮಹತ್ವದ ಸಂಗತಿಗಳನ್ನು ಅಧಿಕಾರದಲ್ಲಿನ ನಾಯಕರೇ ನಿರ್ಧರಿಸುವುದು.

ಆದ್ದರಿಂದ ಜನಗಳ, ದೇಶದ ಸಮಸ್ಯೆಗಳ ಬಗ್ಗೆ ಆ ಪಕ್ಷ ನಿರ್ಲಕ್ಷ್ಯ ತೋರುತ್ತಲೇ ಇದೆ. ಆದರ ಬದಲು ವಿಶ್ವಬ್ಯಾಂಕ್- ಐ.ಎಂ.ಎಫ್.ನ ನಿರ್ದೇಶನಗಳಿಗೆ ಸಂಪೂರ್ಣ ಶರಣಾಗಿದೆ. ಕಾಂಗ್ರೆಸ್(ಐ) ಸರಕಾರ ಸಂವಿಧಾನ ಮತ್ತು ನ್ಯಾಯಾಂಗದ ಬಗ್ಗೆಯೂ ಇದೇ ರೀತಿಯ ತಿರಸ್ಕಾರ ತೋರಿದೆ. ಈ ವರ್ಷ ಸುಪ್ರೀಂಕೋರ್ಟ್ ತಾನು ಕೊಟ್ಟ ತೀರ್ಪನ್ನು ಸರಕಾರ ಪಾಲಿಸುತ್ತದೆಯೊ ಎಂದು ನೇರವಾಗಿ ಕೇಳಬೇಕಾಗಿ ಬಂತು. ಬಾಬ್ರಿ ಮಸೀದಿ ಇದ್ದಲ್ಲಿ ಹಿಂದೂ ಧಾರ್ಮಿಕ ಕಟ್ಟಡ ಇತ್ತೇ ಎಂಬ ಬಗ್ಗೆ ಸುಪ್ರೀಂಕೋರ್ಟ್‌ನ್ನು ಕೇಂದ್ರ ಸರಕಾರ ಪರಾಮರ್ಶೆ ಕೇಳಿರುವುದು ಅನಗತ್ಯವಾದ ಕ್ರಮ ಎಂದು ನ್ಯಾಯಾಲಯ ಹೇಳಬೇಕಾಗಿ ಬಂತು. ಇದಕ್ಕೆ ಮೊದಲು ಬಾಬ್ರಿ ಮಸೀದಿ ಧ್ವಂಸದ ನಂತರ ಬಿಜೆಪಿ ರಾಜ್ಯ ಸರಕಾರದ ವಜಾವನ್ನು ಎತ್ತಿ ಹಿಡಿಯುತ್ತಾ ಜಾತ್ಯಾತೀತತೆ ಭಾರತೀಯ ಸಂವಿಧಾನದ ಮೂಲಭೂತ ಅಂಶ ಎಂದಿತ್ತು.

ಸುಪ್ರೀಂಕೋರ್ಟ್ 1994ರಲ್ಲಿ ನೀಡಿದ ಈ ಎರಡು ತೀರ್ಪುಗಳು ಎಡ-ಜಾತ್ಯತೀತ ಶಕ್ತಿಗಳ ನಿಲುವನ್ನು ಎತ್ತಿ ಹಿಡಿದ ತೀರ್ಪುಗಳು.

ಆದರೂ ಕಾಂಗ್ರೆಸ್(ಐ) ಹಿಂದೂ ಧಾರ್ಮಿಕ ಗುರುಗಳನ್ನು ಬಳಸಿ ಬಾಬ್ರಿ ಮಸೀದಿಯಿದ್ದಲ್ಲಿ ದೇವಸ್ಥಾನ ಕಟ್ಟಲು ಒಂದು ಟ್ರಸ್ಟ್ ರಚಿಸುವ ಕಸರತ್ತನ್ನು ನಡೆಸಿ ಅಲ್ಪ ಸಂಖ್ಯಾತರಿಂದ ದೂರ ಸರಿದಿದೆ. ಅಸೆಂಬ್ಲಿ ಚುನಾವಣೆಗಳ ಫಲಿತಾಂಶದಿಂದಲೂ ಅದು ಪಾಠ ಕಲಿತಂತಿಲ್ಲ, ರಾಜಕೀಯದಲ್ಲಿ ಧರ್ಮವನ್ನು ಬೆರಸದಂತೆ ತಡೆಯುವ ಮಸೂದೆ ತರಲು ಅದು ಇನ್ನೂ ಹಿಂದೇಟು ಹಾಕುತ್ತಿದೆ.

ಬಿಜೆಪಿ ಮೂಲೆಗೆ ತಳ್ಳಲ್ಪಟ್ಟ ವರ್ಷ

1994ರಲ್ಲೂ ಬಿಜೆಪಿ ಹಿಂದುತ್ವದ ಘೋಷಣೆಯನ್ನು ಎತ್ತಲು ಭಾರೀ ಪ್ರಯತ್ನ ನಡೆಸಿತು. ಆದರೆ ಏನೂ ಪ್ರಯೋಜನವಾಗಲಿಲ್ಲ, ಜನಸಾಮಾನ್ಯರು ನಾಗರಿಕ ಶಾಂತಿ ಹಾಗೂ ಸೌಹಾರ್ದ ಬಯಸುವುದರಿಂದ ಬಿಜೆಪಿಯ ಈ ಪ್ರಯತ್ನಗಳಿಗೆ ಪ್ರತಿರೋಧ ಹೆಚ್ಚಿದ್ದು, ಅದು ಮೂಲೆಗೆ ತಳ್ಳಲ್ಪಟ್ಟಿದ್ದು 1994ರಲ್ಲಿ ಕಂಡು ಬಂತು. ಹಿಂದಿನ ವರ್ಷದಂತೆ ಈ ವರ್ಷವೂ ಚುನಾವಣೆಗಳಲ್ಲಿ ಬಿಜೆಪಿಗೆ ಜನ ತಕ್ಕ ಉತ್ತರ ನೀಡಿದರು. ಆದ್ದರಿಂದಲೇ ಆರ್.ಎಸ್.ಎಸ್. ಈಗ 'ಸ್ವದೇಶಿ'ಯ ರಾಗ ಹಾಡುತ್ತಿದೆ. ಆದರೆ ಇದು ಬಿಜೆಪಿಯ ಹಿಂದೆ ಅಂಗೀಕರಿಸಿದ್ದ ನಿಲುವಿಗೆ ವ್ಯತಿರಿಕ್ತವಾದದ್ದು. ತನ್ನದೇ ನೀತಿಗಳನ್ನು ಈಗ ಕಾಂಗ್ರೆಸ್(ಐ) ಅಂಗೀಕರಿಸಿದೆ ಬಿಜೆಪಿ ಮುಖಂಡರೇ ಹಿಂದೆ ಸಾರಿರಲಿಲ್ಲವೇ? ಈಗ ತಾನು ನೇರವಾಗಿ ಸರಕಾರದ ಆರ್ಥಿಕ ನೀತಿಗಳ ಬೆಂಬಲಿಗ ಪಕ್ಷವಾಗಿ ಜನ ಗುರುತಿಸದಿರಲೆಂದು 'ಸ್ವದೇಶಿ' ಮಾತು ಬಂದಿದೆ. ಆದರೆ ಇನ್ನೂ ಹೊಸ ಆರ್ಥಿಕ ನೀತಿಗಳಿಗೆ ತನ್ನ ಬೆಂಬಲವನ್ನು ಅದು ನಿಲ್ಲಿಸಿಲ್ಲ.

ದೇಶದ ಐಕ್ಯತೆ ರಕ್ಷಿಸುವಲ್ಲಿ ಮತ್ತೆ ಕಾಂಗ್ರೆ ಅಸಮರ್ಥತೆ

1994ರಲ್ಲೂ ಕಾಂಗ್ರೆಸ್(ಐ)ನ ದೂರದೃಷ್ಟಿಯ ಅಭಾವದಿಂದ ಪ್ರತ್ಯೇಕತಾವಾದ ಕಾಶ್ಮೀರದಲ್ಲಿ ಮತ್ತು ಈಶಾನ್ಯ ಭಾರತದಲ್ಲಿ ಸುಡುತ್ತಲೇ ಇದೆ-ವಿಶೇಷವಾಗಿ ನಾಗಾಲ್ಯಾಂಡ್ ಮತ್ತು ಮಣಿಪುರದಲ್ಲಿ, ಸರಕಾರ ಪ್ರತ್ಯೇಕತಾವಾದಿ ಆಂದೋಲನಗಳನ್ನು ಮಿಲಿಟರಿ-ಅರೆ- ಮಿಲಿಟರಿ ಪಡೆಗಳನ್ನು ಬಳಸಿ ಬಗ್ಗು ಬಡೆಯುವ ಬಗ್ಗೆ ಮಾತ್ರ ಯೋಚಿಸುತ್ತಿದೆ. ಈ ರಾಜ್ಯಗಳ ಜನರ ನೈಜ ಸಮಸ್ಯೆಗಳನ್ನು, ನೈಜ ಭಯಗಳನ್ನು ಗಮನಿಸಿ ಅವರ ನ್ಯಾಯಯುತ ಆಕಾಂಕ್ಷೆಗಳನ್ನು ಈಡೇರಿಸುವ ಪ್ರಯತ್ನ 1994ರಲ್ಲೂ ನಡೆಯಲಿಲ್ಲ.

ರಾಷ್ಟ್ರೀಯ ಐಕ್ಯತೆಯ ಪ್ರಶ್ನೆಯನ್ನು ಅಧಿಕಾರಶಾಹಿ ಕಾಂಗ್ರೆಸ್(ಐ) ಹೇಗೆ ಹದಗೆಡಿಸುತ್ತಿದೆ ಎಂಬುದಕ್ಕೆ ಮಣಿಪುರ ಇತ್ತೀಚಿನ ಉದಾಹರಣೆ. ದೇಶ ತಲೆತಗ್ಗಿಸಬೇಕಾದ ಘಟನೆ ಅದು. ಜನರ ಹೊಸ ಆದೇಶವನ್ನು ಪಡೆಯುವ ಬದಲು ಮಣಿಪುರ ವಿಧಾನಸಭೆಯನ್ನು ಸುಮಾರು ಒಂದು ವರ್ಷ ಅಮಾನತ್ತಿನಲ್ಲಿಡಲಾಯಿತು; ಈ ನಡುವೆ ಪಕ್ಷಾಂತರಗಳನ್ನು ನಡೆಸಿ ಹೊಸ ಸರಕಾರವನ್ನು ಪ್ರತಿಷ್ಠಾಪಿಸಲಾಯಿತು. ಆದರೆ ಅದಕ್ಕೆ ವಿಶ್ವಾಸ ಮತಗಳಿಸಲಾಗಲಿಲ್ಲ, ಈ ನಡುವೆ ರಾಜ್ಯಪಾಲರು ರಾಜೀನಾಮೆ ಕೊಟ್ಟರೂ ಸಂವಿಧಾನವನ್ನು ಗಾಳಿಗೆ ತೂರಿ ವಿಧಾನಸಭೆಯ ಇನ್ನೊಂದು ಅಧಿವೇಶನ ನಡೆಸಿ ವಿಶ್ವಾಸಮತಗಳಿಸುವ ಪ್ರಯತ್ನ ನಡೆಸಲಾಗಿದೆ. ಈ ನಡುವೆ ಪಕ್ಷಾಂತರ, 'ಕುದುರೆ ವ್ಯಾಪಾರ'. ಜಮ್ಮು-ಕಾಶ್ಮೀರದಲ್ಲಿ ಇಂತಹುದೇ ಕಾಂಗ್ರೆ ತಂತ್ರದಿಂದಾಗಿ ಪ್ರತ್ಯೇಕತಾವಾದ ಬೆಳೆಯಿತು ಎಂಬುದನ್ನು ನೆನಪಿಸಿಕೊಳ್ಳುವ ಅವಶ್ಯಕತೆ ಇದೆಯೇ? ಕಾಂಗ್ರೆನ ಇಂತಹ ನೀತಿಗಳಿಂದಾಗಿ ಅಧಿಕಾರಕ್ಕೆ ಅಂಟಿಕೊಂಡಿರುವ ಹೊಲಸು ತಂತ್ರಗಳಿಂದಾಗಿಯೇ ಸಿಕ್ಕಿಂನ ಜನ ಅದನ್ನು ಇತ್ತೀಚಿನ ಚುನಾವಣೆಗಳಲ್ಲಿ ಅಳಿಸಿಹಾಕಿದ್ದಾರೆ. 32 ರಲ್ಲಿ ಎರಡೇ ಸ್ಥಾನಗಳನ್ನು ನೀಡಿದ್ದಾರೆ.

ಭ್ರಷ್ಟರ ಸರಕಾರ ನೀಡಿರುವ ಪಕ್ಷ

1994ರಲ್ಲೂ ಉಚ್ಚ ಸ್ಥಾನಗಳಲ್ಲಿ ಭ್ರಷ್ಟಾಚಾರದ ಹಗರಣಗಳಿಗೆ ಕೊನೆಯಿರಲಿಲ್ಲ, ಬಿಲಿಯಗಟ್ಟಲೆ ರೂಪಾಯಿಗಳ ಸಕ್ಕರೆ ಹಗರಣ ನರಸಿಂಹರಾವ್ ಸರಕಾರದ ಭ್ರಷ್ಟಾಚಾರದ ಕಿರೀಟದಲ್ಲಿ ಇನ್ನೊಂದು ಮಣಿ ಸೇರಿಸಿದೆ!

ಭ್ರಷ್ಟಾಚಾರದ ಪ್ರಶ್ನೆ 1994ರಲ್ಲಿ ದೊಡ್ಡ ಪ್ರಮಾಣದಲ್ಲಿ ಚರ್ಚೆಗೆ ಬಂತು. ಕೇಂದ್ರ ಸರಕಾರ ಭ್ರಷ್ಟರ ಸರಕಾರ ಎಂದು ಬಯಲಿಗೆ ಬಂತು. ಶೇರು ಹಗರಣ ಕುರಿತ ಜಂಟಿ ಸಂಸದೀಯ ಸಮಿತಿ(ಜೆ.ಪಿ.ಸಿ.) ವರದಿಯನ್ನು ನಿರುಪಯುಕ್ತಗೊಳಿಸುವ ಸರಕಾರದ ಪ್ರಯತ್ನ ವಿಶ್ವದಲ್ಲೇ ಅಭೂತಪೂರ್ವ. ಹಿರಿಯ ಕಾಂಗ್ರೆಸ್ಸಿಗರೊಬ್ಬ ಅಧ್ಯಕ್ಷರಾಗಿದ್ದ, ಅರ್ಧದಷ್ಟು ಕಾಂಗ್ರೆಸ್ಸಿಗರೇ ಇದ್ದ ಈ ಸಮಿತಿಯ ಅವಿರೋಧ ಶಿಫಾರಸುಗಳನ್ನು ಸರಕಾರ ಸಂಪೂರ್ಣ ಮೂಲೆಗೆ ತಳ್ಳಿದೆ ಎಂದು ಅದರ 'ಕ್ರಿಯಾ ವರದಿ'ಯಿಂದ ಸ್ಪಷ್ಟವಾಯಿತು. ಇದರಿಂದ ಸಿಟ್ಟಿಗೆದ್ದ ವಿರೋಧ ಪಕ್ಷಗಳು ಸಂಸತ್ ಅಧಿವೇಶನ ನಡೆಯಲು ಬಿಡದಾದಾಗ ಸರಕಾರ ಪರಿಷ್ಕೃತ ಕ್ರಿಯಾವರದಿ ನೀಡುವ ಭರವಸೆ ನೀಡಿತು. ಆದರೆ ಸಂಸತ್ತಿನ 1994ರ ಚಳಿಗಾಲದ ಅಧಿವೇಶನದಲ್ಲಿ ಪರಿಷ್ಕೃತ ಅಂಶಗಳು ಏನೂ ಇರಲಿಲ್ಲ. ಸರ... ತಾನೇ ನೀಡಿದ ಭರವಸೆಯ ಅಪಹಾಸ್ಯ ಮಾ... ದಂತಿತ್ತು. ಇದೇ ಅಧಿವೇಶನದಲ್ಲಿ ಸಕ್ಕರೆ ಹಗ... ರಣ ಕುರಿತ ಜ್ಞಾನಪ್ರಕಾಶ್ ಸಮಿತಿಯ ವರ... ದಿಯ ಪ್ರತಿಯನ್ನು ಸಂಸತ್ತಿನಲ್ಲಿಡಲು ಕೂ... ಸರಕಾರ ನಿರಾಕರಿಸಿತು. ಆ ಸಮಿತಿಯ ವರ...



ಏಪ್ರಿಲ್ 5ರಂದು ಗ್ಯಾಟ್-ವಿರೋ... ಅಭೂತಪೂರ್ವ ರೀತಿಯಲ್ಲಿ ದ...

ಬಂಡವಾಳಶಾಹಿ ಮಾನವಕುಲದ ಯಾವ ಸಮಸ್ಯೆಗೂ ಪರಿಹಾರ ಸೂಚಿಸಲಾಗದ, ಕೈಲಾಗದ ವ್ಯವಸ್ಥೆ ಎಂದು 1994 ಮತ್ತೊಮ್ಮೆ ತೋರಿಸಿದೆ. 1994 ಮುಗಿಯುತ್ತಿದ್ದಂತೆ ಸಮಾಜವಾದದ ವಿರುದ್ಧ ಕಳೆದ ಕೆಲವು ವರ್ಷಗಳಿಂದ ಊದುತ್ತಿದ್ದ ಶಂಖಗಳೆಲ್ಲಾ ತಣ್ಣಗಾಗಿವೆ ಎನ್ನುತ್ತಾರೆ. ಅಂತರ್‍ರಾಷ್ಟ್ರೀಯ ರಂಗದಲ್ಲಿ 1994ರಲ್ಲಾದ ಬೆಳವಣಿಗೆಗಳನ್ನು ಪರಿಶೀಲಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ। ಸೀತಾರಾಂ ಯೆಚೂರಿ.



ಬಂಡವಾಳಶಾಹಿಯ ಅಸಮರ್ಥತೆಯನ್ನು ಮತ್ತೊಮ್ಮೆ ಸಾಬೀತುಪಡಿಸಿದ ವರ್ಷ

- ಸೀತಾರಾಂ ಯೆಚೂರಿ

"ಸಮಾಜವಾದ ಸತ್ತಿದೆ", "ಸಿದ್ಧಾಂತ ಮಣ್ಣುಗೂಡಿದೆ", "ಇತಿಹಾಸ ಮುಗಿಯಿತು" ಎಂದೆಲ್ಲಾ ಹಿಂದಿನ ವರ್ಷಗಳಲ್ಲಿ ಊದುತ್ತಿದ್ದ ಶಂಖಗಳು 1994 ಮುಗಿಯುವ ವೇಳೆಗೆ ತಣ್ಣಗಾಗಿವೆ. 1994 ಬಂಡವಾಳಶಾಹಿಯ ಅಸಾಮರ್ಥ್ಯವನ್ನು ಮತ್ತೊಮ್ಮೆ ಸಾಬೀತು ಮಾಡಿದೆ. ಸುದ್ದಿ ಮಾಧ್ಯಮಗಳ ಮೇಲೆ ಬಂಡವಾಳಶಾಹಿಗಳ ಪೂರ್ಣ ಹತೋಟಿಯಿದ್ದರೂ ಈ ಅಸಾಮರ್ಥ್ಯವನ್ನು ಮರೆಮಾಚಲಾಗಲಿಲ್ಲ. ಪರಿಸರ ಸಮತೋಲನವನ್ನು ನಾಶಮಾಡುವ ಪರಿಸ್ಥಿತಿಗೆ ಏನೂ ಪರಿಹಾರ ಸೂಚಿಸುವ ಶಕ್ತಿ ಈ ವ್ಯವಸ್ಥೆಗಿಲ್ಲ ಎಂದು ಸಾಬೀತಾಗುತ್ತಿದೆ.

ಬಂಡವಾಳಶಾಹಿಯ ಅಸಮರ್ಥತೆಯ ಪರಿಣಾಮ ಮುಖ್ಯವಾಗಿ ಸಾಮಾಜಿಕ-ರಾಜಕೀಯ ಕಣದಲ್ಲಿ 1994ರಲ್ಲಿ ಚೆನ್ನಾಗಿ ಕಂಡು ಬಂತು. ನೇಪಾಳದಿಂದ ಹಿಡಿದು ದಕ್ಷಿಣ ಆಫ್ರಿಕಾ, ಅತ್ತ ಯುರೋಪಿನ ಸಂಸತ್ತು ಹೀಗೆ ವಿವಿಧ ಸಾಮಾಜಿಕ ವ್ಯವಸ್ಥೆಗಳಲ್ಲಿ ಈ ವರ್ಷ ಹಲವಾರು ಚುನಾವಣೆಗಳು ನಡೆದವು. ಹಿಂದೆಂದೂ ಒಂದೇ ವರ್ಷದಲ್ಲಿ ಇಷ್ಟೊಂದು ಕಡೆ ಆಳುವ ಪಕ್ಷಗಳು ನೆಲಕಚ್ಚಿದ್ದಿಲ್ಲ.

ಮಾನವ ಕುಲದ ಯಾವುದೇ ಸಮಸ್ಯೆಗೆ ಬಂಡವಾಳಶಾಹಿಯ ಬಳಿ ಪರಿಹಾರವಿಲ್ಲ ಎಂದು ಮತ್ತೊಮ್ಮೆ ಮನದಟ್ಟಾಗಿದೆ. ಹಿಂದಿನ ಸಮಾಜವಾದಿ ದೇಶಗಳ ಮಾರುಕಟ್ಟೆಗಳನ್ನು ಕಿತ್ತುಕೊಳ್ಳುವಲ್ಲಿ ಅದಕ್ಕೆ ಜಯ ಲಭಿಸಿದರೂ, ಸೈದ್ಧಾಂತಿಕವಾಗಿ ಮೇಲ್ನೋಟಕ್ಕೆ ಅದು ಮೈಲುಗೈ ಸಾಧಿಸಿದರೂ ತನ್ನೊಳಗಿನ ವಿರೋಧಾಭಾಸಗಳನ್ನು ಪರಿಹರಿಸುವ ಸಾಮರ್ಥ್ಯವಂತೂ ಅದಕ್ಕಿಲ್ಲ ಎಂದು ಮತ್ತೊಮ್ಮೆ ಸ್ಪಷ್ಟವಾಗಿದೆ. ಕೆಲವರು ಸಮೃದ್ಧಿ ಹೊಂದುತ್ತಿರುವಂತೆ ಬಹುಪಾಲು ದುಡಿಯುವ ಜನರ ಸ್ಥಿತಿ ಇನ್ನಷ್ಟು ಹದಗೆಡುವ, ಜತೆಗೆ

ಲ್ಯಾಟಿನ್ ಅಮೇರಿಕಾ

- ☐ ಮೆಕ್ಸಿಕೋದಲ್ಲಿ ನಾಫ್ತಾ ವಿರುದ್ಧ ಮೂಲ ನಿವಾಸಿ ರೈತರ ಬಂಡಾಯ
- ☐ ವೀರ ಕ್ಯೂಬನ್ನರ ಧೃತಿಗೆಡದ ಹೋರಾಟ-ಒಂದು ಪ್ರಶ್ನೆಯ ಮೇಲೆ ಸಾಮ್ರಾಜ್ಯಶಾಹಿಗಳನ್ನು ನಿಶ್ಶಸ್ತ್ರಗೊಳಿಸಿದ ಹೋರಾಟ
- ☐ 'ಸಾವೋ ಪಾವ್ಲೊ ಫೋರಂ'ನಲ್ಲಿ ನವ-ಉದಾರವಾದಿ ಆರ್ಥಿಕ ನೀತಿಗಳಿಗೆ ವಿರೋಧದ ಘೋಷಣೆ

ಲ್ಯಾಟಿನ್ ಅಮೇರಿಕಾ ಸೆಟೆದು ನಿಂತಿದೆ.

1994ರ ಆರಂಭದಲ್ಲೇ ಜನವರಿ ೧ರ ಮುಂಜಾವಿನಲ್ಲಿ ಮೆಕ್ಸಿಕೋದಲ್ಲಿ ಸಶಸ್ತ್ರ ಬಂಡಾಯದ ಸುದ್ದಿ-ಸಾಮ್ರಾಜ್ಯಶಾಹಿ ದೇಶಗಳ ರಾಜಧಾನಿಗಳಲ್ಲಿ ಹೊಸ ವರ್ಷದ ಆಚರಣೆಯಲ್ಲಿ ತಲ್ಲೀನರಾಗಿದ್ದವರನ್ನು ತಲ್ಲಣಗೊಳಿಸಿದ ಸುದ್ದಿ ಬಂತು. ದಕ್ಷಿಣ ಮೆಕ್ಸಿಕೋದ ಚಿಯಾಪಾಸ್ ನಲ್ಲಿ ಮೂಲನಿವಾಸಿಗಳು ಬಂಡೆದ್ದು ನಾಲ್ಕು ಪಟ್ಟಣಗಳನ್ನು ವಶಕ್ಕೆ ತಗೊಂಡು ರಾಜಧಾನಿಯತ್ತ ಸಾಗಿದ ಸುದ್ದಿ ಬಂತು. ಅಮೇರಿಕಾ, ಕೆನಡಾ, ಮೆಕ್ಸಿಕೋ ದೇಶಗಳ ನಡುವೆ ನಡೆದ ನಾಫ್ತಾ (NAFTA) ಉತ್ತರ ಅಮೇರಿಕಾ ಮುಕ್ತ ವ್ಯಾಪಾರ ಒಪ್ಪಂದ) ಜ್ಯಾರಿಗೆ ಬರುವ ದಿನ ಅದಕ್ಕೆ ಪ್ರತಿಭಟನೆಯಾಗಿ ಈ ಬಂಡಾಯ ನಡೆದಿತ್ತು. "ಈ ಒಪ್ಪಂದ ಮೆಕ್ಸಿಕೋದ ಮೂಲ ನಿವಾಸಿಗಳ ಸಾವಿನ ಪ್ರಮಾಣ ಪತ್ರ" ಎಂದ ಬಂಡಾಯಗಾರರು 'ಪ್ರಾಕೃತಿಕ ಸಂಪತ್ತಿನ ಕೊಳ್ಳೆಯನ್ನು ನಿಲ್ಲಿಸಲು ಈ ಬಂಡಾಯ' ಎಂದು ಸಾರಿದರು.

ಈ ನಾಫ್ತಾ ಒಪ್ಪಂದ ಅಮೇರಿಕಾದ ಗುತ್ತೇದಾರಿ ಬಂಡವಾಳಶಾಹಿಯ ಸೂಪರ್ ಲಾಭಕ್ಕಾಗಿ ಮೆಕ್ಸಿಕೋ ಹಾಗೂ ಕೆನಡಾದಲ್ಲಿ ಮ... ಅವಕಾಶ ಕಲ್ಪಿಸಲೆಂದು ರಚಿಸಿದ ಒಪ್ಪಂ... ಇವರ ಬಿಲಿಯಗಟ್ಟಲೆ ಡಾಲರುಗಳ ಸೂಪ... ಲಾಭಕ್ಕಾಗಿ ಮೆಕ್ಸಿಕೋದ ಲಕ್ಷಾಂತರ ರೈತರ... ಹೊರಗಟ್ಟುವ ಈ ಒಪ್ಪಂದದ ವಿರುದ್ಧ ಪ್ರ... ಗೊಂಡ ಪ್ರತಿರೋಧ ಅದಾಗಿತ್ತು.

ಇಂತಹ ಪ್ರತಿರೋಧ ಈಗ ಲ್ಯಾಟಿ... ಅಮೇರಿಕಾದ ಎಲ್ಲೆಡೆ ಕಂಡು ಬರುತ್ತಿದೆ. ... ಕ್ಯೂಬನ್ನರಂತೂ ಅಮೇರಿಕಾದ ಕ್ರಿಮಿನಲ್ ನಿ... ಧದ ಅತ್ಯಂತ ಪ್ರತಿಕೂಲ ಪರಿಸ್ಥಿತಿಯಲ್ಲಿ ... ಸ್ವಾತಂತ್ರ್ಯ ಹಾಗೂ ಸಮಾಜವಾದೀ ಆಯ... ರಕ್ಷಣೆಗೆ ಈ ವರ್ಷವೂ ಟೊಂಕಕಟ್ಟಿ ನಿಂತ... ನಿರಾಶ್ರಿತರ ಪ್ರಶ್ನೆಯ ಮೇಲೆ ಅಮೇರಿಕಾ ... ಒಪ್ಪಂದಕ್ಕೆ ಬರುವಂತೆ ಮಾಡಿ ಒಂದು ... ಯಲ್ಲಿ ಸಾಮ್ರಾಜ್ಯಶಾಹಿಯನ್ನೇ ನಿಶ್ಶಸ್ತ್ರಗೊ... ದರು!

ಲ್ಯಾಟಿನ್ ಅಮೇರಿಕಾದ, ಪ್ರಗತಿಶೀ... ಸಾಮ್ರಾಜ್ಯಶಾಹಿ-ವಿರೋಧಿ ಶಕ್ತಿಗಳನ್ನು ಒ... ತಂದ 'ಸಾವೊ ಪಾವ್ಲೊ ಫೋರಂ'ನ ನಾ... ಸಮ್ಮೇಳನವೂ ಹವಾನಾದಲ್ಲಿ 1994ರಲ್ಲಿ ... ಯಿತು. ಸಾಮ್ರಾಜ್ಯಶಾಹಿ ತನ್ನ ಲಾಭ... ಹೇರಿರುವ ನವ-ಉದಾರವಾದಿ ಆರ್ಥಿಕ ... ಗಳನ್ನು ವಿರೋಧಿಸುವ ಒಂದು ಘೋ... ಯನ್ನು ಅದು ಅಂಗೀಕರಿಸಿತು. ಹೀಗೆ ...

ಏಶ್ಯಾ

- ☐ ಉತ್ತರ ಕೊರಿಯಾ ಅಮೇರಿಕಾ "ಹೊ... ವಿಶ್ವ ವ್ಯವಸ್ಥೆ"ಗೆ ಜಗ್ಗಲಿಲ್ಲ
- ☐ ಚೀಣಾ ವಿಶ್ವ ಸಂಸ್ಥೆಯನ್ನು ಅಮೇರಿ... ತನ್ನ ಮನಬಂದಂತೆ ಕುಣಿಸ... ಬಿಡಲಿಲ್ಲ



...ತ ಪ್ರದರ್ಶಕರ ಮೇಲೆ ಪೊಲೀಸರು ...ತಿಸಿದರು

...ಯಿತು. ಮತ್ತೊಮ್ಮೆ ಸಿಟ್ಟಿಗೆದ್ದ ವಿರೋಧ ಪಕ್ಷಗಳು ಮತ್ತೊಮ್ಮೆ ಸಂಸತ್ತಿನ ಅಧಿವೇಶನ ನಡೆಯದಂತೆ ಮಾಡಿದಾಗಲೇ ಸರಕಾರ ಕೊನೆಗೂ ಮೂವರು ಮಂತ್ರಿಗಳ ರಾಜೀನಾಮೆ ಪಡೆಯಿತು.

ಒಟ್ಟಿನಲ್ಲಿ ಭ್ರಷ್ಟರನ್ನ ರಕ್ಷಿಸಿಕೊಳ್ಳಲು ಕಾಂಗ್ರೆಸ್(ಐ) ಯಾವ ಮಟ್ಟಕ್ಕಿಳಿಯಲೂ ಸಿದ್ದ ಎಂದು 1994ರ ಕೊನೆಯ ವೇಳೆಗೆ ಯಾರಿಗೂ ಸಂಶಯವುಳಿಯಲಿಲ್ಲ.

ಇದು ಕಾಂಗ್ರೆಸ್(ಐ) ಮಂದಿಯನ್ನು ಹತಾಶರನ್ನಾಗಿ ಮಾಡಿದೆ. ಅದೇ ವೇಳೆಗೆ ಕಾಂಗ್ರೆಸ್(ಐ) 'ಹೈ ಕಮಾಂಡ್' ಕೂಡಾ ಹೆದರುವಂತಾಗಿದೆ. ತನ್ನದೇ ಸಂಸತ್ ಸದಸ್ಯರನ್ನು ಎದುರಿಸುವಲ್ಲಿ ಧೈರ್ಯವೂ ಅವರಲ್ಲಿ ಉಳಿದಂತಿಲ್ಲ. ಅಧಿವೇಶನದ ವೇಳೆಗೆ ಸಾಮಾನ್ಯವಾಗಿ ನಡೆಯುವ ಕಾಂಗ್ರೆಸ್ ಸಂಸದೀಯ ಪಕ್ಷದ ಸಭೆಯನ್ನು ರದ್ದುಮಾಡಲಾಯಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಒಂದು ಸಭೆಯನ್ನೂ ರದ್ದು ಮಾಡಲಾಯಿತು. ಡಿಸೆಂಬರ್ 20ರಂದು ನಡೆದ ಸಭೆಯಲ್ಲಿ ಹಿರಿಯ ಮಂತ್ರಿ ಅರ್ಜುನ್‌ಸಿಂಗ್ ಕೆಲವು ಮುಜುಗರದ ಪ್ರಶ್ನೆಗಳನ್ನು ಎತ್ತಿದಾಗ ಅವರ ಬಾಯಿಮುಚ್ಚಿಸಲು ಪ್ರಯತ್ನಿಸಲಾಯಿತು. ಅವರು ರಾಜೀನಾಮೆಯ ಬೆದರಿಕೆ ನೀಡಿದರು. ಕೊನೆಗೂ ಅವರು ಕೇಂದ್ರ ಮಂತ್ರಿ ಮಂಡಲದಿಂದ ಹೊರಬಂದರು. ಅವರು ಮುಖಂಡತ್ವವನ್ನು ಕೇಳಿದ ಪ್ರಶ್ನೆಗಳಿಗೆ ಇನ್ನೂ ಉತ್ತರ ದೊರೆತಿಲ್ಲ. ಆದರೆ ಆ ಪ್ರಶ್ನೆಗಳಿಂದ ಮುಖಂಡರ ಕಾಲುಡುಗಿದಂತಿದೆ. ಅವರೆತ್ತಿದ ಪ್ರಶ್ನೆಗಳ ಬಗ್ಗೆ ಚರ್ಚಿಸುವ ಬದಲು ಎಂದಿನ ಕಾಂಗ್ರೆಸ್ ಮಾದರಿಯಲ್ಲಿ ಅವರನ್ನು ಖಂಡಿಸಲಾಯಿತು. ಎಂದಿನ ಹೊಗಳುಭಟ್ಟಂಗಿತನದ ಪ್ರದರ್ಶನ ನಡೆಯಿತು.

ತನ್ನ ಜನ-ವಿರೋಧಿ, ದೇಶ-ವಿರೋಧಿ ನೀತಿಗಳಿಂದಾಗಿ ಜನಬೆಂಬಲವನ್ನು ಕಳಕೊಳ್ಳುತ್ತಿದ್ದೇವೆ, ಒಂದು ಸಂಘಟನೆಯಾಗಿ ಬಿಕ್ಕಟ್ಟು ಎದುರಿಸುತ್ತಿದ್ದೇವೆ ಎಂಬ ಅರಿವು ಇನ್ನೂ ಕಾಂಗ್ರೆಸ್‌ಗೆ ಬಂದಂತಿಲ್ಲ.

ಪ್ರತಿರೋಧವೂ ಹೆಚ್ಚಿದ ವರ್ಷ

ಇನ್ನೊಂದೆಡೆ 1994 ಕಾಂಗ್ರೆಸ್(ಐ)ನ ಈ ದೇಶ-ವಿರೋಧಿ, ಜನ-ವಿರೋಧಿ ನೀತಿಗಳಿಗೆ ಪ್ರತಿರೋಧ ಕೂಡಾ ಹೆಚ್ಚಿದ ವರ್ಷ. ದಿಲ್ಲಿಯಲ್ಲಿ ಎಪ್ರಿಲ್ 5ರಂದು ಅತ್ಯಂತ ಸಮರಧೀರ ಅಖಿಲ ಭಾರತ ರ್‍ಯಾಲಿ ನಡೆಯಿತು. ಮತಪ್ರದರ್ಶಕರ

ಪುಟ 6ಕ್ಕೆ

...ಂದ ಆಹಾರ ಮಂತ್ರಿಯ ಜವಾಬ್ದಾರಿ ...ಷ್ಟವಾಗಿದ್ದರೂ ಪ್ರಧಾನ ಮಂತ್ರಿಗಳು ಅವ...ೇನೂ ತಪ್ಪು ಮಾಡಿಲ್ಲ ಎಂದರು. ಜೆ.ಪಿ.ಸಿ. ...ರದಿ ಮೇಲಿನ "ಪರಿಷ್ಕೃತ ಕ್ರಿಯಾ ವರದಿ'ಯಲ್ಲಿ ...ರೋಪಕ್ಕೊಳಗಾದ ಮಂತ್ರಿಗಳು 'ವಿವರಣೆ' ...ಡಿದ್ದರಿಂದ ಕ್ರಮ ಕೈಗೊಳ್ಳಬೇಕಾಗಿಲ್ಲ ಎನ್ನಲಾ

ಉದಾರೀಕರಣದಿಂದಲೇ ಉದ್ಧಾರವಾಗುವವರು

ಕೆಲವೇ ಕೆಲವು ಜನ ಉದಾರೀಕರಣ ಇವರಿಗೆ ಎಲ್ಲ ತರಹದ ಸ್ವಾತಂತ್ರ್ಯ ನೀಡುತ್ತದೆ. ಅಂದ ಹಾಗೆ ಸ್ವಾತಂತ್ರ್ಯ ಅಂದರೇನು? ಯಾವುದೇ ಅಡೆತಡೆ ಇಲ್ಲದಿರುವುದೇ? ಸಾಮಾಜಿಕ ಅಡೆತಡೆಗಳಿರಲಿ ಈ ಜನರಿಗೆ ಸಾಮಾಜಿಕ ಅಂದರೆ ಕಾನೂನು ನಿಯಮಗಳ ಅಡೆತಡೆಗಳು ಇಲ್ಲವೇ ಇಲ್ಲ ಅಥವಾ ಬಹಳ ಕಡಿಮೆ ಇವೆ. ಏನು ಮಾಡಲು ಎಂದಿರಾ? ತಮಗೆ ಬೇಕಾದಂತೆ ಜನರನ್ನು ಕೊಳ್ಳೆ ಹೊಡೆಯಲು.

ಉದಾರೀಕರಣ ಪರಿಣಾಮವಾಗಿ ಷೇರು ಮಾರುಕಟ್ಟೆಗಳಲ್ಲಿ ಷೇರುಗಳ ಮಹಾಪೂರವೇ ಬರುತ್ತಿದೆ. ಇಲ್ಲಿ ಎಲ್ಲ ತರಹದ ಅವ್ಯವಹಾರಗಳಾಗುವುದರಿಂದ ಷೇರುಗಳ ಬೆಲೆಗಳನ್ನು ಕೃತ್ರಿಮವಾಗಿ ಏರಿಸಲಾಗುತ್ತದೆ. ಈ ಮೂಲಕ ಕೆಲವರಿಗೆ ಲಾಭ ಬಹಳ ಜನರಿಗೆ ಹಾನಿ.

ಆದರೆ ಈಗ ಎಲ್ಲ ತರಹದ ಕಂಪನಿಗಳೂ ಮಾರುಕಟ್ಟೆಗೆ ಬರಲಾರಂಬಿಸಿವೆ. ನಿನ್ನೆ ಮೊನ್ನೆಯವರೆಗೆ ಹೆಸರೇ ಕೇಳಿರದಿದ್ದ ಕಂಪನಿ ಸಾರ್ವಜನಿಕರಿಗೆ ಶೇರು ನೀಡಲು ಬಂದರೆ? ಇದೇ ಆಗುತ್ತಿರುವುದು. ಲಾಭ ಮಾಡುತ್ತಿರುವ ಕಂಪನಿಗಳು, ಉತ್ತಮ ಸಾಧನೆಯ ಹಿನ್ನೆಲೆಯಿರುವ ಕಂಪನಿಗಳು ಮಾರುಕಟ್ಟೆಗೆ ಬಂದರೆ ಅದು ಸರಿ ಎನ್ನಬಹುದು. ಆದರೆ ಹಾನಿ ಮಾಡುತ್ತಿರುವಂತಹವು ಬಂದರೆ ಅದು ಮೋಸ.

ಈ ಕಂಪನಿಗಳು ಶೇರು ನೀಡುವ ವ್ಯವಹಾರಗಳನ್ನೆಲ್ಲ ನಿಯಂತ್ರಿಸಲು ಸ್ಟಾಕ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ಎಂಬ ಮಂಡಳಿಯೊಂದಿದೆ. ಆದರೆ ಈ ಮಂಡಳಿಗೆ ಕಂಪನಿಗಳನ್ನು ನಿಯಂತ್ರಿಸುವ ಅನುಭವ, ಅನುಕೂಲತೆಗಳು ಇವ್ಯಾವವೂ ಇಲ್ಲ, ಕಂಪನಿಗಳು ಆಡಿದ್ದೇ ಆಟ, ಹೂಡಿದ್ದೇ ಹೂಟ.

ಇದೊಂದು ಉದಾಹರಣೆಯನ್ನು ನೋಡಿ. ಪವನ್ ಕುಮಾರ್ ರುಯಿಯಾ ಎಂಬಾತ ಒಂದು ನೂರ ಎಪ್ಪತ್ನಾಲ್ಕು (174) ಬೇನಾಮಿ ಕಂಪನಿಗಳನ್ನು ಹುಟ್ಟಿಹಾಕಿದನಂತೆ. ಇದು ಸಿಬಿಐನ ತನಿಖೆಯಿಂದ ಹೊರಬಂದಿರುವುದು.

ಆದರೆ ಇನ್ನು ಹೊರಬರದೇ ಇರುವ ಬೇನಾಮಿ ಕಂಪನಿಗಳ ಸಂಖ್ಯೆ ಎಷ್ಟಿದೆಯೊ ಯಾರಿಗೆ ಗೊತ್ತು?

ಶೇರು ಹಗರಣದಲ್ಲಿ 5000 ಕೋಟಿ ರೂಪಾಯಿಗಳಲ್ಲಿ ಹೆಚ್ಚು ಹಣ ಮುಳುಗಿ ಹೋಗಿದೆ ಎಂದಾಗಲೂ ಸಂಬಂಧಪಟ್ಟವರನ್ನು ರಕ್ಷಿಸುವ ಹೊಣೆಯನ್ನೇ ಹೊತ್ತ ಸರ್ಕಾರವಿರುವಾಗ ಇದೆಲ್ಲ ಯಾವ ಲೆಕ್ಕ?

ಅಕ್ರಮಗಳ ಅಧ್ಯಕ್ಷತೆ

ಕೇಂದ್ರ ಹಣಕಾಸು ಸಚಿವಾಲಯವನ್ನು ಸಂಸತ್ತಿನ ಹಣಕಾಸು ಬಗೆಗಿನ ಸ್ಥಾಯಿ ಸಮಿತಿ ತರಾಟೆಗೆ ತೆಗೆದುಕೊಂಡಿದೆ. ಈ ಸಚಿವಾಲಯದ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರಗಳಲ್ಲಿ ಹಲವು ಅಕ್ರಮಗಳು ನಡೆಯುತ್ತಿದ್ದರೂ ಅವುಗಳನ್ನು ನಿಯಂತ್ರಣಕ್ಕೆ ತರುವಲ್ಲಿ ಸಚಿವಾಲಯ ತರಾಟೆಗೆ ತೆಗೆದುಕೊಂಡಿದೆ.

ಬ್ಯಾಂಕುಗಳಲ್ಲಿ ಇತ್ತೀಚೆಗೆ ತೀವ್ರವಾಗಿ ಹೆಚ್ಚುತ್ತಿರುವ ಮೋಸದ ಪ್ರಕರಣಗಳನ್ನು ಗಮನದಲ್ಲಿರಿಸಿಕೊಂಡು ಬ್ಯಾಂಕುಗಳ ಎಲ್ಲಾ ಶಾಖೆಗಳನ್ನು ಎರಡು ವರ್ಷಕ್ಕೊಮ್ಮೆಯಾದರೂ ಪರಿಶೋಧನೆಗೆ ಒಳಪಡಿಸಬೇಕೆಂದು ಅದು ಸಲಹೆ ಮಾಡಿದೆ.

ಯಜಮಾನರಿಂದ ಮನೆಮಕ್ಕಳಿಗೆ ಬೆದರಿಕೆ

ಈ ಯಜಮಾನ ಭಾರತೀಯ ರಿಸರ್ವ್ ಬ್ಯಾಂಕು ರಾಜ್ಯಗಳು ಈ ದೇಶದ ಕುಟುಂಬದ ಸದಸ್ಯರು. ಸಂವಿಧಾನ ಪ್ರಕಾರ ದೇಶದ ಒಟ್ಟಾರೆ ನೇತೃತ್ವದಲ್ಲಿ ರಾಜ್ಯಗಳು ಕೆಲಸ ಮಾಡಬೇಕು. ರಾಜ್ಯಗಳಿಗೆ ನಿರ್ದಿಷ್ಟವಾದ ಜವಾಬ್ದಾರಿ ಮತ್ತು ಹಕ್ಕುಗಳಿವೆ. ಕೇಂದ್ರಕ್ಕೂ ನಿರ್ದಿಷ್ಟವಾದ ಹಕ್ಕು ಬಾಧ್ಯತೆಗಳಿವೆ. ಆದರೆ ಸ್ವಾತಂತ್ರ್ಯಾನಂತರದ ನಾಲ್ಕು ದಶಕಗಳಿಗೂ ಹೆಚ್ಚುಕಾಲ ಕೇಂದ್ರಗಳಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಕೇಂದ್ರ ರಾಜ್ಯಗಳ ಸಂಬಂಧವನ್ನೇ ವಿರೂಪಗೊಳಿಸಿದೆ.

ಈಗಿರುವ ಪರಿಸ್ಥಿತಿಯಲ್ಲಿ ರಾಜ್ಯಗಳಿಗೆ ಆಡಳಿತ ನಡೆಸಲು ಹಲವು ತೊಡಕುಗಳಿವೆ. ಇವುಗಳಲ್ಲಿ ಬಹುಮುಖ್ಯವಾದುದು ಹಣಕಾಸಿನದು. ಈಗ ಭಾರತೀಯ ರಿಸರ್ವ್ ಬ್ಯಾಂಕ್ ಬೆದರಿಕೆ ಹಾಕುತ್ತಿರುವುದೂ ಈ ತೊಡಕನ್ನು ಉಪಯೋಗಿಸಿಕೊಂಡೇ ರಾಜ್ಯಗಳು, ಅದರಲ್ಲೂ ವಿರೋಧ ಪಕ್ಷಗಳು ಅಧಿಕಾರದಲ್ಲಿರುವಲ್ಲಿ ಮಾಡುತ್ತಿರುವ ವೆಚ್ಚಗಳ ಬಗ್ಗೆ ಕೇಂದ್ರ ಬ್ಯಾಂಕು ತಕಾರಾರೆತ್ತಿ ಮುಂದೆ ಇದರ ಪರಿಣಾಮ ವಿಕೋಪಕ್ಕೆ ಹೋಗಬಹುದೆಂದಿದೆ.

ಒಟ್ಟಾರೆಯಾಗಿ ಉದಾರೀಕರಣದ ದುಷ್ಪರಿಣಾಮಗಳನ್ನು ರಾಜ್ಯಗಳಿಗೆ, ಅದರಲ್ಲೂ ವಿರೋಧ ಪಕ್ಷಗಳ ಅಧಿಕಾರದಲ್ಲಿರುವ ರಾಜ್ಯಗಳಿಗೆ ದಾಟಿಸಲು ನೋಡುತ್ತಿರುವ ಕೇಂದ್ರ ಸರ್ಕಾರ ಆಶ್ರಯಗಳಿಗೆ ತಕ್ಕುದಾಗಿ ಮಾಡಿದ ಅಧ್ಯಯನ ಇದಿರಬೇಕು. ಆದ್ದರಿಂದಲೇ ರಾಜ್ಯಗಳಿಗೆ ಈ ಬೆದರಿಕೆ.



ಸಲು ಹೋಗುತ್ತಿಲ್ಲ. ಬಡಜನ ಹೆಚ್ಚೆಚ್ಚು ಉಪವಾಸ ಮಾಡುತ್ತಿರಬೇಕು?

ಹೇಗಿದೆ ಬಡತನ ಹೊಡೆದೋಡಿಸುವ ಕಾರ್ಯಕ್ರಮ?

ಬೆಲೆಗಳಿಂದ ರಫ್ತಿಗೆ ಕುತ್ತು

ಭಾರತದಲ್ಲಿ ಸರಕುಗಳ ಬೆಲೆ ಹೆಚ್ಚಿರುವುದರಿಂದ ರಫ್ತು ಹೆಚ್ಚಾಗುವುದರಲ್ಲಿ ತೊಡಕು ಉಂಟಾಗುತ್ತಿದೆಯಂತೆ. ಈ ಬೆಲೆಗಳನ್ನು ಕಡಿಮೆ ಪ್ರಮಾಣದಲ್ಲಿ ಇರಿಸಿ ರಫ್ತನ್ನು ಹೆಚ್ಚಿಸುವ ಉದ್ದೇಶದಿಂದಲೇ ಕೇಂದ್ರ ಸರ್ಕಾರ ಹಿಡಿದ ರೂಪಾಯಿಯ ಅಪಮೌಲ್ಯಕರಣದಿಂದ ವಿದೇಶೀ ವಿನಿಮಯದಲ್ಲಿ ಭಾರತ ಸರಕುಗಳು ಅಗ್ಗ - ಆ ಮೂಲಕ ರಫ್ತು ಹೆಚ್ಚಾಗುತ್ತದೆ ಎಂದು ವಾದಿಸಲಾಗಿತ್ತು. ಆದರೆ ಈಗ?

ಈಗ ಇನ್ನೂ ಹಲವು ವಾದಗಳನ್ನು ಮುಂದೆ ಇಡಲಾಗುತ್ತಿದೆ. ಸಣ್ಣ ಕೈಗಾರಿಕೆಗಳ ಉತ್ಪಾದನೆಗೆ ಹಲವು ಸರಕುಗಳನ್ನು ಮೀಸಲಿಟ್ಟಿರುವುದರಿಂದ ಇಂತಹ ಪರಿಸ್ಥಿತಿ ಉಂಟಾಗಿದೆ ಎನ್ನಲಾಗುತ್ತಿದೆ. ಆದರೆ ನಿಜದಲ್ಲಿ ಉದಾರೀಕರಣದ ಅರ್ಥಶಾಸ್ತ್ರವೇ ವಿಫಲವಾಗಿರುವುದು ಸ್ಪಷ್ಟ. ಆದ್ದರಿಂದಲೇ ಇಂತಹ ಪರಿಸ್ಥಿತಿ ಆದರೆ ನರಸಿಂಹರಾಯರ ಸರ್ಕಾರ ಇದನ್ನು ಒಪ್ಪಲು ಸಾಧ್ಯದಿಲ್ಲವಲ್ಲ.

"ಹೊಟ್ಟೆ ಹಸಿವು ಊಟ ಬೇಡ"

ಬಹಳ ಹೊಟ್ಟೆ ಹಸಿದಿರುವವರು ಊಟ ಬೇಕೆನ್ನುತ್ತಾರೆ ಅಲ್ಲವೆ? ಹೊಟ್ಟೆ ಹಸಿದರೂ ಊಟ ಬೇಡ ಎಂದರೆ? ಅವರಿಗೆ ಆರೋಗ್ಯ ಸರಿಯಿರಲಿಕ್ಕಿಲ್ಲ ಎಂಬ ಸಂಶಯ ಬರುತ್ತದೆಯಲ್ಲವೆ?

ಭಾರತದ ಬಡಜನತೆ ಹೀಗೆ ಹೇಳುತ್ತಿದ್ದಾರಂತೆ ದೇಶದಲ್ಲಿ ಬಡಜನ ಇದ್ದಾರೆಂಬುದರಲ್ಲಿ ಸಂಶಯವಿಲ್ಲ. ವಿಶ್ವಸಂಸ್ಥೆಯ ಸಮಾಜ ವಿಜ್ಞಾನಿಗಳ ಒಂದು ತಂಡದ ಅಧ್ಯಯನದ ಪ್ರಕಾರ ಭಾರತದಲ್ಲಿ ಬಡತನ ಹೆಚ್ಚಿದೆಯಂತೆ.

ಸರ್ಕಾರದ ಅಂಕಿ ಸಂಖ್ಯೆಗಳ ಪ್ರಕಾರ ರೇಷನ್ ಅಂಗಡಿಗಳಿಂದ ಅಕ್ಕಿ ಮತ್ತು ಗೋಧಿಯ ಖರೀದಿ ಕಡಿಮೆಯಾಗಿದೆಯಂತೆ. ಬಡತನ ಹೆಚ್ಚಾಗಿದ್ದರೆ ಈ ರೇಷನ್ ಅಂಗಡಿಗಳಲ್ಲಿ ಖರೀದಿ ಹೆಚ್ಚಾಗಬೇಕಿತ್ತಲ್ಲವೇ? ಹಾಗಾಗಿಲ್ಲ ಕಾರಣ?

ಕಾರಣ ರೇಷನ್ ಅಂಗಡಿಗಳಲ್ಲಿನ ಬೆಲೆಗಳಿಗೂ ಮಾರುಕಟ್ಟೆಯಲ್ಲಿನ ಬೆಲೆಗಳಿಗೂ ವ್ಯತ್ಯಾಸ ಬಹಳ ಕಡಿಮೆಯಿದೆ. ರೇಷನ್ ಸರಕುಗಳ ಬೆಲೆ ತೀವ್ರ ಏರಿರುವುದರಿಂದ ಇದು ಆಗಿದೆ. ಆದ್ದರಿಂದಲೇ ಜನ ರೇಷನ್ ಅಂಗಡಿಗಳಿಂದ ಖರೀದಿ

ಮೊಸರು ಕಡೆದು ಬೆಣ್ಣೆ ಬಾಚಿದವರು

ದೇಶದ ಅತ್ಯಂತ ದೊಡ್ಡ ಬ್ಯಾಂಕ್ ಆದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಉದಾರೀಕರಣದಿಂದ ದೊಡ್ಡ ಸಮಸ್ಯೆ ಎದುರಿಸುತ್ತಿದೆ.

ಅತ್ಯಂತ ಸಮರ್ಥ ಹಿರಿಯ ಅಧಿಕಾರಿಗಳು ಬ್ಯಾಂಕ್ ಬಿಟ್ಟುಬೇರೆ ಖಾಸಗಿ ಕ್ಷೇತ್ರದ ಬ್ಯಾಂಕ್/ಹಣಕಾಸು ಸಂಸ್ಥೆಗಳನ್ನು ಸೇರುತ್ತಿದ್ದಾರೆ. ಈ ಬ್ಯಾಂಕ್/ಸಂಸ್ಥೆಗಳಿಗೆ ಅವರಿಗೆ ಅತಿದೊಡ್ಡ ಮೊತ್ತದ ಸಂಬಳ ನೀಡಲಾಗುತ್ತಿದೆ.

ಭಾರತೀಯ ಸ್ಟೇಟ್ ಬ್ಯಾಂಕ್ ಈ ಅಧಿಕಾರಿಗಳಿಗೆ ತರಬೇತಿ ನೀಡಿ ಕೆಲಸದ ಅನುಭವ ನೀಡಿ ಅವರನ್ನು ಸಮರ್ಥ ಅನುಭವಿ ಅಧಿಕಾರಿಗಳಾಗಿ ಪರಿವರ್ತಿಸಿತ್ತು. ಬೇರಾವುದೇ ಖರ್ಚುಗಳು ಇಲ್ಲದೆ ಬರೀ ಹೆಚ್ಚಿನ ಸಂಬಳ ನೀಡುವ ಆಮಿಷದ ಮೇಲೆ ಈ ಬ್ಯಾಂಕುಗಳು ಇವರನ್ನು ಸೆಳೆದುಕೊಳ್ಳುತ್ತಿವೆ.

ಇದು ಭಾರತೀಯ ಸ್ಟೇಟ್ ಬ್ಯಾಂಕ್ ಒಂದರದ್ದೇ ಸಮಸ್ಯೆಯಲ್ಲ, ಎಲ್ಲ ರಾಷ್ಟ್ರೀಕೃತ ಬ್ಯಾಂಕುಗಳ ಸಮಸ್ಯೆ ಮುಂಬರುವ ದಿನಗಳಲ್ಲಿ ಇದು ಇನ್ನೂ ಹೆಚ್ಚಾಗಲಿದೆ.

ಬಂಡವಾಳಶಾಹೀ ದೇಶಗಳಲ್ಲಿ

- 24 ಶ್ರೀಮಂತ ದೇಶಗಳಲ್ಲಿ ನಿರುದ್ಯೋಗ 3.5 ಕೋಟಿ ಮುಟ್ಟಿತು
- 7 ದೊಡ್ಡ ಶ್ರೀಮಂತ ದೇಶಗಳಲ್ಲಿ ನಿರುದ್ಯೋಗ 2.4 ಕೋಟಿ!
- ಸ್ಪೇನಿನಲ್ಲಿ ಜನವರಿ 7ರಂದು 1 ಕೋಟಿ ದುಡಿಯುವ ಜನರ ಮುಷ್ಕರ
- ಜಪಾನಿನಲ್ಲಿ ಎಲ್‌ಡಿಪಿ ಅಧಿಕಾರ ಚ್ಯುತಿ ಜರ್ಮನಿಯಲ್ಲಿ ಕೋಹ್‌ಲ್‌ಗೆ ಭಾರಿ ಕಷ್ಟದ ಗೆಲುವು
- ಇಟಲಿಯಲ್ಲಿ ಆಳುವ ಪಕ್ಷಕ್ಕೆ ಸೋಲು-ವರ್ಷ ಮುಗಿಯುವ ವೇಳೆಗೆ ಹೊಸ ಬಲಪಂಥೀಯ ಪ್ರಧಾನಿಯೂ ಕುರ್ಚಿ ಬಿಟ್ಟರು

...ಟಿನ್ ಅಮೇರಿಕಾ ಅಮೇರಿಕನ್ ಸಾಮ್ರಾಜ್ಯ...ತ್ರಗಳ ವಿರುದ್ಧ ನಿಂತಿದೆ.

'ಹೊಸ ವಿಶ್ವ ವ್ಯವಸ್ಥೆ' ದೌರ್ಬಲ್ಯವನ್ನು ಬಯಲಿಗೆಳೆದ ಕೊರಿಯಾ, ಚೀಣಾ

ಇಲ್ಲಿ ಏಷ್ಯಾದಲ್ಲಿ ಸಮಾಜವಾದಿ ರಾಜತಾಂ...ಕತೆಯ ಒಂದು ಅಪೂರ್ವ ಪ್ರದರ್ಶನ ಕಂಡು...ತು. ಅಮೇರಿಕನ್ ಸಾಮ್ರಾಜ್ಯಶಾಹಿಯೆದುರು ...ವುದಕ್ಕೂ ಜಗ್ಗದ ದೃಢತೆಯನ್ನು ತೋರಿದ ...ತ್ತರ ಕೊರಿಯಾ ಯಾವುದೇ ಉದ್ರೇಕಕಾರಿ ...ಟುವಟಿಕೆಗೆ ಬಲಿಯಾಗದೆ ಅಮೇರಿಕನ್ ತಂತ್ರ...ವನ್ನು ಬಯಲಿಗೆಳೆಯಿತು. ಚೀಣಾ ಕೂಡಾ ...ಷ್ಟೇ ದೃಢ ನಿಲುವು ತಳೆದು ಕೊಲ್ಲಿ ಯುದ್ಧದಲ್ಲಿ ...ಮೇರಿಕಾ ವಿಶ್ವ ಸಂಸ್ಥೆಯನ್ನು ತನ್ನ ಅಗತ್ಯಗಳಿಗೆ ...ಕ್ಕಂತೆ ಕುಣಿಸಿದಂತೆ ಕುಣಿಸಲು ಬಿಡಲಿಲ್ಲ. ...ಮೇರಿಕಾದ "ಹೊಸ ವಿಶ್ವ ವ್ಯವಸ್ಥೆ"ಯ ...ರ್ಬಲ್ಯವನ್ನು ಬಯಲಿಗೆಳೆಯಿತು.

ವಿಶ್ವ ರಾಜಕೀಯದಲ್ಲಿ ಸಮಾಜವಾದಿ ಬಣದ ...ಯ ಅಭಾವದ ದುರುಪಯೋಗ ಪಡೆದು ...ಮ್ರಾಜ್ಯಶಾಹಿ ದೇಶಗಳು ಗ್ಯಾಟ್-1994ನ್ನು ...ರಿವೆ. ಇದರ ವಿರುದ್ಧ ಹಲವಾರು ಮೂರನೇ ...ಗತ್ತಿನ ದೇಶಗಳಲ್ಲಿ ವ್ಯಾಪಕ ಪ್ರತಿಭಟನೆಗಳು ...ದಿವೆ. ಈ ಹೋರಾಟ ಇನ್ನೂ ಮುಗಿದಿಲ್ಲ- ...ರನೇ ಜಗತ್ತಿನಲ್ಲಿ ಮಾತ್ರವಲ್ಲ, ಮುಂದುವ...ದ ದೇಶಗಳಲ್ಲೂ ಈ ಹೋರಾಟ ಮುಂದು...ಯುತ್ತಿದೆ.

ಮುಂದುವರಿದ ದೇಶಗಳಲ್ಲೂ ಪರಿಹಾರ ಕಾಣದ ಸಮಸ್ಯೆಗಳು

ಮುಂದುವರಿದ ಬಂಡವಾಳಶಾಹೀ ಜಗತ್ತಿನಲ್ಲೂ ಸಮಸ್ಯೆಗಳು ಪರಿಹಾರ ಕಂಡಿಲ್ಲ, ಜಗತ್ತಿನಲ್ಲಿ ಈಗ ಒಂದೇ ಸೂಪರ್ ಪವರ್ ಉಳಿದರೂ ಈ ಜಗತ್ತಿನ ಸಮಸ್ಯೆಗಳು ಪರಿಹಾರ ಕಾಣುವ ಬದಲು ಇನ್ನಷ್ಟು ಹದಗೆಟ್ಟಿವೆ. ಅಂದರೆ ಬಂಡವಾಳಶಾಹಿಯ ಸಮಸ್ಯೆ ಸಮಾಜವಾದಿ ಬಣದಿಂದಾಗಿ ಅಲ್ಲ, ಆ ಸಮಸ್ಯೆಗಳ ಮೂಲ ಬಂಡವಾಳಶಾಹಿ ವ್ಯವಸ್ಥೆಯೊಳಗೇ ಇದೆ ಎಂಬುದು ಸ್ಪಷ್ಟವಾಗುತ್ತದೆ.

24 ಅಭಿವೃದ್ಧಿ ಹೊಂದಿದ ದೇಶ ಸಂಘಟನೆಯಾದ OECD ಕಳೆದ ಜೂನ್‌ನಲ್ಲಿ ಮಾಡಿರುವ ಅಂದಾಜಿನ ಪ್ರಕಾರ ಈ ದೇಶಗಳಲ್ಲಿ ನಿರುದ್ಯೋಗಿಗಳ ಸಂಖ್ಯೆ 3.5 ಕೋಟಿ ತಲುಪಿದೆ. ಇದು ಒಟ್ಟು ದುಡಿಯುವ ಜನಗಳ ಶೇ. 8.5. ಏಳು ಶ್ರೀಮಂತ ದೇಶಗಳಲ್ಲಿ ಜುಲೈ 1994ರಲ್ಲಿ ನಿರುದ್ಯೋಗ 2.4 ಕೋಟಿ ಎಂದು ಅಂದಾಜು ಮಾಡಲಾಗಿದೆ. ಎರಡನೇ ಮಹಾಯುದ್ಧದ ನಂತರ ಇಷ್ಟೊಂದು ನಿರುದ್ಯೋಗ ಎಂದೂ ಕಂಡಿರಲಿಲ್ಲ.

ಇದರರ್ಥ ಹೆಚ್ಚೆಚ್ಚು ಜನರ ಮೇಲೆ ಸಂಕಷ್ಟಗಳ ಹೊರೆ. ಹಿಂದೆ ಸಮಾಜವಾದಿ ದೇಶಗಳಿದ್ದಾಗ ಅವುಗಳ ಸವಾಲನ್ನೆದುರಿಸಲು ಈ ಶ್ರೀಮಂತ ದೇಶಗಳು ತಮ್ಮ ದೇಶದ ಬಡವರ ಕಲ್ಯಾಣದ ಬಗ್ಗೆ ಮಾತನಾಡಬೇಕಾಗಿತ್ತು. "ಕಲ್ಯಾಣರಾಜ್ಯ" ಎಂಬ ಪರಿಕಲ್ಪನೆ ಆಗ ಬಂತು. ದುಡಿಯುವ ವರ್ಗಗಳ ಕೆಲವು ಸೌಲಭ್ಯಗಳಿಗಾಗಿ (ಉದಾ: ನಿವೃತ್ತಿ ವೇತನ ಇತ್ಯಾದಿ) 'ಸಾಮಾಜಿಕ ಖರ್ಚು'ಗಳನ್ನು ಸರಕಾರ ಮಾಡುವ ಪರಿಪಾಠ ಆರಂಭವಾಗಿತ್ತು. ಆದರೆ ಸಮಾಜವಾದೀ ಬಣ ಇಲ್ಲವಾದ ಮೇಲೆ ಈ ರೀತಿ ದುಡಿಯುವ ಜನರ ಕಲ್ಯಾಣಕ್ಕಾಗಿ ಹಣ ಖರ್ಚು ಮಾಡುವ ಅವಶ್ಯಕತೆ ಆ ದೇಶದ ಬಂಡವಾಳಶಾಹ ಸರಕಾರಗಳಿಗೆ ಕಾಣಿಸುತ್ತಿಲ್ಲ. ಇದರ ಫಲವೆಂದರೆ ಭಾರೀ ಅಭಿವೃದ್ಧಿ ಸಾಧಿಸುತ್ತಿರುವ ಜರ್ಮನಿಯಲ್ಲೂ ಲ ಲಕ್ಷ ಜನಕ್ಕೆ ತಲೆಯ ಮೇಲೊಂದು ಸೂರಿಲ್ಲ, 80 ಲಕ್ಷ ಜನ ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ಈ ಸಾಮಾಜಿಕ ಕಲ್ಯಾಣ ಖರ್ಚುಗಳಲ್ಲಿ ಅತೀ ಹೆಚ್ಚು ಕಡಿತ ಬಂದಿರುವುದು ಅಮೇರಿಕಾದಲ್ಲಿ, ಈ ಕಡಿತಗಳೂ ಸಾಲದೆಂಬಂತೆ ಈ ವರ್ಷ ಕ್ಲಿಂಟನ್ ಆಡಳಿತ ಇನ್ನೂ 70 ಲಕ್ಷ ಡಾಲರುಗಳಷ್ಟು ಕಡಿತ ಮಾಡಿದೆ.

ಇದರ ಪರಿಣಾಮವೆಂದರೆ ಒಂದೆಡೆ ಈ ಮುಂದುವರಿದ ದೇಶಗಳು ವ್ಯಾಪಕವಾದ ಕಾರ್ಮಿಕ ವರ್ಗದ ಕಾರ್ಯಾಚರಣೆಗಳು, ಇನ್ನೊಂದೆಡೆ ಇಂತಹ ಹಲವು ದೇಶಗಳಲ್ಲಿನ ನಡೆದ ಚುನಾವಣೆಗಳಲ್ಲಿ ಆಳುವ ಪಕ್ಷಗಳ ಪರಾಭವ.

ಸ್ಪೇನ್‌ನಲ್ಲಿ 1994 ಜನವರಿ 7ರಂದು ಅಲ್ಲಿನ 1.2 ಕೋಟಿ ದುಡಿಯುವ ಜನರಲ್ಲಿ ಶೇ. 90 ಮಂದಿ ಸಾರ್ವತ್ರಿಕ ಮುಷ್ಕರವನ್ನು ಬೆಂಬಲಿಸಿದರು. ಜಪಾನಿನಲ್ಲಿ ಎರಡನೇ ಮಹಾಯುದ್ಧದ ನಂತರ ಸತತವಾಗಿ ಅಲ್ಲಿನ ನಡೆಸಿರುವ ಎಲ್.ಡಿ.ಪಿ. ಅಧಿಕಾರ ಕಳಕೊಂಡಿತು. ಜರ್ಮನಿಯಲ್ಲಿ ಕೋಹ್ಲ್ ಬಹಳ ಕಷ್ಟದಿಂದ ಅಧಿಕಾರ ಉಳಿಸಿಕೊಂಡಿದ್ದಾರೆ. ಇಟಲಿಯಲ್ಲಿ ಆಳುವ ಪಕ್ಷ ಬಲಪಂಥೀಯರ ಎದುರು ಸೋತಿತು. ವರ್ಷ ಮುಗಿಯುವ ವೇಳೆಗೆ ಈ ಬಲಪಂಥೀಯರಿಗೂ ಅಧಿಕಾರ ಉಳಿಸಿಕೊಳ್ಳಲಾಗಲಿಲ್ಲ, ಎಡಪಕ್ಷಗಳು ಗಮನಾರ್ಹ ಮುನ್ನಡೆ ಸಾಧಿಸಿದವು. ಭವಿಷ್ಯದ ಅನಿಶ್ಚಿತತೆ ಬೂರ್ಜ್ವಾ ಪಕ್ಷಗಳನ್ನು ಇನ್ನಷ್ಟು ದೂರತಳ್ಳಲಿದೆ. ಜರ್ಮನಿಯ ಚುನಾವಣೆಗಳಲ್ಲಿ ಮಾಜಿ ಕಮ್ಯುನಿಸ್ಟರು ಗಮನಾರ್ಹ ಮುನ್ನಡೆ ಸಾಧಿಸಿದರು. ಅಮೇರಿಕಾದಲ್ಲಿ ಹಿಂದೆ ಭಾರೀ ವಿಜಯಗಳಿಸಿದ್ದ ಡೆಮೊಕ್ರಾಟರು ಎರಡೂ ಸದನಗಳಲ್ಲಿ ಬಹುಮತ ಕಳಕೊಂಡರು. ಯುರೋಪಿಯನ್ ಸಂಸತ್ತಿನಲ್ಲೂ ಇದೇ ಕಥೆ.

ಒಟ್ಟಿನಲ್ಲಿ ಬಂಡವಾಳಶಾಹಿಯ ಬಿಕ್ಕಟ್ಟು ಮತ್ತು ಅದರಿಂದ ಉಂಟಾದ ಅಸ್ಥಿರತೆ ಎಷ್ಟಿದೆ

ಪುಟ 7ಕ್ಕೆ

ಮೂರನೇ ಜಗತ್ತಿನಲ್ಲಿ

- ದಕ್ಷಿಣ ಆಫ್ರಿಕಾದಲ್ಲಿ ಎಎನ್‌ಸಿ ವಿಜಯ
- ಗಯಾನಾದಲ್ಲಿ ಚೆಡ್ಡಿ ಜಗನ್ ಮತ್ತೆ ಅಧಿಕಾರಕ್ಕೆ
- ಶ್ರೀಲಂಕಾದಲ್ಲಿ ಆಳುವ ಯುಎನ್‌ಪಿ ಸೋಲು-ಶಾಂತಿಯ ಯುಗದ ಭರವಸೆ
- ಬ್ರೆಜಿಲ್‌ನಲ್ಲಿ ಬಲಪಂಥೀಯರು ಗೆದ್ದರೂ ಕಮ್ಯುನಿಸ್ಟರ ಬಲವರ್ಧನೆ
- ಬಾರ್ಬಡೋಸ್‌ನಲ್ಲಿ ಪ್ರಗತಿಪರ ಮೈತ್ರಿ ಕೂಟಕ್ಕೆ ಗೆಲುವು
- ಚಿಲಿಯಲ್ಲಿ ಸರ್ವಾಧಿಕಾರಿಶಾಹಿಯ ಕೊನೆ ನೇಪಾಳದಲ್ಲಿ ಕಮ್ಯುನಿಸ್ಟ್ ಸರಕಾರ

ಮಾಜಿ ಸಮಾಜವಾದಿ ದೇಶಗಳಲ್ಲಿ

- ಹಂಗೇರಿಯಲ್ಲಿ ಮಾಜಿ ಕಮ್ಯುನಿಸ್ಟರ ಗೆಲುವು
- ರಷ್ಯಾದಲ್ಲೂ ಕಮ್ಯುನಿಸ್ಟರ ಒಂದು ಗಮನಾರ್ಹ ಶಕ್ತಿ
- ಬೆಲಾರೂಸ್, ಉಕ್ರೇನ್, ಕಝಾಕಿಸ್ತಾನಗಳಲ್ಲಿ ಮಾಜಿ ಕಮ್ಯುನಿಸ್ಟರು ಅಥವಾ ಕಮ್ಯುನಿಸ್ಟ್ ಬೆಂಬಲ ಪಡೆದ ಅಧ್ಯಕ್ಷರಾಗಿ ಆಯ್ಕೆ
- ಬಲ್ಗೇರಿಯಾದಲ್ಲಿ ಮಾಜಿ ಕಮ್ಯುನಿಸ್ಟರ ವಿಜಯ



ಖಾಸಗೀಕರಣ ವಿರುದ್ಧ ವಿದ್ಯಾರ್ಥಿ ದನಿ

ತ್ರಿಪುರಾ ರಾಜಧಾನಿ ಅಗರ್ತಲಾದಲ್ಲಿ ಡಿಸೆಂಬರ್ 23ರಂದು ಬೃಹತ್ ರ್‍ಯಾಲಿಯೊಂದು ನಡೆಯಿತು. ಇತ್ತೀಚಿನ ದಿನಗಳಲ್ಲೇ ಬಹುದೊಡ್ಡದಾದ ವಿದ್ಯಾರ್ಥಿ ರ್‍ಯಾಲಿ ಅದಾಗಿತ್ತು. ಶಿಕ್ಷಣವನ್ನು ಖಾಸಗೀಕರಿಸುವ ಕೇಂದ್ರ ಸರ್ಕಾರದ ನೀತಿಗೆ ಪ್ರತಿರೋಧವನ್ನು ದಾಖಲಿಸುವುದು ಈ ಪ್ರತಿಭಟನಾ ಕಾರ್ಯಕ್ರಮದ ಉದ್ದೇಶವಾಗಿತ್ತು.

ಸಾಮೂಹಿಕ ಧರಣಿಯನ್ನೂ ನಡೆಸಿದ ವಿದ್ಯಾರ್ಥಿಗಳು ರಾಜ್ಯದ ಶಿಕ್ಷಣ ಸಚಿವರಿದ್ದಲ್ಲಿಗೆ ನಿಯೋಗವನ್ನು ಕಳಿಸಿ ಕೇಂದ್ರ ಬಜೆಟ್ಟಿನಲ್ಲಿ ಶಿಕ್ಷಣಕ್ಕಾಗಿ ಶೇಕಡಾ ಹತ್ತನ್ನು ಮೀಸಲಿಡುವಂತೆ ಆಗ್ರಹಿಸಿದರು. ರಾಜ್ಯದ ವಿದ್ಯಾರ್ಥಿಗಳ ಜ್ವಲಂತ ಸಮಸ್ಯೆಗಳನ್ನು ಬಗೆಹರಿಸುವಂತೆಯೂ ಒತ್ತಾಯಿಸಿದರು.

ರಾಜ್ಯದೆಲ್ಲೆಡೆಯಿಂದ ಧಾವಿಸಿ ಬಂದಿದ್ದ ಹತ್ತು ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿ ಸಮೂಹವನ್ನುದ್ದೇಶಿಸಿ ಮಾತನಾಡಿದ ಶಿಕ್ಷಣ ಸಚಿವ ಅನಿಲ್ ಸರ್ಕಾರ್, ವಿದ್ಯಾರ್ಥಿಗಳ ಬೇಡಿಕೆಗೆ ಎಡರಂಗ ಸರಕಾರದ ಬೆಂಬಲವನ್ನು ಘೋಷಿಸಿದರು. ಹಣದ ಕೊರತೆಯಿಂದಾಗಿ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ರಾಜ್ಯ ಸರಕಾರಕ್ಕೆ ಸಾಧ್ಯವಿಲ್ಲ. ಬೇಡಿಕೆಗಳನ್ನು ಈಡೇರಿಸಿಕೊಳ್ಳಲಿಕ್ಕಾಗಿ ಸಂಘಟಿತ ಹೋರಾಟವನ್ನು ರೂಪಿಸುವಂತೆ ಅವರು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ಕರೆ ನೀಡಿದರು.

ಕೇಂದ್ರ ಸರ್ಕಾರ ಶಿಕ್ಷಣವನ್ನು ವಾಣಿಜ್ಯಕರಿಸುವುದರಿಂದ ಶೇಕಡ 99ರಷ್ಟು ವಿದ್ಯಾರ್ಥಿಗಳ ಅವರ ಜನ್ಮಸಿದ್ಧ ಹಕ್ಕುಗಳಿಂದ ವಂಚಿತರಾಗುತ್ತಾರೆ. ಎಂದು ಸರ್ಕಾರ್ ಆರೋಪಿಸಿದರು.

ಶಿಕ್ಷಣದ ಖಾಸಗೀಕರಣದ ವಿರುದ್ಧ ಕೇರಳ ಚಳುವಳಿಯ ಮಾದರಿಯಲ್ಲೇ ಹೋರಾಟವನ್ನು ತೀಕ್ಷ್ಣಗೊಳಿಸುವಂತೆ ಮುಖ್ಯ ಭಾಷಣಕಾರರಾಗಿದ್ದ ವಿದ್ಯಾರ್ಥಿ ನಾಯಕ ಸುಬೀರ್ ಚೌಧರಿ ಕರೆ ನೀಡಿದರು.

ಭಾರತೀಯ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಪ್ರತಿಭಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ದೆಹಲಿ ವಿವಿ ಚುನಾವಣೆಯಲ್ಲಿ ಶಿಕ್ಷಕರ ಜಯ

ದೆಹಲಿ ವಿಶ್ವವಿದ್ಯಾಲಯದ ಕಾರ್ಯನಿರ್ವಾಹಕ ಮಂಡಳಿ(ಇ.ಸಿ.) ಮತ್ತು ಅಕಾಡೆಮಿಕ್ ಕೌನ್ಸಿಲ್(ಎ.ಸಿ.)ಗೆ ನಡೆದ ಚುನಾವಣೆಗಳಲ್ಲಿ ಪ್ರಜಾಸತ್ತಾತ್ಮಕ ಶಿಕ್ಷಕರ ರಂಗ (ಡಿ.ಟಿಎಫ್)ಕ್ಕೆ ಅದ್ಭುತ ವಿಜಯ ಸಿಕ್ಕಿದೆ.

ಇ.ಸಿ.ಗೆ ಸ್ಪರ್ಧಿಸಿದ್ದ ಡಿ.ಟಿ.ಎಫ್. ಉಪಾಧ್ಯಕ್ಷ ಡಾ. ಬದ್ರಿರೈನಾ ಅತ್ಯಂತ ಹೆಚ್ಚು ಅಂದರೆ 1690 ಮತಗಳನ್ನು ಗಳಿಸಿ ಆಯ್ಕೆಯಾದರು. ಇನ್ನೊಂದು ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್ ಪರ ಅಭ್ಯರ್ಥಿ ಬಿಜೆಪಿಯ ಬೆಂಬಲದಿಂದ ಗೆದ್ದರು!

ಎ.ಸಿ.ಗೆ ಸ್ಪರ್ಧಿಸಿದ್ದ ಡಿ.ಟಿ.ಎಫ್.ನ ಎಲ್ಲಾ ಮೂರು ಅಭ್ಯರ್ಥಿಗಳಾದ ನಂದಿತಾ ನಾರಾಯಣ, ವಿರೇಂದ್ರ ಲಾಲ್ ಮತ್ತು ಡಾ. ವಿಭಾ ಮೌರ್ಯ ಗೆದ್ದಿದ್ದಾರೆ.

ಈ ಚುನಾವಣಾ ವಿಜಯಕ್ಕೆ ತುಂಬಾ ಮಹತ್ವವಿದೆ. ವಿ.ವಿ. ಮತ್ತು ದೆಹಲಿ ವಿ.ವಿ. ಶಿಕ್ಷಕರ ಸಂಘದ (ಡಿ.ಯು.ಟಿ.ಎ.) ಜೀವನದ ನಿರ್ಣಾಯಕ ಕಾಲಘಟ್ಟದಲ್ಲಿ ಈ ಜಯ ದಾಖಲಾಗಿದೆ.

ಒಂದೆಡೆ, ವಿಶ್ವವಿದ್ಯಾಲಯ ಧನ ಸಹಾಯ ಆಯೋಗ (ಯುಜಿಸಿ) ದೆಹಲಿ ವಿವಿಗೆ ನೀಡುತ್ತಿದ್ದ ಅನುದಾನವನ್ನು ಕಡಿಮೆ ಮಾಡುತ್ತಿದ್ದುದರಿಂದ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಅಪಾಯ ಉಂಟಾಗುತ್ತಿದೆ. ಹಾಗೂ ನರಸಿಂಹರಾವ್-ಮನಮೋಹನ್ ಸಿಂಗ್ ಕೂಟಕ್ಕೆ ಪ್ರಿಯವಾದ ರೀತಿಯಲ್ಲಿ ವಿ.ವಿ. ಶಿಕ್ಷಣವನ್ನು ಖಾಸಗೀಕರಿಸುವ ಒತ್ತಡಕ್ಕೆ ಒಳಗಾಗುತ್ತಿದೆ.

ಇನ್ನೊಂದೆಡೆ, ಬಿಜೆಪಿ ಮತ್ತು ಕಾಂಗ್ರೆಸ್ (ಐ) ಪರವಾಗಿರುವ ವ್ಯಕ್ತಿಗಳು ಡಿ.ಯು.ಟಿ.ಎ.ಯ ಹೋರಾಟದ ಪಾತ್ರವನ್ನು ತಗ್ಗಿಸಲು ಯತ್ನಿಸುತ್ತಿದ್ದವು. ಇಂಥ ಸನ್ನಿವೇಶದಲ್ಲಿ ನಡೆದ ಚುನಾವಣೆಗಳಲ್ಲಿ ಡಿ.ಟಿ.ಎಫ್. ಪಡೆದ ಗೆಲುವು ತುಂಬಾ ಮಹತ್ವದ್ದಾಗಿದೆ.

ದೆಹಲಿ ವಿ.ವಿ.ಯ ಶಿಕ್ಷಣ ಖಾಸಗೀಕರಣ ಯತ್ನದ ವಿರುದ್ಧ ಹೋರಾಟಕ್ಕೆ ಈ ಜಯದಿಂದ ಬಲಸಿಕ್ಕಿದೆ.

'ಮಾಡು ಇಲ್ಲವೆ ಮಡಿ' ಚಳವಳಿ ಹಾದಿಯಲ್ಲಿ ಉ.ಪ್ರ. ನೌಕರರು

ಹೋರಾಟದ ಕಣದಲ್ಲಿರುವ ಉತ್ತರ ಪ್ರದೇಶದ ಸರಕಾರೀ ನೌಕರರು ಹಾಗೂ ಶಿಕ್ಷಕರು ರಾಜ್ಯದ ಸಮಾಜವಾದಿ ಪಕ್ಷ (ಎಸ್.ಪಿ.)-ಬಹುಜನ ಸಮಾಜ ಪಕ್ಷ (ಬಿ.ಎಸ್.ಪಿ.) ಸರಕಾರದೊಂದಿಗೆ ಸಂಘರ್ಷಕ್ಕೆ ಇಳಿದಿದ್ದಾರೆ. ಏಳು ಲಕ್ಷಕ್ಕಿಂತಲೂ ಹೆಚ್ಚಿನ ಸದಸ್ಯರನ್ನು ಹೊಂದಿರುವ ಎರಡು ದೊಡ್ಡ ಸಂಘಟನೆಗಳು 'ಮಾಡು ಇಲ್ಲವೆ ಮಡಿ' ಚಳವಳಿಗೆ ನೌಕರರನ್ನು ಸಜ್ಜುಗೊಳಿಸಲಾಗುತ್ತಿದೆ.

ಚಳವಳಿಯ ಅಂಗವಾಗಿ ಪ್ರತಿಬಂಧಕಾಜ್ಞೆಗಳನ್ನು ಉಲ್ಲಂಘಿಸಿ ಪ್ರತಿ ತಾಲೂಕು ಹಾಗೂ ೬೫ ಜಿಲ್ಲಾ ಕೇಂದ್ರಗಳಲ್ಲಿ ಮೆರವಣಿಗೆ ಹಾಗೂ ಸಭೆಗಳನ್ನು ನಡೆಸುವಂತೆ ಉತ್ತರ ಪ್ರದೇಶ ರಾಜ್ಯ ನೌಕರರ ಮಹಾ ಒಕ್ಕೂಟ ಮತ್ತು ರಾಜ್ಯದ ನೌಕರರ ಜಂಟಿ ಮಂಡಳಿ ಕರೆ ನೀಡಿದೆ.

ಈ ನಡುವೆ, ಆಳುವ ಸಮಾಜವಾದಿ ಪಕ್ಷದ ಭಿನ್ನಮತೀಯ ಶಾಸಕರ ಗುಂಪು ಪ್ರವೀಣಸಿಂಗ್ಅರನ್ ನೇತೃತ್ವದಲ್ಲಿ ಚಳವಳಿಗೆ ಬೆಂಬಲ ನೀಡಿದೆ. ಇದರಿಂದ ಹೋರಾಟ ನಿರತ ನೌಕರರಿಗೆ ಹುಮ್ಮಸ್ಸು ಜಾಸ್ತಿಯಾಗಿದೆ. ನೌಕರರ ಅನಿರ್ದಿಷ್ಟಾವಧಿ ಹೋರಾಟ ಜನವರಿ ಮೂರರಂದು 28ನೇ ದಿನವನ್ನು ತಲುಪಿತು.

ಡಿ.ವೈ.ಎಫ್.ಐ. ಸಭೆ

ಮಂಗಳೂರು: ದಿನನಿತ್ಯದ ಸಮಸ್ಯೆಗಳಿಗೆ ಸ್ಪಂದಿಸಲು ಡಿ.ವೈ.ಎಫ್.ಐಯನ್ನು ಬಲಿಷ್ಠಪಡಿಸುವುದು ಇಂದಿನ ಅಗತ್ಯವಾಗಿದ್ದು, ಯುವಜನರು ಈ ನಿಟ್ಟಿನಲ್ಲಿ ಸಂಘಟಿತರಾಗಬೇಕು. ಜಾತಿ-ಭೇದವಿಲ್ಲದೆ ಬದುಕಲು ಹೊಸ ಸಾಮಾಜಿಕ ಅಭಿವೃದ್ಧಿಗಾಗಿ ಯುವಜನರ ಕೊಡುಗೆ ನೀಡಲು ಯುವಜನರು ಸಂಘಟಿತರಾಗಿ ಹೋರಾಟ ಮಾಡಬೇಕೆಂದು ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಸಮಿತಿ ಅಧ್ಯಕ್ಷರಾದ ಕೆ. ಯಾದವ ಶೆಟ್ಟಿಯವರು ಡಿಸೆಂಬರ್ 25, 1994 ರಂದು ಗುಜ್ಜರಕೆರೆ, ಗೋರಕದಂಡು ಯುವಜನರನ್ನುದ್ದೇಶಿಸಿ ಮಾತನಾಡಿದರು.

ಸಭೆಯಲ್ಲಿ ಉಪಸ್ಥಿತರಿದ್ದ ರೈತ ಕಾರ್ಮಿಕ ಮುಖಂಡ ಬಿ. ವಿಷ್ಣು ಮೂರ್ತಿಯವರು ಸೂಕ್ತ ಮಾರ್ಗದರ್ಶನ ನೀಡಿದರು.

ಸಭೆಯು ಮುಂದಿನ ಚಟುವಟಿಕೆಗಾಗಿ ಹೊಸ ಕಾರ್ಯಕಾರಿ ಸಮಿತಿಯನ್ನು ರಚಿಸಿತು. ಅಧ್ಯಕ್ಷರಾಗಿ ರವೀಂದ್ರ ಪಿಲಾರ್, ಉಪಾಧ್ಯಕ್ಷರಾಗಿ ಸುಧಾಕರ್, ಕಾರ್ಯದರ್ಶಿಯಾಗಿ ಪ್ರವೀಣ್, ಸಹ ಕಾರ್ಯದರ್ಶಿಯಾಗಿ ಜಗದೀಶ್, ಕೋಶಾಧಿಕಾರಿಯಾಗಿ ದಿನೇಶ್ ರವರನ್ನೊಳಗೊಂಡ ೧೫ ಮಂದಿಯ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಸುಧಾಕರ್ ರವರು ಪ್ರಾರಂಭದಲ್ಲಿ ಸ್ವಾಗತಿಸಿ, ಕೊನೆಯಲ್ಲಿ ವಂದಿಸಿದರು.

ಪುರಭವನದ ದುರಸ್ತಿಗೆ ಒತ್ತಾಯ

ಮನರಂಜನೆ, ಸಾಂಸ್ಕೃತಿಕ, ಇನ್ನಿತರ ಕಾರ್ಯಕ್ರಮ ನೀಡುವ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಮಂಗಳೂರು ಪುರಭವನ ಅವ್ಯವಸ್ಥೆಯ ಆಗರವಾಗಿದೆ. ಇರುವಂತಹ ಸೀಟು (ಆಸನ)ಗಳಲ್ಲಿ 25 ಶೇ. ಕ್ಕೂ ಹೆಚ್ಚು ಸೀಟುಗಳು ಉಪಯೋಗಕ್ಕೆ ಬಾರದಾಗಿದೆ. ಜನರೇಟರ್ ಸರಿಯಾಗಿ ಸ್ಪಂದಿಸುತ್ತಿಲ್ಲ, ಫ್ಯಾನು ಇತ್ಯಾದಿಗಳು ಊಟಕ್ಕಿಲ್ಲದ ಉಪ್ಪಿನಕಾಯಿಯಾಗಿದೆ. ಆದರೆ ಮನರಂಜನಾ ತೆರಿಗೆ ಶುಲ್ಕ ಖಾಯಂ ಆಗಿ ಕೊಡಲೇ ಬೇಕು. ಈ ಬಗ್ಗೆ ಸಂಬಂಧಪಟ್ಟವರು ಕೂಡಲೇ ಗಮನ ಹರಿಸಿ ದುರಸ್ತಿ ಮಾಡಬೇಕೆಂದು ಡಿಸೆಂಬರ್ 18, 1994 ರಂದು ಅಶೋಕ್ ಶ್ರೀಯಾನ್ ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಡಿ.ವೈ.ಎಫ್.ಐ. ಮಂಗಳೂರು ನಗರ ಸಮಿತಿ ನಿರ್ಣಯ ಅಂಗೀಕರಿಸಿದೆ.

ಸಭೆಯಲ್ಲಿ ಡಿ.ವೈ.ಎಫ್.ಐ. ದ.ಕ. ಜಿಲ್ಲಾ ಅಧ್ಯಕ್ಷರಾದ ಕೆ. ಯಾದವ್ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಜಿಲ್ಲಾ ಸಮಿತಿ ಖಜಾಂಚಿ ಕೃಷ್ಣಪ್ಪ ಕೊಂಚಾಡಿ ಹಾಜರಿದ್ದು ಸೂಕ್ತ ಮಾರ್ಗದರ್ಶನ ನೀಡಿದರು.

ಪ್ರಾರಂಭದಲ್ಲಿ ರವಿಚಂದ್ರ ಕೊಂಚಾಡಿ ಸ್ವಾಗತಿಸಿ, ಅಶೋಕ್ ಸಾಲ್ಯಾನ್ ರವರು ಧನ್ಯವಾದವನ್ನು ಅರ್ಪಿಸಿದರು.

ಜೀವ ವಿಮಾ ನೌಕರರಿಂದ ಮಂಗಳಗಟ್ಟಿಯಲ್ಲಿ "ಅಕ್ಷರ ಜ್ಯೋತಿ" ಕಾರ್ಯಕ್ರಮ

ಸಾಮಾಜಿಕ ಭದ್ರತೆ ಯೋಜನೆ ಅಡಿಯಲ್ಲಿ ಧಾರವಾಡ ಭಾರತೀಯ ಜೀವ ವಿಮಾ ವಿಭಾಗವು ಧಾರವಾಡ ತಾಲೂಕಿನ 'ಮಂಗಳ ಗಟ್ಟಿ' ಗ್ರಾಮವನ್ನು ಸಂಪೂರ್ಣ ಸಾಕ್ಷರತೆಗಾಗಿ ದತ್ತು ಗ್ರಾಮವಾಗಿ ಸ್ವೀಕರಿಸಿದ್ದು, ಇದರ ಅಂಗವಾಗಿ ಇತ್ತೀಚೆಗೆ ಧಾರವಾಡ ಜೀವವಿಮಾನಿಗಮದ ಹಿರಿಯ ಅಧಿಕಾರಿಗಳಾದ ಬಿ.ಎನ್.ಸುಬ್ಬರಾವ್ ಅವರು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಿದರು. ಜೀವವಿಮಾ ಉದ್ಯೋಗಿಗಳು ಅನಕ್ಷರಸ್ಥರ ಗಣತಿ ಮಾಡಿಮಂಗಳಗಟ್ಟಿಯ ಯುವಕ-ಯುವತಿಯರೊಂದಿಗೆ ಆಹಳ್ಳಿಯ ಸಂಪೂರ್ಣ ಸಾಕ್ಷರತೆಯ ಜವಾಬುದಾರಿಯನ್ನು ಹೊತ್ತಿದ್ದಾರೆ.

ಇದರ ಪೂರ್ವಭಾವಿ ಕಾರ್ಯಕ್ರಮ, ವಾತಾವರಣ ನಿರ್ಮಾಣಕ್ಕೊಸ್ಕರ ಸಾಂಸ್ಕೃತಿಕ ಕಾರ್ಯಕ್ರಮ ನೆರವೇರಿತು. ಶ್ರೀ ದಿಲ್‌ಶ್ಯಾದ್, ಅಂಜುಮನ್ ಕಾಲೇಜಿನ ಪ್ರಿನ್ಸಿಪಾಲರೂ ಮತ್ತು ಜಿಲ್ಲಾ ಸಾಕ್ಷರ ದೀಪಪಸಮಿತಿಯ ಕಾರ್ಯದರ್ಶಿಯವರು ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿದ್ದರು. ಅದೇ ಊರಿನ ಚೇರ್‌ಮನ್‌ರಾದ ಶ್ರೀ ಧರ್ಮಗೌಡರು ಅಧ್ಯಕ್ಷತೆ ವಹಿಸಿದ್ದರು. ಧಾರವಾಡ ವಿಭಾಗೀಯ ಕಛೇರಿಯ ಮಾರ್ಕೆಟಿಂಗ್ ಮ್ಯಾನೇಜರ್ ಕೃಷ್ಣ ಮೂರ್ತಿಯವರು ಮತ್ತು ಗುಂಪು ವಿಮೆ ಶಾಖೆಯ ಶಾಖಾಧಿಕಾರಿ ಶಶಿಕುಮಾರ್‌ರವರೂ ಹಾಜರಿದ್ದರು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ 'ಓದು ಬಾರದ ಒಕ್ಕಲುಗಿತ್ತಿ' 'ಹೆಣ' 'ಹಾವಾಡಿಗ' ಮತ್ತು 'ರೈತನ ಗೋಳು' ಕಿರು ಬೀದಿ ನಾಟಕಗಳು ಮಂಗಳಗಟ್ಟಿಯ 300ಕ್ಕೂ ಹೆಚ್ಚು ಜನರನ್ನು ಸಂತೋಷ ಸಾಗರದಲ್ಲಿ ತೇಲುವಂತೆ ಮಾಡುವಲ್ಲಿ ಜೀವವಿಮಾವಿಭಾಗದ ಕಲಾವಿದರು ಯಶಸ್ವಿಯಾದರು.

ಭೀಮಸೇನ್ ಕಾಗಿ, ತಾ.ಭ.ಚವ್ಹಾಣ, ಬಿ.ಐ. ಈಳಿಗೇರ, ಮುದೆನ್ನವರ, ಡಿ.ಜಿ.ಕುಲಕರ್ಣಿ, ಅಶೋಕ ಕೆಂಚನಹಳ್ಳಿ, ರಾಮಣ್ಣನವರ, ಮುಲ್ಲಾ, ಕುಮಾರಿ ಸುರೇಖಾ ಶಿಂಧೆ ಮತ್ತು ಸ್ಥಳೀಯ ಕಲಾವಿದೆ ಕುಮಾರಿ ರೂಪಾ ಹುಣಶೀಕಟ್ಟಿ ಉತ್ತಮವಾಗಿ ಅಭಿನಯಿಸಿದರೆ, ಎಂ.ಎಲ್.ಜೋಶಿ ಮತ್ತು ಪಿ. ಗೋವಿಂದರಾಜುಲು ಅವರು ಸಾಕ್ಷರತೆಯ ಮಧುರಗೀತೆಯನ್ನು ಹಾಡಿ ಜನರನ್ನು ರಂಜಿಸುವಲ್ಲಿ ಯಶಸ್ವಿಯಾದರು. ಒಟ್ಟಾರೆ ಒಂದೂವರೆ ತಾಸಿನ ಸಾಕ್ಷರತೆಯ ಬಗ್ಗೆ ಮನರಂಜನೆ ಕಾರ್ಯಕ್ರಮ ಮಂಗಳಗಟ್ಟಿಯ ಜನರ ಹೃದಯಕ್ಕೆ ತಾಗಿ, ರಾತ್ರಿ ಶಾಲೆಗೆ ತಪ್ಪದೇ ಬರುತ್ತೇವೆ ಎಂದರು. ಕಾರ್ಯಕ್ರಮದ ನಿರ್ದೇಶನವನ್ನು ಭೀಮಸೇನ್ ಕಾಗಿ ಮತ್ತು ಬಿ.ಐ. ಈಳೀಗೇರ ವಹಿಸಿದ್ದರು.

ಸ್ಥಳೀಯ ಯುವಕರಾದ ಮಲ್ಲಿಕಾರ್ಜುನಗೌಡಾ ಪಾಟೀಲ, ಕುಮಾರಿ ರೂಪಾ ಹುಣಶೀಕಟ್ಟಿ, ಮೇದಾರ, ಹಂಚಿನಮನಿ ಮತ್ತು ಗೆಳೆಯರು ಈ ಕಾರ್ಯಕ್ರಮಕ್ಕೆ ಸಹಕರಿಸಿದರು.

ಬಿ.ಐ. ಈಳಿಗೇರ ಸ್ವಾಗತಿಸಿದರು. ಭೀಮಶೇನ್ ಕಾಗಿ ಕೊನೆಯಲ್ಲಿ ವಂದನಾರ್ಪಣೆ ಮಾಡಿದರು.

ನಂಜನಗೂಡು-ಗೂಡಲೂರು-ನೀಲಬೂರು ರೈಲು ಮಾರ್ಗ ನಿರ್ಮಿಸಿ ಸಿಪಿಐ(ಎಂ) ನೀಲಗಿರಿ ಜಿಲ್ಲಾ ಸಮ್ಮೇಳನ ಒತ್ತಾಯ

ಇತ್ತೀಚೆಗೆ ಉದಕಮಂಡಲಂನಲ್ಲಿ ನಡೆಸಿ ಸಿಪಿಐ(ಎಂ)ನ ನೀಲಗಿರಿ ಜಿಲ್ಲಾ ಸಮ್ಮೇಳನ ಒಂದು ನಿರ್ಣಯವನ್ನು ಅಂಗೀಕರಿಸಿ ನೀಲಂಬೂರು, ಚೌರಂಬಾಡಿ ರೈಲು ಮಾರ್ಗವನ್ನು ಹೊಂದಾಣಿಕೆ ಮಾಡಿ ಗೂಡಲೂರು ಸೇರಿಸಿ ರೈಲು ಮಾರ್ಗ ನಿರ್ಮೀಸಿದರೆ ಗೂಡಲೂರು ತಾಲೂಕಿನ ಜನರಿಗೆ ಹಾಗೂ ನೀಲಗಿರಿಯಿಂದ ಪ್ರತಿದಿನ ಸಾಗಾಣಿಕೆಯಾಗುವ ತರಕಾರಿ ಇತ್ಯಾದಿ ಮಾರಾಟಗಾರರಿಗೆ ಅನುಕೂಲವಾಗುತ್ತದೆ ಎಂದು ನಿರ್ಣಯ ಅಭಿಪ್ರಾಯಪಟ್ಟಿದೆ. ಪ್ರತಿದಿನ ನೂರಾರು ತರಕಾರಿ ಲಾರಿಗಳ ನೀಲಗಿರಿಯಿಂದ ಮೈಸೂರು, ಬೆಂಗಳೂರು ನಗರಗಳಿಗೆ ಬರುತ್ತವೆ. ಆದ್ದರಿಂದ ಈ ರೈಲು ಮಾರ್ಗ ನಿರ್ಮಾಣದಿಂದ ಮೈಸೂರು ಬೆಂಗಳೂರುಗಳಿಗೂ ಸಮರ್ಪಕ ಸಂಪರ್ಕ ಏರ್ಪಟ್ಟು ಸಾರ್ವಜನಿಕರ ಪ್ರಯಾಣ ಹಾಗೂ ಸಾಗಾಣಿಕೆ ಸುಗಮವಾಗುತ್ತದೆ. ಅಲ್ಲದೆ ಪ್ರವಾಸೋದ್ಯಮಕ್ಕೂ ಪ್ರಯೋಜನವಾಗುತ್ತದೆ. ಆದ್ದರಿಂದ ಈ ಮಾರ್ಗವನ್ನು ನಿರ್ಮಿಸುವಂತೆ ತಮಿಳುನಾಡು ಸರಕಾರ ಕೇಂದ್ರ ಸರಕಾರವನ್ನು ಒತ್ತಾಯಿಸಬೇಕೆಂದು ಜಿಲ್ಲಾ ಸಮ್ಮೇಳನ ಆಗ್ರಹಪಡಿಸಿದೆ.

ಹೊಸ ಭರವಸೆ ಮೂಡಿಸಿದ ವರ್ಷ...............

ಪುಟ 5ರಿಂದ

ಯಿತು. ಮತಪ್ರದರ್ಶಕರ ಮೇಲೆ ಕಳೆದ 23 ವರ್ಷಗಳಲ್ಲಿ ಕಾಣದಷ್ಟು ದೀರ್ಘಕಾಲ ಅಶ್ರುವಾಯು ಪ್ರಯೋಗ ನಡೆಯಿತು.

ಆಗಸ್ಟ್-ಸೆಪ್ಟೆಂಬರ್ ತಿಂಗಳಲ್ಲಿ ನಾಲ್ಕು ಎಡಪಕ್ಷಗಳ ನೇತೃತ್ವದಲ್ಲಿ ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಕಾನೂನುಭಂಗ ಚಳುವಳಿ ದೇಶಾದ್ಯಂತ ನಡೆಯಿತು. 12 ಲಕ್ಷ ಮಂದಿ ಕಾನೂನು ಮುರಿದು ಜೈಲಿಗೆ ಹೋದರು. ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯೂ ಹೋರಾಟದ ಕಣದಲ್ಲಿಳಿದು ಒಂದು ಶಕ್ತಿಶಾಲೀ 'ಭಾರತ ಬಂದ್' ನಡೆಸಿ "ಆರ್ಥಿಕ ಸುಧಾರಣೆ"ಗಳ ವೇಗ ತಗ್ಗಿಸಿತು.

ಕೋಮುವಾದದ ವಿರುದ್ಧವೂ ಎಡಪಕ್ಷಗಳು ಒಂದು ಪ್ರಚಾರ ಕಾರ್ಯ ನಡೆಸಿದವು. ಇದರಿಂದ ಬಿಜೆಪಿ ತನ್ನ ಯೋಜನೆಗಳ ಮರುಪರಿಶೀಲನೆ ನಡೆಸಬೇಕಾಯಿತು.

ಭ್ರಷ್ಟಾಚಾರದ ವಿರುದ್ಧ ಹೋರಾಟದಲ್ಲಿ ಕೆಲವು ಜಾತ್ಯತೀತ ಪಕ್ಷಗಳೂ ರಾಷ್ಟ್ರೀಯ ಮಟ್ಟದಲ್ಲಿ ಹಾಗೂ ಕೆಲವು ರಾಜ್ಯಗಳಲ್ಲಿ ಎಡಪಕ್ಷಗಳ ಜತೆಗೂಡಿದವು. ಈ ಹೋರಾಟಗಳು ಈಗ ಕಾಂಗ್ರೆಸ್(ಐ) ಮತ್ತು ಬಿಜೆಪಿ ಎರಡನ್ನೂ ಸೋಲಿಸುವುದು ಹೇಗೆ ಎಂಬ ಪ್ರಶ್ನೆಯನ್ನೂ ಜನರ ಮುಂದಿಟ್ಟಿವೆ. 1994ರ ಕೊನೆಯ ವೇಳೆಗೆ ಬಂದ ಕರ್ನಾಟಕ, ಆಂಧ್ರ ಮತದಾರರ ತೀರ್ಪು ಭಾರತದ ರಾಜಕಾರಣ ಯಾವ ದಿಕ್ಕಿನಲ್ಲಿ ಸಾಗಿದೆ ಎಂಬುದನ್ನು ತೋರಿಸಿದೆ.

ಇಡೀ ದೇಶವನ್ನು ತೆಗೆದುಕೊಂಡಾಗ ಎಡಶಕ್ತಿಗಳು ತಾವಾಗಿಯೇ ಒಂದು ಪರ್ಯಾಯವನ್ನು ಮುಂದಿಡುವ ಸ್ಥಿತಿಯಲ್ಲಿಲ್ಲ ಎಂಬುದು ಬೇಸರದ ಸಂಗತಿಯೆಂಬುದು ನಿಜ. ಆದರೂ ಎಡಶಕ್ತಿಗಳ ನೀತಿಬದ್ಧ ನಿಲುವು, ಹೋರಾಟದಲ್ಲಿ ದೃಢತೆಯನ್ನು ಜನ ಗುರುತಿಸಿದ್ದಾರೆ. ಬೆಳೆಯುತ್ತಿರುವ ರಾಜಕೀಯ ಸನ್ನಿವೇಶದಲ್ಲಿ ಮಧ್ಯಪ್ರವೇಶಿಸುವ ಗಮನಾರ್ಹ ಶಕ್ತಿಯೂ ಎಡಪಕ್ಷಗಳಿಗಿವೆ ಎಂದು ಜನ ಕಂಡಿದ್ದಾರೆ

ಇಲ್ಲಿ ಜಾತ್ಯತೀತ ಪಕ್ಷಗಳು ಒಂದು ಪಾಠ ಕಲಿಯಬೇಕಾಗಿದೆ. ಕಾಂಗ್ರೆಸ್(ಐ) ಅನುಸರಿಸಿದ ನೀತಿಗಳನ್ನೇ ಈ ಪಕ್ಷಗಳೂ ಅನುಸರಿಸದೆ ಪರ್ಯಾಯ ಸುಸಂಗತ ನಿಲುವು ತಳೆಯಬೇಕಾಗಿದೆ. ಎಡಪಕ್ಷಗಳೊಂದಿಗೆ ಸತತ ಸಹಕಾರದ ನಿಲುವು ತಳೆಯಬೇಕಾಗಿದೆ. ಆಗಲೇ ಕಾಂಗ್ರೆಸ್(ಐ) ಸೃಷ್ಟಿಸಿದ ಹೊಲಸಿನಿಂದ ದೇಶವನ್ನು ಹೊರಗೆ ತರುವ ಪ್ರಯತ್ನ ನಡೆಸಲು ಸಾಧ್ಯ.

ಕಳೆದ ಕೆಲವು ವರ್ಷಗಳಲ್ಲಿ ಕಾಂಗ್ರೆಸ್(ಐ)ನ ಹೊಸ ಆರ್ಥಿಕ ನೀತಿಗಳು ನಮ್ಮ ಸ್ವಾವಲಂಬೀ ಬೆಳವಣಿಗೆಯ ದಾರಿ ತಪ್ಪಿಸಿದ್ದರೆ, ಕೋಮುವಾದಿ ಪಕ್ಷಗಳು ವಾತಾವರಣವನ್ನು ಕಲುಷಿತಗೊಳಿಸಿವೆ. ಆದರೆ ಒಂದು ದೂರದೃಷ್ಟಿಯ ನಿಲುವು ತಳೆದರೆ ಈ ಎರಡೂ ಬೆದರಿಕೆಗಳನ್ನು ಎದುರಿಸಿ ನಿಲ್ಲಲು ಸಾಧ್ಯ ಎಂಬ ಆಶಾಭಾವನೆಯೊಂದಿಗೆ ೧೯೯೪ ಮುಗಿದಿದೆ. ಕಾಂಗ್ರೆಸ್‌ನ ಅಧಿಕಾರದ ಗುತ್ತೇದಾರಿಕೆಯ ದಿನ ಮುಗಿದಿವೆ. ಅದಕ್ಕೊಂದು ಪರ್ಯಾಯ ರೂಪಿಸಲು ಜಾತ್ಯತೀತ ಪಕ್ಷಗಳು ಎಡಪಕ್ಷಗಳೊಡನೆ ಸೇರಿಕೊಳ್ಳ ಬೇಕಾದ ಸಮಯ ಬಂದಿದೆ. ಆದರೆ ಇಂತಹ ಪರ್ಯಾಯ ಮೇಲಟ್ಟದಲ್ಲಿನ ಕಸರತ್ತುಗಳಿಂದ ಮೂಡಿಬರಲಾರದು. ಜನಗಳ ನಡುವೆ ಹೋಗಿ ಒಂದು ಸುಸಂಗತವಾದ ಹೋರಾಟದ ಕಾರ್ಯಕ್ರಮದ ಮೂಲಕ ಮಾತ್ರವೇ ಅದು ಸಾಧ್ಯ.

ಬಾಂಗ್ಲಾದೇಶದಲ್ಲಿ ರಾಜಕೀಯ ಬಿಕ್ಕಟ್ಟು

ಪ್ರತಿಪಕ್ಷಗಳ ಸಂಸತ್ ಸದಸ್ಯರ ರಾಜೀನಾಮೆ

ಬಾಂಗ್ಲಾದೇಶದಲ್ಲಿ ಕಳೆದ ಮಾರ್ಚ್ ತಿಂಗಳಿಂದ ನಡೆಯುತ್ತಿದ್ದ ಮೂರು ಪ್ರಮುಖ ವಿರೋಧ ಪಕ್ಷಗಳ ಆಂದೋಲನ ಈಗ ನಿರ್ಣಾಯಕ ಘಟ್ಟ ತಲುಪಿದಂತಿದೆ. ಡಿಸೆಂಬರ್ 28 ರಂದು 330 ಸದಸ್ಯರಿರುವ ಬಾಂಗ್ಲಾದೇಶ್ ಸಂಸತ್ತಿನ 153 ಪ್ರತಿಪಕ್ಷಗಳ ಸದಸ್ಯರು ರಾಜೀನಾಮೆ ನೀಡಿದರು. ಬೇಗಂ ಖಲಿದಾ ಜಿಯಾರ ಸರಕಾರದ ಉಸ್ತುವಾರಿಯಲ್ಲಿ ಮುಂದಿನ ಸಾರ್ವತ್ರಿಕ ಚುನಾವಣೆ ನಡೆಯಬಾರದು ಎಂಬ ಬೇಡಿಕೆಯಿಟ್ಟ ಅವಾಮಿ ಲೀಗ್, ಜಾತೀಯ ಪಾರ್ಟಿ ಮತ್ತು ಜಮಾತ್-ಎ-ಇಸ್ಲಾಮಿ ಪಕ್ಷಗಳು ಡಿಸೆಂಬರ್ 27ರ ಒಳಗೆ ಈ ಬೇಡಿಕೆಯನ್ನು ಒಪ್ಪಿಕೊಳ್ಳದಿದ್ದರೆ ಸಾಮೂಹಿಕ ರಾಜೀನಾಮೆ ನೀಡುವುದಾಗಿ ಬೆದರಿಸಿದ್ದರು.

ಬಾಂಗ್ಲಾದೇಶ ಪ್ರಧಾನಿ ಈ ಬೇಡಿಕೆಯನ್ನು ಒಪ್ಪಿಕೊಳ್ಳದ್ದರಿಂದ ಪ್ರತಿಪಕ್ಷದ ಸಂಸತ್ ಸದಸ್ಯರು ರಾಜೀನಾಮೆ ನೀಡಿದರು. ಮರುದಿನವೇ ಬಾಂಗ್ಲಾದೇಶಾದ್ಯಂತ ೮ ಗಂಟೆಗಳ ಸಾರ್ವತ್ರಿಕ ಮುಷ್ಕರ ನಡೆದಿದೆ. ಈಗ ಚುನಾವಣೆಯ ೩೦ ದಿನಗಳ ಮೊದಲು ತಾನು ಅಧಿಕಾರವನ್ನು ಅಧ್ಯಕ್ಷರಿಗೆ ವರ್ಗಾಯಿಸುವುದಾಗಿ ಭರವಸೆ ನೀಡಿದರೂ ವಿರೋಧ ಪಕ್ಷಗಳು ರಾಜೀನಾಮೆ ನೀಡಿರುವುದು ದುರದೃಷ್ಟಕರ ಎಂದು ಪ್ರಧಾನಿ ಬೇಗಂ ಜಿಯಾ ಹೇಳಿದರೆ, ಪ್ರತಿಪಕ್ಷದ ಮುಖಂಡರಾದ ಅವಾಮೀ ಲೀಗ್ ನ ಶೇಕ್ ಹಸೀನಾ ವಜೀದ್ "ಈಗಿನ ಸರಕಾರ ಅಧಿಕಾರದಲ್ಲಿರುವವರಿಗೆ ಮುಕ್ತ, ನ್ಯಾಯ ಚುನಾವಣೆ ಸಾಧ್ಯವಾಗಲಾರದು" ಎಂದಿದ್ದಾರೆ. ಸರಕಾರ ಸಂಸತ್ತನ್ನು ನಿಷ್ಪ್ರಯೋಜಕಗೊಳಿಸಿದೆ ಎಂದು ಅವರು ಆಪಾದಿಸಿದ್ದಾರೆ. "ಜಾತ್ಯತೀತತೆಯನ್ನು ಬಾಂಗ್ಲಾದೇಶದ ಸಂವಿಧಾನದಲ್ಲಿ ಪ್ರತಿಷ್ಠಾಪಿಸಲಾಗಿತ್ತು. ಆದರೆ ಈಗಿನ ಪ್ರಧಾನಿಗಳ ಪತಿ ಜಿಯಾವುಲ್ ರೆಹಮಾನ್ ರು ಅಧ್ಯಕ್ಷರಾಗಿದ್ದಾಗ ಧರ್ಮ-ಆಧಾರಿತ ರಾಜಕೀಯ ಪಕ್ಷಗಳನ್ನು ಕಾನೂನುಬದ್ಧಗೊಳಿಸಿದರು. ಅವರು ಬಿತ್ತಿದ ಬೀಜದ ಕಹಿಫಲಗಳನ್ನು ನಾವೀಗ ಉಣ್ಣಬೇಕಾಗಿದೆ" ಎಂದು ಶೇಕ್ ಹಸೀನಾ ವಾಜೀದ್ ಹೇಳಿದ್ದಾರೆ.

ಖಾಲಿದಾ ಜಿಯಾ ಸರಕಾರ ರಾಜೀನಾಮೆ ನೀಡಬೇಕೆಂದು ಒತ್ತಾಯಿಸಿ ಜನವರಿ ೨, ೩ ಹಾಗೂ ೪ ರಂದು ೮ ಗಂಟೆಗಳ ಮುಷ್ಕರಕ್ಕೆ ಮೂರು ಪ್ರತಿಪಕ್ಷಗಳು ಕರೆ ನೀಡಿದವು.

ಬ್ರಿಟನ್ನಿನಲ್ಲಿ ಖಾಸಗೀಕರಣಕ್ಕೊಂದು ತಡೆ

1979ರಲ್ಲಿ ಮಾರ್ಗರೆಟ್ ಥ್ಯಾಚರ್ ಸರ್ಕಾರ ಆರಂಭಿಸಿದ ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣದ ದುಷ್ಫಲಗಳನ್ನು ಕಂಡ ಬ್ರಿಟನ್ನಿನ ಜನ ನವಂಬರ್ ೩ ರಂದು ಈ ಖಾಸಗೀಕರಣ ಪ್ರಕ್ರಿಯೆಗೊಂದು ಬಲವಾದ ತಡೆ ಹಾಕಿದ್ದಾರೆ. ನೀರು, ಅನಿಲ, ವಿದ್ಯುತ್, ಟೆಲಿಫೋನ್ ಗಳನ್ನು ಖಾಸಗೀಕರಿಸಿದ ಮೇಲೆ ಬ್ರಿಟಿಶ್ ಸರಕಾರದ ಖಾಸಗೀಕರಣದ ಖಯಾಲಿ ಅಲ್ಲಿನ ಅಂಚೆ ವ್ಯವಸ್ಥೆಯ ಮೇಲೆ ಕಣ್ಣು ಹಾಕುವಂತೆ ಮಾಡಿತು. ಆದರೆ ಬ್ರಿಟನ್ನಿನ ಜನತೆಯ ದೃಢ ವಿರೋಧದಿಂದಾಗಿ ಸದ್ಯ ಆ ಪ್ರಯತ್ನವನ್ನೂ ಕೈ ಬಿಡಲಾಗಿದೆ.

ಅಂಚೆ ವ್ಯವಸ್ಥೆ ಬ್ರಿಟನ್ ಜನತೆಯ ಪ್ರೀತಿಯ ಒಂದು ಸಂಸ್ಥೆ. ನಿವೃತ್ತಿ ವೇತನ, ಡ್ರೈವಿಂಗ್, ಟಿ.ವಿ. ರೇಡಿಯೋ ಲೈಸೆನ್ಸ್ ಗಳು, ವಿವಿಧ ಬಿಲ್ ಪಾವತಿಗಳು ಈ ಸಂಸ್ಥೆಯ ಮೂಲಕವೇ ನಡೆಯುತ್ತಿವೆ. ಇದು ಖಾಸಗೀ ಹದ್ದುಗಳ ಕೈಗೆ ಹೋದರೆ ಗ್ರಾಮಾಂತರಗಳಲ್ಲಿ ಅಂಚೆ ವ್ಯವಸ್ಥೆಯನ್ನ ತೀವ್ರ ಕಡಿತವಾಗುತ್ತದೆ, ಅಂಚೆ ಕಾರ್ಮಿಕರ ಸಂಖ್ಯೆಯಲ್ಲೂ ಕಡಿತವಾಗುತ್ತದೆ ಎಂದು ಇತರ ಸೇವೆಗಳ ಖಾಸಗೀಕರಣದ ಅನುಭವದಿಂದ ಕಂಡ ಜನ ಇದನ್ನು ಪ್ರತಿಭಟಿಸಿದರು. ಇದರ ವಿರುದ್ಧ 17.5 ಲಕ್ಷ ಸಹಿ ಸಂಗ್ರಹ ನಡೆಸಿದರು. ಸಂಸತ್ತಿನಲ್ಲಿ ಲೇಬರ್ ಮತ್ತು ಲಿಬರಲ್ ಪಕ್ಷಗಳು ಅಂಚೆ ವ್ಯವಸ್ಥೆಯ ಖಾಸಗೀಕರಣ ಮಸೂದೆಯನ್ನು ವಿರೋಧಿಸಿದರು. 'ಸಂಪರ್ಕ ಕಾರ್ಮಿಕರ ಸಂಘ'ಈ ಪ್ರತಿಭಟನೆಯ ನೇತೃತ್ವ ವಹಿಸಿತ್ತು. ಗ್ರಾಮಾಂತರಗಳಲ್ಲಿನ ಸಬ್‌ಪೋಸ್ಟ್‌ಮಾಸ್ಟರ್ ಫೆಡರೇಷನ್ ಕೂಡಾ ಕೈ ಜೋಡಿಸಿತು.

ನೀರು, ವಿದ್ಯುತ್, ಇತ್ಯಾದಿ ಸೇವೆಗಳ ಖಾಸಗೀಕರಣದಿಂದ ಪ್ರಯೋಜನವಾದದ್ದು ಭಾರೀ ಲಾಭವಾದದ್ದು ಅವುಗಳ ಖಾಸಗೀ ಮಾಲಕರಿಗೆ ಹಾಗೂ ಅವರಿಗೆ ಅವನ್ನು ವಹಿಸಿಕೊಟ್ಟ ಕನ್ಸರ್ವೇಟಿವ್ ಪಕ್ಷದ ಮುಖಂಡರುಗಳಿಗೆ ಎಂದು ಬ್ರಿಟನ್ನಿನ ಜನ ತಮ್ಮ ಅನುಭವದಿಂದಲೇ ಕಂಡುಕೊಂಡಿದ್ದರು. ಖಾಸಗೀ ಮಾಲಕರ ಹೆಚ್ಚುತ್ತಿದ್ದ ಲಾಭ ಸೇವೆಗಳ ದರವನ್ನು ಕಮ್ಮಿ ಮಾಡಲೂ ಇಲ್ಲ, ಗುಣಮಟ್ಟವನ್ನು ಹೆಚ್ಚಿಸಲೂ ಇಲ್ಲ, ಆದ್ದರಿಂದಲೇ ಅಂಚೆ ಸೇವೆಯ ಖಾಸಗೀಕರಣದ ಪ್ರಶ್ನೆ ಬಂದಾಗ ಅದನ್ನು ವಿರೋಧಿಸಿ ನಡೆಸಿದ ಪ್ರಚಾರಕ್ಕೆ ಭಾರೀ ಸ್ಪಂದನ ದೊರೆಯಿತು. "ಇದು ಬ್ರಿಟನ್ ಜನತೆಯ ವಿಜಯ. ಸಾರ್ವಜನಿಕ ಅಭಿಪ್ರಾಯಕ್ಕೆ ಗಮನ ನೀಡಿರುವುದು ಸಂತೋಷದ ವಿಷಯ" ಎಂದು ಸಂಪರ್ಕ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಆಲನ್‌ಜಾನ್ಸನ್ ಹೇಳಿದ್ದಾರೆ.

ಚೆಚೆನ್ಯಾದಲ್ಲಿ ಇನ್ನೂ ನಿಲ್ಲದ ಗುಂಡಿನ ಕಾಳಗ

೧೯೯೧ ರಲ್ಲಿ ರಶ್ಯಾದಿಂದ ಸ್ವಾತಂತ್ರ್ಯ ಘೋಷಿಸಿದ ಚೆಚೆನ್ಯಾದಲ್ಲಿ ಕಳೆದ ಕೆಲವು ದಿನಗಳಿಂದ ಸತತ ಕಾದಾಟ ನಡೆದಿದೆ. ಕಾಕಸಸ್ ಪ್ರದೇಶದ ಈ ತೈಲ ತುಂಬಿದ ಪ್ರದೇಶದಲ್ಲಿ ಈಗ ಪ್ರತಿದಿನ ಗುಂಡಿನ ಚಕಮಕಿ ನಡೆಯುತ್ತಿದೆ. ನೂರಾರು ಜನ ಈಗಾಗಲೇ ಇದಕ್ಕೆ ಬಲಿಯಾಗಿದ್ದಾರೆ. ಬಹಳಷ್ಟು ಆಸ್ತಿ-ಪಾಸ್ತಿ ನಷ್ಟವಾಗಿದೆ. ಚೆಚೆನ್ಯಾದ ರಾಜಧಾನಿ ಗ್ರೋಝ್ನಿಯಲ್ಲಿ ರಶ್ಯನ್ ಪಡೆಗಳು ಮೇಲುಗೈ ಪಡೆದಿವೆ ಎಂದು ಯೆಲ್ಸ್‌ಸಿನ್ ಸರಕಾರ ಹೇಳಿಕೊಂಡರೂ ರಶ್ಯನ್ ಪಡೆಗಳು ಸಫಲರಾದಂತೆ ಕಾಣುತ್ತಿಲ್ಲ, ಈ ನಡುವೆ ಚೆಚೆನ್ಯಾದ ಅಧ್ಯಕ್ಷ ದುದಾಯೆವ್ ಎಲ್ಲಿದ್ದಾರೆಂದು ತಿಳಿದಿಲ್ಲ, ಆದರೆ ರಶ್ಯಾದ ಪ್ರಧಾನ ಮಂತ್ರಿ ಚೆರ್ನೊಮಿರ್ಡಿನ್ ಗೆ ಬರೆದ ಪತ್ರದಲ್ಲಿ ರಶ್ಯಾದ ಪಡೆಗಳು ನುಗ್ಗಿದ ಬಗ್ಗೆ ಮಾತುಕತೆ ನಡೆಸಬೇಕೆಂದು ಒತ್ತಾಯಿಸಿದ್ದಾರೆ. ಗ್ರೋಝ್ನಿಯತ್ತ ನುಗ್ಗಿದ್ದು "ಆಕ್ರಮಣಕಾರರಿಗೆ ಒಂದು ಪ್ರಳಯವಾದರೆ, ಅದನ್ನು ರಕ್ಷಿಸುವವರಿಗೆ ಒಂದು ದುರಂತ" ಎಂದು ಅವರು ಹೇಳಿದ್ದಾರಂತೆ.

ಈ ನಡುವೆ ೧೯೯೪ ರಲ್ಲಿ ಈ ಪ್ರದೇಶದಲ್ಲಿ ಶಾಂತಿ, ಸಾಮಾನ್ಯ ಸ್ಥಿತಿ ತರುವುದಾಗಿ ಯೆಲ್ಟ್ ಸಿನ್ ಪ್ರತಿಜ್ಞೆ ಮಾಡಿದ್ದಾರಂತೆ. ಈ ಪ್ರತಿಜ್ಞೆ ನೆರವೇರಿಸಲು ಎಲ್ಲಾ ಕಾರ್ಯಸಾಧ್ಯ ಪ್ರಯತ್ನ ನಡೆಸುವುದಾಗಿ ಹೇಳಿದ್ದಾರೆ. ಹಿಂದಿನ ಸೋವಿಯೆತ್ ಒಕ್ಕೂಟ ವಿವಿಧ ದೇಶೀ ಗುಂಪುಗಳಿಗೆ ಸಮಾನತೆ ನೀಡುವ ತನ್ನ ನೀತಿಯ ಭಾಗವಾಗಿ ಚೆಚೆನ್ಯಾಕ್ಕೆ ಸ್ವಾಯತ್ತತೆ ನೀಡಿತ್ತು. ಆದರೆ ಯೆಲ್ಟ್ ಸಿನ್ ಈ ದೇಶೀ ಸಮಸ್ಯೆಗೆ ಬಂಡವಾಳಶಾಹಿ ಮಾದರಿಯಲ್ಲಿ ಮಿಲಿಟರಿ ಪರಿಹಾರ ಮಾತ್ರ ಸಾಧ್ಯ ಎಂದು ನಂಬಿದಂತಿದೆ.

ಶ್ರೀಲಂಕಾ ಸರಕಾರ-ಎಲ್.ಟಿ.ಟಿ.ಇ. ಶಾಂತಿ ಮಾತುಕತೆ

ಶ್ರೀಲಂಕಾ ಸರಕಾರ ಹಾಗೂ ಎಲ್.ಟಿ.ಟಿ.ಇ. ನಡುವೆ ಈ ಬಂಡಾಯಗಾರರು ಹಿಡಿದಿರುವ ಜಾಫ್ನಾದಲ್ಲಿ ಜನವರಿ ೩ರಂದು ಶಾಂತಿ ಮಾತುಕತೆಯ ಎರಡನೇ ಸುತ್ತು ಆರಂಭವಾಗಿದೆ. ಶ್ರೀಲಂಕಾ ಸರಕಾರದ ತಂಡದಲ್ಲಿ ಮೊತ್ತಮೊದಲ ಬಾರಿಗೆ ಇಬ್ಬರು ಹಿರಿಯ ಮಿಲಿಟರಿ ಅಧಿಕಾರಿಗಳೂ ಇದ್ದಾರೆ. ಇದರಿಂದಾಗಿ ಬೇಗನೇ ಅಲ್ಲಿ ಯುದ್ಧವಿರಾಮ ಜ್ಯಾರಿಗೆ ಬರಬಹುದೆಂಬ ನಿರೀಕ್ಷೆಯಿದೆ. ಹೊಸ ವರ್ಷದ ಹಿಂದಿನ ದಿನ ಕೋಲಂಬೋದಲ್ಲಿ ತಮಿಳು ಪಕ್ಷವೊಂದರ ಪ್ರಮುಖ ಮುಖಂಡರ ಕೊಲೆ, ಜನವರಿ ೧ ರಂದು ಶ್ರೀಲಂಕಾದ ಇಬ್ಬರು ಸೈನಿಕರ ಸಾವಿಗೆ ಎಲ್.ಟಿ.ಟಿ.ಇ. ದಾಳಿಗಳೇ ಕಾರಣ ಎಂಬ ಭಾವನೆಯಿದ್ದರೂ ಇದರಿಂದ ಶಾಂತಿ ಮಾತುಕತೆಗಳಿಗೆ ಅಡ್ಡಿಯಾಗಬಾರದು ಎಂದು ಚಂದ್ರಿಕಾ ಕುಮಾರತುಂಗಾ ಸರಕಾರ ಮಾತುಕತೆಗಳನ್ನು ಆರಂಭಿಸಿದೆ ಎಂದು ತಿಳಿದು ಬಂದಿದೆ.

"ಕ್ಷಮಿಸಿ ಬಿಡಿ" ಎಂದ ಅಮೇರಿಕನ್ ಪೈಲಟ್

ಡಿಸೆಂಬರ್ ೧೭ರಂದು ಉತ್ತರ ಕೊರಿಯಾದೊಳಗೆ ಪ್ರವೇಶಿಸಿದ ಅಮೇರಿಕಾದ ಸೇನಾ ಹೆಲಿಕಾಪ್ಟರ್‌ನ ಪೈಲಟ್ ಡೇವಿಡ್ ಹಾಲ್ ತಾನು ಗೂಢಚರ್ಯೆ ಕೆಲಸದಲ್ಲಿ ಉತ್ತರ ಕೊರಿಯಾದ ವಾಯುಪ್ರದೇಶದಲ್ಲಿ ನುಗ್ಗಿದೆ, ಇದಕ್ಕಾಗಿ ತನ್ನನ್ನು ಕ್ಷಮಿಸಬೇಕಾಗಿ ಕೋರಿರುವುದಾಗಿ ಸುದ್ದಿಯಾಗಿದೆ. ತನ್ನ ಈ ಕೃತ್ಯ "ಕ್ರಿಮಿನಲ್, ಅಕ್ಷಮ್ಯ ಅನಗತ್ಯವಾದ ಕೃತ್ಯ" ಎಂದು ಆತ ಹೇಳಿದ್ದಾನಂತೆ. ವಾಯುಪ್ರದೇಶ ಉಲ್ಲಂಘಿಸಿದಾಗ ಉತ್ತರ ಕೊರಿಯಾ ವಾಯು ರಕ್ಷಣಾ ವ್ಯವಸ್ಥೆಗೆ ಈ ಅಮೇರಿಕನ್ ಹೆಲಿಕಾಪ್ಟರ್ ತುತ್ತಾದುದರಿಂದ ಅದರಲ್ಲಿದ್ದ ಇನ್ನೊಬ್ಬ ಪೈಲಟ್ ಹಿಲ್ಮನ್ ಸಾವಿಗೀಡಾದ ಎಂದು ಹೇಳಲಾಗಿದೆ. ಆತನ ಹೆಣವನ್ನು ಅಮೇರಿಕನ್ ಸೇನೆಗೆ ಹಿಂದಿರುಗಿಸಲಾಯಿತು. ಆದರೆ ಬದುಕುಳಿದ ಪೈಲಟ್ ಹಾಲ್‌ನನ್ನು ಉತ್ತರ ಕೊರಿಯಾದ ವಾಯುಪ್ರದೇಶದ ಉಲ್ಲಂಘನೆಗೆ ಅಮೇರಿಕನ್ ಸರಕಾರ ಖೇದ ವ್ಯಕ್ತಪಡಿಸಿದ ಮೇಲೆಯೇ ಬಿಡುಗಡೆ ಮಾಡಲಾಯಿತು. ಈ ಉಲ್ಲಂಘನೆ ಆಕಸ್ಮಿಕ ಎಂದು ಅಮೇರಿಕನ್ ಸರಕಾರ ವಕ್ತಾರರು ಹೇಳಿಕೊಂಡಿದ್ದಾರೆ. ಬಂಧನದಲ್ಲಿ ತನ್ನೊಡನೆ ಉತ್ತರ ಕೊರಿಯಾದ ಅಧಿಕಾರಿಗಳು ಚೆನ್ನಾಗಿ ನಡಕೊಂಡರು ಎಂದು ಹಾಲ್ ಹೇಳಿದ್ದಾನೆ.

ಲೋಕಸಂಚಾರ



-ಶರತ್‌ಚಂದ್ರ

ಕೆನಡಾ-ಅಮೇರಿಕಾ "ಸಾಂಸ್ಕೃತಿಕ ಯುದ್ಧ"

ಕಳೆದ ವರ್ಷ ಹೊಸ ವರ್ಷದ ದಿನದಂದು ಅಮೇರಿಕಾ-ಕೆನಡಾ ಮೆಕ್ಸಿಕೊಗಳ ನಡುವೆ ನಾಫ್ತಾ ವ್ಯಾಪಾರ ಒಪ್ಪಂದ ಏರ್ಪಟ್ಟಿತ್ತು. ಇದನ್ನು ಪ್ರತಿರೋಧಿಸಿ ಆ ದಿನ ಮೆಕ್ಸಿಕೋದ ಮೂಲನಿವಾಸಿ ರೈತಾಪಿ ಜನ ಬಂಡೆದದ್ದು ನಮ್ಮ ಓದುಗರಿಗೆ ನೆನಪಿರಬಹುದು. ಈ ವರ್ಷದ ಮೊದಲ ದಿನದಂದು ಅದೇ ನಾಫ್ತಾದ ಸಿರಿವಂತ ಭಾಗೀದಾರರಾದ ಅಮೇರಿಕಾ ಮತ್ತು ಕೆನಡಾದ ನಡುವೆ ಒಂದು ರೀತಿಯ ಕಹಿಯುದ್ಧ ಆರಂಭವಾಗಿದೆಯಂತೆ. ಕೆನಡಾಕ್ಕೆ ಅಮೇರಿಕದ "ಸಾಂಸ್ಕೃತಿಕ ರಫ್ತ"ನ್ನು ಕೆನಡಾದವರು ವಿರೋಧಿಸುತ್ತಿದ್ದಾರೆ. ಈ 'ಸಾಂಸ್ಕೃತಿಕ ಯುದ್ಧ' ದ ಇತ್ತೀಚಿನ ಸುತ್ತು ಅಮೇರಿಕಾದ ಕ್ರೀಡಾ ಪತ್ರಿಕೆ "ಸ್ಪೋರ್ಟ್ಸ್ ಇಲಸ್ಟ್ರೇಟೆಡ್" ನ ಕೆನಡಾ ಆವೃತ್ತಿಯ ಮೇಲೆ ಅಲ್ಲಿ ಸರಕಾರ ಶೇ. ೮೦ ಅಬಕಾರಿ ಸುಂಕ ಹೇರಿದಾಗ ಆರಂಭವಾಗಿದೆ. ಕೆನಡಾದ ಪ್ರಕಾಶನ ಸಂಸ್ಥೆಗಳು "ನಮ್ಮ ಸ್ವಂತಿಕೆ ಉಳಿಸಿಕೊಳ್ಳಲು" ಬಲವಾಗಿ ಪ್ರತಿಭಟಿಸಿದ್ದರಿಂದ ಕೆನಡಾ ಸರ್ಕಾರ ಈ ಕ್ರಮ ಕೈಗೊಳ್ಳಬೇಕಾಗಿ ಬಂತು. ಇದು ಕೆನಡಾದ ಮ್ಯಾಗಝಿನ್‌ಗಳಿಗೆ ಬಂದಿರುವ ಸಂಚಕಾರ, ಅವುಗಳ ಸೀಮಿತ ಜಾಹೀರಾತು ಆದಾಯವನ್ನೂ ಹೊಡೆದು ಹಾಕುತ್ತವೆಂದು ಕೆನಡಾ ಪರಂಪರೆ ಕುರಿತಾದ ಮಂತ್ರಿ ಮೈಖೆಲ್ ಡೆಪ್ಪು ಪತ್ರಿಕಾ ಸಮ್ಮೇಳನವೊಂದರಲ್ಲಿ ಹೇಳಿದ್ದಾರೆ.

"ಚೀಣಾದ ಮಾದರಿ ಅನುಸರಿಸಿ"

'ವಿಶ್ವ ಆಹಾರ ಕಾರ್ಯಕ್ರಮದ' ಸಲಹೆ

ಬಡತನ ಕಡಿಮೆ ಮಾಡುವಲ್ಲಿ ಚೀಣಾದ ಮಾದರಿ ಭಾರತದಂತಹ ದೇಶಗಳಿಗೆ ಅನುಕರಣೀಯ ಪಾಠ ನೀಡುತ್ತದೆ ಎಂದು "ವಿಶ್ವ ಆಹಾರ ಕಾರ್ಯಕ್ರಮ" ದ ಕಾರ್ಯದರ್ಶಿ ಮಂಡಳಿ ತಯಾರಿಸಿದ ಒಂದು ಪ್ರಬಂಧ ಅಭಿಪ್ರಾಯಪಟ್ಟಿದೆ. ಆರ್ಥಿಕ ಬೆಳವಣಿಗೆಯ ಮಹತ್ವವನ್ನು ಒತ್ತಿ ಹೇಳುತ್ತಲೇ ಚೀಣಾದ ಸರಕಾರ ಬಡತನವನ್ನು ಕಮ್ಮಿ ಮಾಡುವ, ಅಂತಿಮವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಡತನವನ್ನು ನಿರ್ಮೂಲ ಮಾಡುವುದರ ಮಹತ್ವವನ್ನು ಅರಿತಿತ್ತು ಎಂದು ಈ ಪ್ರಬಂಧ ಗಮನಿಸಿದೆ.

1994 - ಹಿನ್ನೋಟ

ಪುಟ 5ರಿಂದ

ಯೆಂಬುದು ಎಲ್ಲೆಲ್ಲಿ ಎರಡು ಶಕ್ತಿಗಳು ಬಲ ಹೊಂದಿವೆಯೊ ಅಲ್ಲಿ ಅವುಗಳ ಹೆಚ್ಚಿದ ಪ್ರಭಾವದಿಂದ ಕಂಡು ಬಂದರೆ, ಹೀಗೆ ಎಡ ಶಕ್ತಿಗಳ ಬಲವಿಲ್ಲದ್ದಲ್ಲಿ ಹೊಸ ಫ್ಯಾಸಿಸ್ಟ್ ಬಲಪಂಥೀಯ ಶಕ್ತಿಗಳ ಬಲ ಹೆಚ್ಚಿದೆ. ಒಂದು ಸುಸಂಗತವಾದ ಎಡ ಅಥವಾ ಕಮ್ಯುನಿಸ್ಟ್ ನಿಲುವು ಪ್ರಯೋಜನಕಾರಿ, ಅದಿಲ್ಲದೆ ಬಂಡವಾಳಶಾಹಿಯನ್ನು ಸುಧಾರಿಸಬಹುದೆಂದು ಭಾವಿಸುವವರು ಮೂಲೆಗೊತ್ತಲ್ಪಡುತ್ತಾರೆ ಎಂದು ಮತ್ತೊಮ್ಮೆ ಸಿದ್ಧವಾಯಿತು.

ಮೂರನೇ ಜಗತ್ತಿನಲ್ಲಿ ಮಹತ್ವದ ಬೆಳವಣಿಗೆಗಳು

ಆದರೆ ವರ್ಷದ ಅತೀ ಮಹತ್ವದ ಬೆಳವಣಿಗೆಗಳಾದದ್ದು ಮೂರನೇ ಜಗತ್ತಿನಲ್ಲಿ, ದಕ್ಷಿಣ ಆಫ್ರಿಕಾದಲ್ಲಿ ಅದಮ್ಯ ಚೇತನ ನೆಲ್ಸನ್ ಮಂಡೇಲಾರ ನೇತೃತ್ವದಲ್ಲಿ ಎ.ಎನ್.ಸಿ.ಯ ಚಾರಿತ್ರಿಕ ವಿಜಯ ವರ್ಣದ್ವೇಷಿ ಆಳ್ವಿಕೆಯನ್ನು ಕೊನೆಗೊಳಿಸಿತಷ್ಟೇ ಅಲ್ಲ, ಸುತ್ತಲಿನ ಗಡಿದೇಶಗಳನ್ನು ಸಾಮ್ರಾಜ್ಯಶಾಹಿ ಪ್ರಾಬಲ್ಯದಿಂದ ಮುಕ್ತಗೊಳಿಸಿತು.

ಬೇರೆ ದೇಶಗಳಲ್ಲೂ ದೊಡ್ಡ ಬದಲಾವಣೆಗಳಾಗಿವೆ. ಗಯಾನಾದಲ್ಲಿ ಚೆಡ್ಡಿ ಜಗನ್‌ರ ಜನತಾಪಾರ್ಟಿ ಮತ್ತೆ ಅಧಿಕಾರ ಪಡೆಯಿತು. 25 ವರ್ಷಗಳ ಹಿಂದೆ ಸಿಐಎ ಪ್ರೇರಿತ ಕುತಂತ್ರದಿಂದ ಅದು ಮೂಲೆಗೊತ್ತಲ್ಪಟ್ಟಿತು. ನಮೀಬಿಯಾದಲ್ಲಿ ಸ್ವಾಪೋ (SWAPO) ಸಾಮ್‌ನ ಜೋಮೋ ನೇತೃತ್ವದಲ್ಲಿ ಶೇ. 75ಕ್ಕೂ ಹೆಚ್ಚು ಮತಗಳಿಸಿ ಬೃಹತ್ ವಿಜಯ ಸಾಧಿಸಿತು. ಶ್ರೀಲಂಕಾದಲ್ಲಿ ಆಳುವ ಯು.ಎನ್.ಪಿ. ಸೋತು ಈ ಹಿಂಸಾಚಾರದ ಪೀಡಿತ ದ್ವೀಪದಲ್ಲಿ ಶಾಂತಿಯ ಯುಗ ಆರಂಭವಾಗುವ ಭರವಸೆ ಮೂಡಿಸಿತು. ಬ್ರೆಝಿಲ್‌ನಲ್ಲಿ ಬಲಪಂಥೀಯರು ಅಧಿಕಾರ ಪಡೆದರೂ ಕಮ್ಯುನಿಸ್ಟರ ಬೆಂಬಲ ಹೆಚ್ಚಿತು. ಬಾರ್ಬಡೋಸ್‌ನಲ್ಲಿ ಆಳುವ ಪಕ್ಷ ಒಂದು ಪ್ರಗತಿಪರ ಮೈತ್ರಿಕೂಟದೆದುರು ಸೋತಿತು. ಅರ್ಜೆಂಟಿನಾದಲ್ಲಿ ಕಮ್ಯುನಿಸ್ಟ್ ಗೆರಿಲ್ಲಾಗಳು ತಮ್ಮ ನೆಲೆಯನ್ನು ಉಳಿಸಿಕೊಂಡು ಬಲಪಂಥೀಯ ARDNA ಮೂರನೇ ಎರಡು ಬಹುಮತಗಳಿಸದಂತೆ ಮಾಡಿದ್ದಾರೆ. ಚಿಲಿಯಲ್ಲಿ ಅಲೆಂದೆಯವರ ಕೊಲೆ ಮಾಡಿ ಅಧಿಕಾರ ಗಿಟ್ಟಿಸಿದ್ದ ಸರ್ವಾಧಿಕಾರಶಾಹಿ ಸೋತು 1970ರ ನಂತರ ಮೊದಲ ಬಾರಿಗೆ ಒಂದು ಪ್ರಜಾಸತ್ತಾತ್ಮಕ ಸರಕಾರ ಚುನಾಯಿತವಾಯಿತು. ಆದರೆ ಈ ವರ್ಷದ ಅತ್ಯಂತ ಮಹತ್ವದ ಬೆಳವಣಿಗೆಯೆಂದರೆ ನೆರೆಯ ದೇಶ ನೇಪಾಳದಲ್ಲಿನ ಚುನಾವಣೆ. ಅಲ್ಪಮತದ ಸರಕಾರ ರಚಿಸಿದ ನೇಪಾಳ ಕಮ್ಯುನಿಸ್ಟ್ ಪಕ್ಷ(ಐಕ್ಯ ಮಾರ್ಕ್ಸ್‌ವಾದಿ-ಲೆನಿನ್ ವಾದಿ) ವಿಶ್ವಾಸ ಮತಗಳಿಸಿದೆ. ಕಮ್ಯುನಿಸ್ಟರ ಭವಿಷ್ಯದ ಬಗ್ಗೆಯೇ ಸಂಶಯ ಪಡುತ್ತಿದ್ದವರ ಕಣ್ತೆರೆಸಿದ ಬೆಳವಣಿಗೆಯಿದು.

ಕಮ್ಯುನಿಸ್ಟರ ಕಥೆ ಮುಗಿಯಿತೆಂದವರಿಗೆ ಆಘಾತ ತಂದ ವರ್ಷ

ಪೂರ್ವ ಯುರೋಪಿನಲ್ಲಿ, ಮಾಜಿ ಸೋವಿಯೆತ್ ಒಕ್ಕೂಟದಲ್ಲಿ ಕಮ್ಯುನಿಸ್ಟರ ಕಥೆ ಮುಗಿಯಿತೆಂದು ಆಶಿಸಿದ್ದವರಿಗೆ ಈ ವರ್ಷ ಭಾರೀ ಆಘಾತ ನೀಡಿದೆ. ಹಿಂದೆ ನವಂಬರ್ 1992ರಲ್ಲಿ ಲಿಥುವೇನಿಯಾದಲ್ಲಿ, 1993 ಸೆಪ್ಟೆಂಬರ್‌ನಲ್ಲಿ ಪೋಲಂಡಿನಲ್ಲಾದುದು ಮೇ 1994ರಲ್ಲಿ ಹಂಗೆರಿಯಲ್ಲೂ ಆಯಿತು. ಮಾಜಿ ಕಮ್ಯುನಿಸ್ಟರು ಅಧಿಕಾರ ಪಡೆದರು. ರಶ್ಯಾದಲ್ಲಿ ಕಮ್ಯುನಿಸ್ಟರು ಒಂದು ಗಮನಾರ್ಹ ಶಕ್ತಿಯಾದರಷ್ಟೇ ಅಲ್ಲ, ಬೃಹತ್ ಸಾಮೂಹಿಕ ಕಾರ್ಯಾಚರಣೆಗಳಿಗೆ ಜನರನ್ನು ಅಣಿನೆರೆಸುವ ಸಾಮರ್ಥ್ಯ ತಮ್ಮಲ್ಲಿದೆ ಎಂದು ತೋರಿಸಿಕೊಟ್ಟರು.

ಹಿಂದೆ ತಮಗೆ ದೊರೆತಿದ್ದ, ಒಂದು ಸಾಮಾನ್ಯ ಸಂಗತಿಯೆಂದು ಭಾವಿಸಿದ್ದ ಸಾಮಾಜಿಕ ಸೌಲಭ್ಯಗಳು, ಭದ್ರತೆಯೆಲ್ಲಾ ಬಂಡವಾಳಶಾಹಿಯ ಮರುಸ್ಥಾಪನೆಯ ಪ್ರಕ್ರಿಯೆಯಲ್ಲಿ ಒಂದೊಂದಾಗಿ ಮಾಯವಾಗಿ ತಾವು ಚಿಂತಾಜನಕ ಪರಿಸ್ಥಿತಿಗೆ ಇಳಿದಿರುವುದನ್ನು ಕಂಡ ಅಲ್ಲಿಯ ಜನಗಳು, ಈಗ ಮತ್ತೆ ಕಮ್ಯುನಿಸ್ಟರತ್ತ ನೋಡುತ್ತಿದ್ದಾರೆ. ಬೈಲೋರಷ್ಯಾ (ಈಗ ಬೆಲಾರೂಸ್)ದಲ್ಲಿ ಹಿಂದೆ ಸಾಮೂಹಿಕ ಕೃಷಿ ತೋಟದ ವ್ಯವಸ್ಥಾಪಕ ಹಾಗೂ ಸುಪ್ರೀಂ ಸೋವಿಯೆತ್‌ನ ಪ್ರತಿನಿಧಿಯಾಗಿದ್ದ ಲುಷಾಂಕೊ ಶೇ. 80ಕ್ಕೂ ಹೆಚ್ಚು ಮತಗಳಿಸಿ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಉಕ್ರೇನ್‌ನಲ್ಲಿ ಕಮ್ಯುನಿಸ್ಟ್ ಪಕ್ಷದ ಬೆಂಬಲ ಪಡೆದ ಅಭ್ಯರ್ಥಿ ಅಧ್ಯಕ್ಷ ಪದವಿ ಪಡೆದಿದ್ದಾರೆ. ಕಝಖ್‌ಸ್ತಾನದಲ್ಲೂ ಹಾಗೆಯೇ ಆಗಿದೆ. ವರ್ಷ ಅಂತ್ಯಗೊಳ್ಳುತ್ತಿದ್ದಂತೆ ಬಲ್ಗೇರಿಯಾದಲ್ಲೂ ಮಾಜಿ ಕಮ್ಯುನಿಸ್ಟರು ಚುನಾವಣೆ ಗೆದ್ದಿದ್ದಾರೆ.

1994ರ ಈ ಬೆಳವಣಿಗೆಗಳ ಒಟ್ಟು ಅರ್ಥವೇನು? ಮೊದಲನೆಯದಾಗಿ, ಬಂಡವಾಳಶಾಹಿಯೆಂದರೆ ಸ್ವರ್ಗ ಎಂಬುದು ಕೇವಲ ಭ್ರಮೆಯೆಂದು ಅನುಭವದಿಂದ ಮತ್ತೊಮ್ಮೆ ಸಿದ್ಧವಾಗಿದೆ. ಎರಡನೆಯದಾಗಿ, ಮಾಜಿ ಸಮಾಜವಾದಿ ದೇಶಗಳು ಬಂಡವಾಳಶಾಹಿಯತ್ತ ಪರಿವರ್ತನೆ ಹೊಂದುವ ಪ್ರಕ್ರಿಯೆ ಸುಲಭದ್ದೇನಲ್ಲ, ಮಾತ್ರವಲ್ಲ ಅದಕ್ಕೆ ಹೆಚ್ಚೆಚ್ಚು ಪ್ರತಿರೋಧ ಬರುತ್ತಿದೆ. ಮೂರನೆಯದಾಗಿ, ಸಾಮ್ರಾಜ್ಯಶಾಹಿ ಯಜಮಾನಿಕೆಯ ವಿರುದ್ಧ ಹೋರಾಟ ಬೆಳೆಯುತ್ತಿದೆ. ಕೊನೆಯದಾಗಿ ಹಾಗೂ ಬಹುಮುಖ್ಯವಾಗಿ ಕೆಲವರು ಶಂಖ ಊದಿದಂತೆ ಬಂಡವಾಳಶಾಹಿಯೇ ಮಾನವ ಅಭಿವೃದ್ಧಿಯ ಕೊನೆಯ ಹಂತ ಎಂಬುದು, ಸಿದ್ಧಾಂತ ಅವಶ್ಯಕತೆ ಇನ್ನು ಮುಂದೆ ಇಲ್ಲ ಎಂಬುದು ಅಥವಾ 'ಮಾರುಕಟ್ಟೆ ಶಕ್ತಿಗಳ' ಶಾಶ್ವತ ವಿಜಯವೆಂಬುದು ಸುಳ್ಳು ಎಂದು ಸಿದ್ಧವಾಗಿದೆ. ಶೋಷಣೆಯಿಂದ ವಿಮೋಚನೆಯ ಹೋರಾಟವನ್ನು ತಡೆಯುವುದು ಸಾಧ್ಯವಿಲ್ಲ - ಒಂದು ಶೋಷಣಾ ರಹಿತ ಸಮಾಜ ವ್ಯವಸ್ಥೆ ಸ್ಥಾಪನೆಯಾಗುವವರೆಗೂ ಆ ಹೋರಾಟ ಮುಂದುವರಿಯುತ್ತದೆ.

ಸಿಪಿಐ(ಎಂ) ಪಕ್ಷದ ಜಿಲ್ಲಾ ಸಮ್ಮೇಳನಗಳು ನಡೆಯುವ ದಿನಾಂಕಗಳು

ಮೈಸೂರು	ಜನವರಿ 28-29
ಮಲೆನಾಡು	ಜನವರಿ 22-23
ತುಮಕೂರು	ಜನವರಿ 28-29
ಉತ್ತರ ಕನ್ನಡ	ಜನವರಿ 30-31
ಬಿಜಾಪುರ	ಫೆಬ್ರವರಿ 1-2
ಗುಲ್ಬರ್ಗಾ	ಫೆಬ್ರವರಿ 3-4-5
ರಾಯಚೂರು	ಫೆಬ್ರವರಿ 7-8
ಬಳ್ಳಾರಿ	ಫೆಬ್ರವರಿ 9-10-11
ಧಾರವಾಡ	ಫೆಬ್ರವರಿ 10-11-12
ಕೋಲಾರ	ಫೆಬ್ರವರಿ 18-19-20
ಬೆಂಗಳೂರು	ಫೆಬ್ರವರಿ 24-25-26
ದಕ್ಷಿಣ ಕನ್ನಡ	ಫೆಬ್ರವರಿ 28
	ಮಾರ್ಚ್ 1-2

KRNM/BGS-405 MAG (2) PRB DECR 319-79/79
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್.
ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್
ನಂ. 2236462 ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಗ್ಯಾನಿ ಜೈಲ್‌ಸಿಂಗ್

ಡಿಸೆಂಬರ್ 25, 1994ರ ಮುಂಜಾನೆ ಕೊನೆಯುಸಿರೆಳೆದ ಮಾಜಿ ರಾಷ್ಟ್ರಪತಿ ಗ್ಯಾನಿ ಜೈಲ್‌ಸಿಂಗ್‌ರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ತನ್ನ ಹಾರ್ದಿಕ ಸಂತಾಪ ವ್ಯಕ್ತಪಡಿಸಿದೆ. ರೋಪಾರ್‌ನಲ್ಲಿ ರಸ್ತೆ ಅಪಘಾತದ ನಂತರ ಸ್ನಾತಕೋತ್ತರ ವೈದ್ಯಕೀಯ ಸಂಸ್ಥೆಯಲ್ಲಿ ನಾಲ್ಕು ವಾರಗಳ ಕಾಲ ಅವರು ಶುಶ್ರೂಷೆ ಪಡೆಯುತ್ತಿದ್ದರು.

ಪಂಜಾಬಿನ ಫರೀದ್ ಕೋಟ್ ಜಿಲ್ಲೆಯ ಸಾಂಧ್ವಾ ಗ್ರಾಮದಲ್ಲಿ ಮೇ 5, 1916 ರಂದು ಅವರು ಜನಿಸಿದರು. ಕೈಕಸುಬುದಾರರಾಗಿದ್ದ ಕೃಷಿಕರಾದ ಕುಟುಂಬ ಅವರದ್ದು. ಜೈಲ್ ಸಿಂಗ್ ತಮ್ಮ ಹದಿಹರೆಯದಲ್ಲೇ ಫರೀದ್ ಕೋಟ್‌ನ ಮಹಾರಾಜನ ವಿರುದ್ಧ ನಡೆಸುತ್ತಿದ್ದ ಜನತಾ ಆಂದೋಳನಕ್ಕೆ ಧುಮುಕಿದರು. ಫರೀದ್ ಕೋಟ್‌ನಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಶಾಖೆ ಆರಂಭಿಸಿದ್ದಕಕಾಗಿ ರಾಜನ ಬಂಧಿಖಾನೆಯಲ್ಲಿ ಐದು ವರ್ಷ ಏಕಾಂತವಾಸ ಅನುಭವಿಸಬೇಕಾಯಿತು. ನಂತರ 1946ರಲ್ಲಿ ಅವರು ಈ ಇಲ್ಲಿಯೇ ರಾಷ್ಟ್ರೀಯ ಧ್ವಜ ಆಂದೋಲನ ಆರಂಭಿಸಿದರು. ದೇಶೀ ಸಂಸ್ಥಾನಗಳು ಭಾರತ ಸಂಘದಲ್ಲಿ ಸೇರ್ಪಡೆಯಾದ ನಂತರ ಪೆಪ್ಸು ಪ್ರಾಂತ್ಯದಲ್ಲಿ ಅವರು ಮಂತ್ರಿಗಳಾದರು. 1972ರಲ್ಲಿ ಪಂಜಾಬಿನ ಮುಖ್ಯಮಂತ್ರಿಯಾದರು. 1980ರಲ್ಲಿ ಕೇಂದ್ರ ಗೃಹಮಂತ್ರಿಯಾದರು. ಜುಲೈ 22, 1982ರಲ್ಲಿ ಭಾರತದ ರಾಷ್ಟ್ರಪತಿಯಾದರು.

ಒಂದು ಸಾಮಾನ್ಯ ಕುಟುಂಬದಿಂದ ಬಂದ ಗ್ಯಾನಿ ಜೈಲ್‌ಸಿಂಗ್ ದೇಶದ ಅತ್ಯುನ್ನತ ಪದವಿಗೇರಿದರು. ಸ್ವಾತಂತ್ರ್ಯ ಹೋರಾಟದ ಅತ್ಯುನ್ನತ ಪರಂಪರೆ ಅವರೊಂದಿಗಿತ್ತು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಭಾರತೀಯ ಮಹಿಳೆಯರ ಸ್ಥಾನಮಾನದ ಪೂರ್ಣ ಚಿತ್ರ ನೀಡಲಾರದ ಸರಕಾರೀ ದಸ್ತಾವೇಜು-ಪರ್ಯಾಯ ದಸ್ತಾವೇಜು ರೂಪಿಸುವ ಪ್ರಯತ್ನ

ಸದ್ಯದಲ್ಲೇ ಚೀಣಾದ ರಾಜಧಾನಿ ಬೈಜಿಂಗ್‌ನಲ್ಲಿ ಮಹಿಳೆಯರ ಸ್ಥಾನಮಾನಗಳನ್ನು ಕುರಿತಂತೆ ಒಂದು ಅಂತರರಾಷ್ಟ್ರೀಯ ಸಮ್ಮೇಳನ ನಡೆಯಲಿದೆ. ಇದರಲ್ಲಿ ಸಲ್ಲಿಸಲೆಂದು ಭಾರತ ಸರಕಾರ ತಯಾರಿಸಿದ ದಸ್ತಾವೇಜು ದೇಶದಲ್ಲಿ ಮಹಿಳೆಯ ಸಮಸ್ಯೆಗಳ ಚಿತ್ರವನ್ನು ಪೂರ್ಣವಾಗಿ ಕೊಟ್ಟಿಲ್ಲ. ಈ ದಸ್ತಾವೇಜು ಮೂಲಭೂತವಾದದ, ಕೋಮುವಾದದ ಬೆದರಿಕೆ, ಇದರಲ್ಲಿ ಸರಕಾರದ ಪಾತ್ರ, ಹೊಸ ಆರ್ಥಿಕ ನೀತಿಗಳ ವಿನಾಶಕಾರಿ ಪರಿಣಾಮ, ಜನಸಂಖ್ಯಾ ನೀತಿಗಳಲ್ಲಿನ ಮಹಿಳಾ- ವಿರೋಧಿ ಅಂಶಗಳು, ಅಸಮರ್ಪಕ ಶಿಕ್ಷಣ ವ್ಯವಸ್ಥೆ, ಮಾಧ್ಯಮದ ಪಾತ್ರ, ರಾಜಕೀಯದ ಅಪರಾಧೀಕರಣ ಇತ್ಯಾದಿ ವಿಷಯಗಳ ಬಗ್ಗೆ ಮೌನವಾಗಿದೆ. ಅಥವಾ ತುಂಬಾ ದುರ್ಬಲವಾಗಿದೆ.

ಆದ್ದರಿಂದ ಭಾರತದಲ್ಲಿ ಮಹಿಳೆಯರ ಸ್ಥಾನಮಾನದ ಬಗ್ಗೆ ಒಂದು ಪರ್ಯಾಯ ವರದಿ ತಯಾರಿಸಲು ಹಲವು ಮಹಿಳಾ ಸಂಘಟನೆಗಳು ನಿರ್ಧರಿಸಿವೆ. ಫೆಬ್ರವರಿ 26-27ರಂದು ನವದೆಹಲಿಯಲ್ಲಿ ಒಂದು ರಾಷ್ಟ್ರೀಯ ಸಮಾವೇಶವನ್ನು ಕರೆಯಲಾಗಿದ್ದು ದೇಶಾದ್ಯಂತ ಹಲವಾರು ಮಹಿಳಾ ಗುಂಪುಗಳನ್ನು ಇದರಲ್ಲಿ ಭಾಗವಹಿಸಲು ಆಹ್ವಾನಿಸಲಾಗುತ್ತಿದೆ. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎ.ಐ.ಡಿ.ಡಬ್ಲ್ಯು.ಎ.), ಅಖಿಲ ಭಾರತ ಮಹಿಳಾ ಸಮ್ಮೇಳನ (ಎ.ಐ.ಡಬ್ಲ್ಯು.ಸಿ.), ಅಖಿಲ ಭಾರತ ಮಹಿಳಾ ದಕ್ಷತಾ ಸಮಿತಿ, ಮಹಿಳಾ ಅಭಿವೃದ್ಧಿ ಅಧ್ಯಯನ ಕೇಂದ್ರ, ಜಂಟಿ ಮಹಿಳಾ ಕಾರ್ಯಕ್ರಮ, ರಾಷ್ಟ್ರೀಯ ಭಾರತೀಯ ಮಹಿಳಾ ಒಕ್ಕೂಟ (ಎನ್.ಎಫ್.ಐ.ಡಬ್ಲ್ಯು) ಹಾಗೂ ವೈ.ಡಬ್ಲ್ಯು.ಸಿ.ಎ. ಈ ಸಮಾವೇಶದ ಬಗ್ಗೆ ಮುತುವರ್ಜಿ ವಹಿಸಿರುವ ಮಹಿಳಾ ಸಂಘಟನೆಗಳು

ಈ ಹಿಂದೆ ೧೯೮೮ಲಲರಲ್ಲೂ ಸರಕಾರದ ಮಹಿಳೆಯರನ್ನು ಕುರಿತಂತೆ ರಾಷ್ಟ್ರೀಯ ದೃಷ್ಟಿಕೋನ ಯೋಜನೆಯ ಬಗ್ಗೆ ವಿಮರ್ಶೆಯೊಂದನ್ನು ೪೦ ಮಹಿಳಾ ಸಂಘಟನೆಗಳು ಜಂಟಿಯಾಗಿ ರೂಪಿಸಿದ್ದವು.

ಮೇಲೆ ಹೇಳಿದ ಸರಕಾರೀ ದಸ್ತಾವೇಜು ಮೌನವಾಗಿರುವ ಅಥವಾ ದುರ್ಬಲವಾಗಿರುವ ಅಂಶಗಳ ಬಗ್ಗೆ ಒಂದು ಒಮ್ಮತವನ್ನು ರೂಪಿಸಿ ದೇಶದ ಮಹಿಳಾ ಆಂದೋಲನದ ವ್ಯಾಪಕ ವಿಭಾಗದ ಅಭಿಪ್ರಾಯವನ್ನು ಪ್ರತಿಬಿಂಬಿಸುವ ದಸ್ತಾವೇಜು ತಯಾರಿಸುವುದು ಈ ಸಮಾವೇಶದ ಉದ್ದೇಶ ಎನ್ನಲಾಗಿದೆ.

ಸರಕಾರ ಇನ್ನೂ ಅಪರಾಧಿಗಳನ್ನು ರಕ್ಷಿಸುತ್ತಿದೆ

-ಪೊಲಿಟ್ ಬ್ಯೂರೋ

ಮೂರು ಕೇಂದ್ರ ಮಂತ್ರಿಗಳ ರಾಜೀನಾಮೆ ಕುರಿತಂತೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಡಿಸೆಂಬರ್ ೨೩ ರಂದು ಒಂದು ಹೇಳಿಕೆ ನೀಡಿ ಸರಕಾರ ಇನ್ನೂ ತಪ್ಪಿತಸ್ಥರನ್ನು ರಕ್ಷಿಸುತ್ತಿದೆ ಎಂದು ಅಭಿಪ್ರಾಯಪಟ್ಟಿದೆ.

ಕೇಂದ್ರ ಸರಕಾರದಿಂದ ಮೂವರು ಮಂತ್ರಿಗಳನ್ನು ಪ್ರತಿಪಕ್ಷಗಳ ಹಾಗೂ ಸಾರ್ವಜನಿಕ ಅಭಿಪ್ರಾಯ ನಿರಂತರ ಒತ್ತಡದಿಂದಾಗಿ ಕೈ ಬಿಡಲಾಗಿದೆ. ಈ ಮೊದಲು ಕಲ್ಪನಾಥ್ ರಾಯ್ ರ ಪಾತ್ರವನ್ನು ನಾಚಿಕೆಯಿಲ್ಲದ ಸಮರ್ಥಿಸಿಕೊಂಡ, ಜೆ.ಪಿ.ಸಿ. ವರದಿಯಲ್ಲಿ ಆರೋಪಕ್ಕೊಳಗಾದ ಮೂವರು ಮಂತ್ರಿಗಳ ವಿರುದ್ಧ ಕ್ರಮ ಕೈಗೊಳ್ಳಲು ನಿರಾಕರಿಸಿದ ಪ್ರಧಾನಮಂತ್ರಿ ಈ ಕ್ರಮ ಕೈಗೊಳ್ಳಲೇಬೇಕಾಯಿತು ಎಂದು ಪಿ.ಬಿ. ಹೇಳಿಕೆ ಅಭಿಪ್ರಾಯಪಟ್ಟಿದೆ.

ಆದರೆ ಇಷ್ಟೇ ಸಾಲದು, ಪ್ರಧಾನಮಂತ್ರಿಗಳು ಇಷ್ಟರಿಂದಲೇ ತಮ್ಮ ಜವಾಬ್ದಾರಿ ಮುಗಿಯಿತು ಎಂದು ಭಾವಿಸುವಂತಿಲ್ಲ. ಸಕ್ಕರೆ ಹಗರಣದ ಅಪರಾಧಿಗಳ ಬಗ್ಗೆ ಜ್ಞಾನ ಪ್ರಕಾಶ್ ಸಮಿತಿ ಸಮಗ್ರ ತನಿಖೆ ನಡೆಸಿಲ್ಲ. ಆದ್ದರಿಂದ ಒಂದು ಜಂಟಿ ಸಂಸದೀಯ ಸಮಿತಿಯಿಂದ ಪೂರ್ಣ ಪ್ರಮಾಣದ ತನಿಖೆ ನಡೆಯಬೇಕಾಗಿದೆ. ಇನ್ನೂ ಪರಿಷ್ಕೃತ ಕ್ರಿಯಾ ವರದಿಯಲ್ಲಂತೂ ಸರಕಾರ ತಾನಿತ್ತ ಮಾತಿನಂತೆ ನಡೆದಿಲ್ಲ. ಹಳೆಯ ವರದಿಯ ಕೆಲವು ಪರಿಚ್ಛೇದಗಳನ್ನು ಅಲ್ಲಿ-ಇಲ್ಲಿ ಬದಲಿಸಿ ನೀಡಲಾಗಿದೆಯಷ್ಟೇ. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಪಿ.ಬಿ. ಹೇಳಿದೆ. ಇದು ಸ್ವಾತಂತ್ರ್ಯಾನಂತರದ ಅತೀ ಹೊಲಸು ಭ್ರಷ್ಟಾಚಾರ. ಇದನ್ನು ಮುಚ್ಚಿಹಾಕಲು, ಅಪರಾಧಿಗಳನ್ನು ರಕ್ಷಿಸಲು ಸರಕಾರ ಇನ್ನೂ ಪ್ರಯತ್ನಿಸುತ್ತಿದೆ. ರಾವ್ ಸರಕಾರ ಜವಾಬ್ದಾರಿಯನ್ನು ನಿರ್ದಿಷ್ಟ ಪಡಿಸಿ, ಜೆ.ಪಿ.ಸಿಯ ಶಿಫಾರಸುಗಳನ್ನು ಅನುಷ್ಠಾನಕ್ಕೆ ತರುವಂತೆ ಮಾಡಬೇಕು, ವರದಿಯನ್ನು ಗುರುತಿಸಿದ ಎಲ್ಲಾ ಅಪರಾಧಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಮಾಡಬೇಕಾಗಿದೆ ಎಂದಿರುವ ಪೊಲಿಟ್ ಬ್ಯೂರೋ ಸರಕಾರ ಈ ಕ್ರಿಯಾ ವರದಿಯ ಪರಿಷ್ಕೃತ ರೂಪವನ್ನು ಸದನ ಮುಂದಿಡಬೇಕು ಎಂದು ಆಗ್ರಹ ಪಡಿಸಿದೆ.

ಪ್ರಧಾನ ಮಂತ್ರಿಗಳ ನೇತೃತ್ವದಲ್ಲಿ ಕಾಂಗ್ರೆಸ್(ಐ) ಸರಕಾರ ಉಚ್ಛ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ರಕ್ಷಿಸುವ ಸರಕಾರ ಎಂದು ಕುಖ್ಯಾತಿ ಗಳಿಸುತ್ತಿದೆ. ಉಚ್ಛ ಸ್ಥಾನಗಳಲ್ಲಿರುವ ಜನರ ಕೃತ್ಯಗಳಿಗೆ ಸರಕಾರ ಉತ್ತರ ಕೊಡುವಂತೆ ಮಾಡುವ ಹೋರಾಟವನ್ನು ಇನ್ನಷ್ಟು ಬಲವಂತವಾಗಿ ಮುಂದುವರಿಸಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಹೇಳಿದೆ.

ಜನತಾ ಪ್ರಾತಿನಿತ್ಯ ಶಾಸನಕ್ಕೆ ತಿದ್ದುಪಡಿ ತರಲು ರಾವ್ ಸರಕಾರ ಹಿಂಜರಿಕೆ

ಜನತಾ ಪ್ರಾತಿನಿಧ್ಯಾ ಶಾಸನಕ್ಕೆ ತಿದ್ದುಪಡಿಯನ್ನು ಮಂಡಿಸಲು ಸರಕಾರ ಪ್ರಜ್ಞಾಪೂರ್ವಕವಾಗಿಯೇ ತಪ್ಪಿಸಿಕೊಂಡಿದೆ. ಧರ್ಮವನ್ನು ರಾಜಕೀಯದಿಂದ ಪ್ರತ್ಯೇಕಿಸಬೇಕೆಂಬ ಸುಪ್ರೀಂ ಕೋರ್ಟಿನ ತೀರ್ಪಿಗೆ ಅನುಗುಣವಾಗಿ ಈ ತಿದ್ದುಪಡಿ ಅಗತ್ಯವಾಗಿತ್ತು. ಅಲ್ಲದೆ ಸದ್ಯದಲ್ಲೇ ಚುನಾವಣೆ ನಡೆಯಬೇಕಾದ ರಾಜ್ಯಗಳಲ್ಲಿ ಮತದಾರ ಗುರುತುಚೀಟಿ ನೀಡಿಕೆ ಹೆಸರಲ್ಲಿ ಚುನಾವಣೆಗಳಲ್ಲಿ ಅಡ್ಡಿ-ಆತಂಕಗಳನ್ನು ಇತ್ಯರ್ಥ ಪಡಿಸಲು ಕೂಡಾ ತಿದ್ದುಪಡಿ ಅಗತ್ಯವಿದೆ. ಇದನ್ನು ತುರ್ತಾಗಿ ಮಾಡಬೇಕಿದ್ದರೂ ಕಾಂಗ್ರೆಸ್(ಐ) ಹಾಗೂ ಬಿಜೆಪಿ ಶಾಮೀಲಾಗಿ ಅದನ್ನು ಈ ಅಧಿವೇಶನ ಬರದಂತೆ ಮಾಡಿದ್ದಾರೆ ಎಂದು ಪೊಲಿಟ್ ಬ್ಯೂರೋ ಆಪಾದಿಸಿದೆ.

ಈ ತಿದ್ದುಪಡಿ ತರಲು ಸರಕಾರ ಮೇಲೆ ಒತ್ತಡ ಹೇರಲು ಎಡ ಪ್ರಜಾಪ್ರಭುತ್ವ ಶಕ್ತಿಗಳು ಹೋರಾಟವನ್ನು ಇನ್ನಷ್ಟು ಶಕ್ತಿಯುತವಾಗಿ ಮುಂದುವರಿಸಬೇಕಾಗಿದೆ ಎಂದು ಪಿ.ಬಿ. ಹೇಳಿದೆ.

ಮಣಿಪುರ ಕಾಂಗ್ರೆಸ ಸಮಯಸಾಧಕತನ

ಮಣಿಪುರದಲ್ಲಿ ರಿಶೆಂಗ್ ಕೇಶಿಂಗ್ ನೇತೃತ್ವದಲ್ಲಿ ಕಾಂಗ್ರೆಸ್(ಐ) ಮಂತ್ರಿಮಂಡಳದ ಪ್ರತಿಷ್ಠಾಪನೆ ಹಾಗೂ ನಂತರದ ಬೆಳವಣಿಗೆಗಳು ಆಘಾತಕಾರಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಡಿಸೆಂಬರ್ 23ರಂದು ನೀಡಿದ ಹೇಳಿಕೆಯಲ್ಲಿ ಖಂಡಿಸಿದೆ.

ಮಣಿಪುರ ವಿಧಾನಸಭೆಯ ಈಗಿನ ಸದಸ್ಯಬಲ 57. ಆದ್ದರಿಂದ ವಿಶ್ವಾಸ ಮತಗಳಿಸಬೇಕಾದರೆ ಹೊಸ ಮುಖ್ಯಮಂತ್ರಿ 29 ಎಂ.ಎಲ್.ಎ.ಗಳ ಬೆಂಬಲ ಗಳಿಸಬೇಕು. ಡಿಸೆಂಬರ್ 22ರಂದು ವಿಧಾನಸಭಾಧ್ಯಕ್ಷರು ಗುವಾಹಾತಿ ಹೈಕೋರ್ಟಿನ ಆದೇಶವನ್ನು ಉಲ್ಲಂಘಿಸಿ 23 ಎಂ.ಎಲ್.ಎ.ಗಳನ್ನು ಅನರ್ಹಗೊಳಿಸಿದರು. ವಿಧಾನಸಭೆಯಲ್ಲಿ ಬಲಪರೀಕ್ಷೆಯನ್ನು ಮುಂದೂಡುವ ಕುರಿತಂತೆ ಕೇಂದ್ರ ಸರ್ಕಾರದೊಡನೆ ಭಿನ್ನಾಭಿಪ್ರಾಯ ಬಂದು ರಾಜ್ಯಪಾಲರು ರಾಜೀನಾಮೆ ನೀಡಿದರು. ಡಿಸೆಂಬರ್ ೨೩ರಂದು ಸ್ಪೀಕರ್ ಮತ್ತ ಎಂ.ಎಲ್.ಎ.ಗಳು ಸಭೆ ಸೇರಿ ಕೇಶಿಂಗ್ ಮಂತ್ರಿಮಂಡಲದ ವಿರುದ್ಧ ಅವಿಶ್ವಾಸ ಠರಾವು ಅಂಗೀಕರಿಸಿದರು.

ಈ ಅಹಿತಕರ ಘಟನೆಗಳಿಗೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಈ ಹೀನ ಅವ್ಯವಸ್ಥೆಗೆ ಕಾಂಗ್ರೆಸ್(ಐ) ಹಾಗೂ ಕೇಂದ್ರ ಸರಕಾರ ಹೊಲಸು ಸಮಯಸಾಧಕತನವೇ ಹೊಣೆಯೆಂದಿರುವ ಪೊಲಿಟ್‌ಬ್ಯೂರೋ ತಕ್ಷಣ ಮಣಿಪುರ ವಿಧಾನಸಭೆಯನ್ನು ವಿಸರ್ಜಿಸಿ ಹೊಸ ಚುನಾವಣೆಗಳನ್ನು ನಡೆಸಬೇಕೆಂದು ಆಗ್ರಹಪಡಿಸಿದೆ.

ಕಾಂ.ಅಮಲ್‌ದತ್ತಾರಿಗೆ ಪಿ.ಬಿ. ಛೀಮಾರಿ

ಸಿಪಿಐ(ಎಂ) ಸಂಸತ್ ಸದಸ್ಯರಾದ ಕಾಂ. ಅಮಲ್ ದತ್ತಾ ನವದೆಹಲಿಯಲ್ಲಿ ನವಂಬರ್ ತಿಂಗಳಲ್ಲಿ ಚಂದ್ರಸ್ವಾಮಿಯ ಜನ್ಮದಿನಾಚರಣೆ ಸಮಾರಂಭದಲ್ಲಿ ಭಾಗವಹಿಸಿರುವುದು ಪಕ್ಷದ ನಿಲುವಿಗೆ ವ್ಯತಿರಿಕ್ತವಾದ ಕೃತ್ಯ. ಏಕೆಂದರೆ ಸಾರ್ವಜನಿಕ ಜೀವನದಲ್ಲಿ ವಂಚಕ ಕೃತ್ಯಗಳಲ್ಲಿ ತೊಡಗಿರುವ ಇಂತಹ 'ದೇವತಾ ಪುರುಷ'ರನಿಸಿಕೊಂಡವರನ್ನು ಪಕ್ಷ ಒಪ್ಪುವುದಿಲ್ಲ. ಆದ್ದರಿಂದ ಅಮಲ್‌ದತ್ತಾರವರಿಗೆ ಸಾರ್ವಜನಿಕ ಛೀಮಾರಿ ಹಾಕಲು ಸಿಪಿಐ(ಎಂ) ಪೊಲಿಟ್‌ಬ್ಯೂರೋ ನಿರ್ಧರಿಸಿದೆ.

ಕಳೆದ ವಾರ

-ಕೆ.ವಿ

1994ರ ಕೊನೆಯ ದಿನಗಳು, 1995ರ ಮೊದಲ ದಿನಗಳು ವರ್ಷ ಮುಗಿಯುತ್ತಿದ್ದಂತೆ ಕಾಂಗ್ರೆ ಬಿಕ್ಕಟ್ಟು ಹೆಚ್ಚಿದ ಬಗ್ಗೆ ಯಾವ ಪತ್ರಿಕೆಯೂ ಪ್ರತಿಕ್ರಿಯಿಸದಿರಲು ಸಾಧ್ಯವಿರಲಿಲ್ಲ. ಅದೇ ರೀತಿ ಬೆಂಗಳೂರಿನ ಬಳಿ ನಡೆದ ರೈಲು ಅಪಘಾತದ ಬಗ್ಗೆಯೂ. ಈ ನಡುವೆ ಗುರುತಿನ ಚೀಟಿ ಬಗ್ಗೆ ಲಲ್ಲೂಯಾದವ್-ಶೇಷನ್ ಜಟಾಪಟಿ ಎಲ್ಲರ ಗಮನ ಸೆಳೆದಿದೆ. ಕರ್ನಾಟಕದಲ್ಲಿ ಪಂಚಾಯತು ಚುನಾವಣೆಗಳನ್ನು ಮಾರ್ಚ್ ನೊಳಗೆ ನಡೆಸುವ ಘೋಷಣೆಗೆ ಸ್ವಾಗತ ದೊರೆತಿದೆ.

ಕಾಂಗ್ರೆಸ್ಸಿನ ರಾಜಮಾರ್ಗ!

"....ಅರ್ಜುನ್ ಸಿಂಗ್ ಸಂಪುಟದಿಂದ ಹೊರಬಿದ್ದರು. ತಮ್ಮ ದಾಳ ಉರುಳಿಸಲು ಇದೇ ಸಮಯವೆಂದು ತಿವಾರಿಯವರು ನಿರ್ಧರಿಸಿದರು.... ಈ ನಡುವೆ ಏನೂ ನಡೆದಿಲ್ಲವೆನ್ನುವಂತೆ ನರಸಿಂಹರಾವ್ ತಮ್ಮ ಎಂದಿನ 'ಮೌನ'ವನ್ನು ಪ್ರದರ್ಶಿಸುತ್ತಿದ್ದಾರೆ. ಇದರಿಂದ ಪಕ್ಷಕ್ಕೆ ಒಳಿತಾದೀತೇ? ಎಂದು **ಪ್ರಜಾವಾಣಿ** (ಜ.3) ಪ್ರಶ್ನಿಸಿದೆ.

ಅರ್ಜುನ್‌ಸಿಂಗ್ ರಾಜೀನಾಮೆ ನಂತರ ತಿವಾರಿ ರಾಜೀನಾಮೆ ಬಗ್ಗೆ ಪ್ರತಿಕ್ರಿಯಿಸುತ್ತಾ ಸಂಯುಕ್ತ ಕರ್ನಾಟಕ "ಒಟ್ಟಿನಲ್ಲಿ ನಾಲ್ಕು ರಾಜ್ಯಗಳ ಚುನಾವಣೆ ಫಲಿತಾಂಶದ ಫಲಶ್ರುತಿಯಾಗಿ ಕಾಂಗ್ರೆಸ್ಸಿನಲ್ಲಿ ಎರಡು ಗುಂಪುಗಳಂತೂ ಬಹಿರಂಗವಾಗಿ ಗೋಚರವಾಗುತ್ತಿವೆ. ತಮ್ಮ ನಾಯಕತ್ವಕ್ಕೆ ಎದುರಾಗಿರುವ ಸಮಸ್ಯೆಸವಾಲಿನೊಂದಿಗೆ ನರಸಿಂಹರಾಯರು ಯಾವ ರೀತಿ ವ್ಯವಹರಿಸುತ್ತಾರೆಂಬುದನ್ನು ಕಾದು ನೋಡಬೇಕು" ಎಂದು ಕುತೂಹಲ ವ್ಯಕ್ತಪಡಿಸಿದೆ. (ಜ.೩) **ಬಹುಶಃ ಯಾವ ರೀತಿಯೆಂದು ರಾಯರಿಗೂ ತಿಳಿದಿಲ್ಲ.**

"ಈ ನಡುವೆ ಸದ್ಯದಲ್ಲೇ ಮಂತ್ರಿಮಂಡಲ ಮತ್ತು ಎಐಸಿಸಿಯ ಪುನಾರಚನೆ ಕುರಿತು ಪ್ರಧಾನ ಕಾರ್ಯದರ್ಶಿ ಜನಾರ್ಧನ ಪೂಜಾರಿಯವರು ನೀಡಿದ ಪ್ರಕಟಣೆ ತೀರಾ ಅಪರೂಪದ ಘಟನೆ" ಯೆಂದು **ಕನ್ನಡಪ್ರಭ** ಅಭಿಪ್ರಾಯಪಟ್ಟಿದೆ. (ಜ.1). ಇದರ ಉದ್ದೇಶ ಚುನಾವಣೆ ನಡೆಯಲಿರುವ ರಾಜ್ಯಗಳಿಂದಲೇ ಹೊಸ ಮಂತ್ರಿಗಳ ನೇಮಕವಾಗಬಹುದೆಂದು, ಇದರಿಂದ ಆ ರಾಜ್ಯಗಳ ಕಾಂಗ್ರೆಸ್ಸಿಗರು ಮಾತೇ ಆಡಲಿಕ್ಕಿಲ್ಲ.

"ಜನಸಾಮಾನ್ಯ ವರ್ಗಗಳಿಗೆ ಸದ್ಯದಲ್ಲೇ ಅನುಕೂಲವಾಗುವಂತಹ, ಅವರ ತತ್‌ಕ್ಷಣದ ಕಷ್ಟ ಪರಿಹಾರವಾಗುವಂತಹ ದೂರಗಾಮೀ ಕ್ರಮಗಳನ್ನು ಕೈಗೊಂಡರೆ ಆಳುವ ಪಕ್ಷಕ್ಕೆ ಒಳ್ಳೆಯ ಹೆಸರು ಬಂದೀತು. ಆ ರಾಜಮಾರ್ಗ ಬಿಟ್ಟು ಕೆಲವು ವ್ಯಕ್ತಿಗಳನ್ನು ತೃಪ್ತಿಪಡಿಸಿದರೆ ಜನರೆಲ್ಲ ತೃಪ್ತರಾಗುವರೆಂದು ಭಾವಿಸಿ ಮಂತ್ರಿ ಮಂಡಲದ ಪುನಾರಚನೆಯನ್ನು ಒಂದು ತಂತ್ರ ಎನ್ನುವಂತೆ ಪರಿಗಣಿಸಿದರೆ ಜನಸಾಮಾನ್ಯರು ಅದನ್ನು ತಿರಸ್ಕರಿಸುವುದು ಖಂಡಿತ" ಎಂದು ಈ ಸಂಪಾದಕೀಯ ಹೇಳಿದೆ.

ಕಾಂಗ್ರೆಗೆ ಜನಸಾಮಾನ್ಯರ ಆಕಾಂಕ್ಷೆ ಈಡೇರಿಸುವುದೇ ಕಷ್ಟದ ಕೆಲಸ, ಕೆಲವರ ಆಕಾಂಕ್ಷೆಗಳನ್ನು ಈಡೇರಿಸುವುದೇ ರಾಜಮಾರ್ಗ ವಿರಬೇಕಲ್ಲವೇ?

ಶೇಷನ್ ಅಧಿಕಾರ ಮೇಲೋ? ಮತದಾರನ ಹಕ್ಕು ಮೇಲೋ?

ಗುರುತಿನ ಚೀಟಿ ಕುರಿತಂತೆ ಬಿಹಾರದ ಮುಖ್ಯಮಂತ್ರಿ ಲಲ್ಲೂಪ್ರಸಾದ್ ಯಾದವ್ ಹಾಗೂ ಮುಖ್ಯ ಚುನಾವಣಾ ಆಯುಕ್ತ ಶೇಷನ್‌ರ ನಡುವಿನ 'ಕದನ'ದಲ್ಲಿ ಲಲ್ಲೂ ಪ್ರಸಾದರ ಬಗ್ಗೆ ಯಾವ ಪತ್ರಿಕೆಯೂ ಸಹಾನುಭೂತಿ ತೋರದಿದ್ದರೂ ಶೇಷನರದ್ದು 'ಅತಿ' ವರ್ತನೆ ಎಂದು ಪರೋಕ್ಷವಾಗಿಯಾದರೂ ಹೇಳಬೇಕಾಗಿ ಬಂದಿದೆ.

ಭಾರೀಮತದಾರರ ಸಂಖ್ಯೆ ಇರುವ ಬಿಹಾರದಂಥ ರಾಜ್ಯದಲ್ಲಿ ಪ್ರತಿಯೊಬ್ಬ ಮತದಾರನಿಗೂ ಗುರುತಿನ ಚೀಟಿ ನೀಡುವಂತಹ ಕೆಲಸ ಅಷ್ಟೊಂದು ಸುಲಭವಲ್ಲ ಎನ್ನುವುದನ್ನು ಯಾರೂ ಊಹಿಸಬಹುದು" ಎಂದು **ಪ್ರಜಾವಾಣಿ** (ಜ.1) ಹೇಳಿದೆ.

ಶೇಷನ್‌ರಿಗೆ ಜನತಾ ಪ್ರಾತಿನಿಧ್ಯ ಕಾನೂನಿನಲ್ಲಿ ಏನೇ ಅಧಿಕಾರವಿರಲಿ ಅದು ಮತದಾನ ಮಾಡುವ, ತನ್ನ ಆಯ್ಕೆಯ ಸರಕಾರ ಪಡೆಯುವ ನಾಗರಿಕನ ಹಕ್ಕನ್ನು ವಿ...ರಿ ನಿಲ್ಲಲು ಸಾಧ್ಯವಿಲ್ಲ" ಎಂದು ಇಂಡಿಯನ್ ಎಕ್ಸ್‌ಪ್ರೆಸ್ (ಜ. 5) ಕೂಡಾ ಹೇಳಿದೆ.

ಕೇಂದ್ರ ಸರಕಾರ ಕೂಡಾ ಈ ವಿಷಯದಲ್ಲಿ ಸಮಂಜಸವಾಗಿ ಕೆಲಸ ಮಾಡುತ್ತಿಲ್ಲ ಎಂದಿರುವ ಈ ಪತ್ರಿಕೆಯ ಇನ್ನೊಂದು ಸಂಪಾದಕೀಯ "ಬಹುಶಃ ಅದು ಮುಖ್ಯ ಚುನಾವಣಾ ಆಯುಕ್ತರನ್ನು ...ಯಿಸಬಯಸುತ್ತಿಲ್ಲ, ಶೇಷನ್‌ರ ರೆಕ್ಕೆ ಕತ್ತರಿಸಲು ಈಗಲೂ ಒಂದು ಸುಗ್ರೀವಾಜ್ಞೆ ತರಬಹುದು. ಆದರೆ ಎಲ್ಲೆಡೆಯಿಂದ ಬಾಣಗಳಿಗೆ ಗುರಿಯಾಗಿರುವ ಅವರು ಹೀಗೆ ಮಾಡುವಂತ ಧೈರ್ಯ ತಂದುಕೊಳ್ಳುವರೆ?" ಎಂದು ಆ ಸಂಪಾದಕೀಯ ಪ್ರಶ್ನಿಸಿದೆ. (ಜ.2)

ಹೇಡಿಗಳ ಧಿಮಾಕು!

ಇಲ್ಲ ಎಂಬುದೇ ಉತ್ತರ. ಅವರು ಸುಗ್ರೀವಾಜ್ಞೆ ತರುವುದೂ ಧೈರ್ಯದಿಂದಲ್ಲ, ಪುಕ್ಕಲುತನದಿಂದ. ಉದಾಹರಣೆಗೆ ಕಳೆದ ವಾರದವರೆಗೂ ಸಂಸತ್ತಿನ ಅಧಿವೇಶನ ನಡೆಯುತ್ತಿದ್ದರೂ ಗ್ಯಾಟ್‌ಗೆ ಬಹಳ ಹಿಂದೆಯೇ ಈ ಸರಕಾರ ತಲೆಬಾಗಿದ್ದರೂ ಡಬ್ಲ್ಯು.ಟಿ.ಓ.ಗೆ ಸೇರುವ ಬಗ್ಗೆ ಸಂಸತ್ತಿನ ಅನುಮತಿ ಪಡೆಯುವ ಧೈರ್ಯ ಇಲ್ಲದ್ದರಿಂದ ಡಿಸೆಂಬರ್ 31ರ ರಾತ್ರಿ ಎರಡು ಸುಗ್ರೀವಾಜ್ಞೆಗಳನ್ನು ಹೊರಡಿಸಿದರು!

'ವಿಶ್ವ ವ್ಯಾಪಾರ ಸಂಘಟನೆ' ಜನವರಿ 1ರಿಂದ ಅಸ್ತಿತ್ವಕ್ಕೆ ಬಂದ ಬಗ್ಗೆ, ಭಾರತ ಅದರ ಸದಸ್ಯನಾದ ಬಗ್ಗೆ ಸಂಪಾದಕೀಯ ಬರೆದ "ಸಂಯುಕ್ತ ಕರ್ನಾಟಕ" (ಜ. 5) ಅದೇಕೋ ಮುಖ್ಯ ಅಂಶವನ್ನು ಗಮನಿಸಿಯೇ ಇಲ್ಲ. ಆದರೆ ಯಾರೂ ಈ ಸದಸ್ಯತ್ವ ಪಡೆದ ವೈಖರಿಯನ್ನು ಬಹುಶಃ ನೇರವಾಗಿ ಸಮರ್ಥಿಸಿಕೊಳ್ಳುವುದೂ ಕಷ್ಟವೇ.

"ಜಾಗತಿಕವ್ಯಾಪಾರ ಸಂಘಟನೆಯನ್ನು ಒಂದು ರೀತಿಯ ಅಂತಾರಾಷ್ಟ್ರೀಯ ಲಾಟರಿಗೂ ಹೋಲಿಸಲಾಗುತ್ತಿದೆ. ಅಭಿವೃದ್ಧಿ ಶೀಲ ರಾಷ್ಟ್ರಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತಮ್ಮ ವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾರಾಟಮಾಡುವ 'ಲಾಟರಿ' ದಕ್ಕೀತೇ ಎಂಬುದು ಸದ್ಯಕ್ಕಂತೂ ಯಕ್ಷ ಪ್ರಶ್ನೆ" ಎಂದಿದೆ ಈ ಸಂಪಾದಕೀಯ. ಆದರೆ ದೇಶದ ದುಡಿಯುವ ಜನಗಳಿಗೆ ಈ ಲಾಟರಿ ದಕ್ಕುವುದಿಲ್ಲ ಎಂಬ ಬಗ್ಗೆ ಯಾವ ಸಂಶಯವೂ ಇಲ್ಲ.

ಸರಕಾರದ ಹೇಡಿತನವನ್ನು ಇಂಡಿಯನ್ ಎಕ್ಸ್‌ಪ್ರೆಸ್ (ಜ.3) ಗಮನಿಸಿದೆ. "...ಇಲ್ಲಿಯ ಅನಿವಾರ್ಯತೆಯಲ್ಲಿ ಹಲವು ಪಾಪಗಳಿವೆ. 1993ರ ಅಂತ್ಯದಲ್ಲಿ ಉರುಗ್ವೇ ಸುತ್ತಿನ ಮಾತುಕತೆ ಮುಗಿದ ಮೇಲೆ ಅಗತ್ಯ ಕರಡು, ತಿದ್ದುಪಡಿಗಳನ್ನು ತರಲು ಸರಕಾರಕ್ಕೆ ಸಾಕಷ್ಟು ಸಮಯವಿತ್ತು. ಆದ್ದರಿಂದ ಇಲ್ಲಿ ಸಂಸತ್ತಿನ ಬಗ್ಗೆ ಧಿಮಾಕಿನಿಂದ ಕೂಡಿದ ಅಲಕ್ಷ್ಯವೂ ಇದೆ" ಎಂದು ಅದು ಹೇಳಿದೆ.

ಆದರೆ ಇದೂ ಬೀರೆಯವರ ಎದುರು ಕೈಚಾಚಿ ನಿಂತವರಿಗೆ ಅನಿವಾರ್ಯವಾದ 'ಧಿಮಾಕು' ಅಲ್ಲವೇ? ಅಂದರೆ ಹೇಡಿತನದ ಧಿಮಾಕು!" ಕಳೆದ ಕೆಲವು ತಿಂಗಳಲ್ಲಿ ಸಂಸತ್ತಿಗೆ ಹೋಗಲು ಹಿಂದೇಟು ಹಾಕಿದ ಸರಕಾರಕ್ಕೆ ಮುಂದಿನ ಆರು ತಿಂಗಳೊಳಗೆ ಸಂಸತ್ತಿನಲ್ಲಿ ವಿರೋಧ ಪಕ್ಷಗಳನ್ನು ಎದುರಿಸಲು ಸಾಧ್ಯವೇ! ಈಗ ಕಾಂಗ್ರೆಸ್ ಭಿನ್ನಮತೀಯರೂ ವಿರೋಧಿಗಳ ಸಂಖ್ಯೆಯನ್ನು ಹೆಚ್ಚಿಸಿದ್ದಾರಲ್ಲಾ!" ಎಂದು ಈ ಸಂಪಾದಕೀಯ ನಗೆಯಾಡಿದೆ.

ವಿಕೇಂದ್ರೀಕರಣ: "ಕಾಂಗ್ರೆ ಅನುಭವ" ಮರುಕಳಿಸದಿರಲಿ

".... ಮೇ ಬದಲು ಮಾರ್ಚ್ ಅಂತ್ಯದೊಳಗೆ ಪಂಚಾಯತ್ ಚುನಾವಣೆ ನಡೆಸಲು ಸಚಿವ ಸಂಪುಟ ನಿರ್ಧರಿಸಿದೆ. ಚುನಾವಣೆಯನ್ನು ಮತ್ತೆ ಮುಂದೂಡದೆ ಎರಡು ತಿಂಗಳು ಮೊದಲೇ ನಡೆಸುವುದು ನಿಜಕ್ಕೂ ಸ್ವಾಗತಾರ್ಹ ಕ್ರಮ" ಎಂದು ಪ್ರಜಾವಾಣಿ (ಜ.5) ಹೇಳಿದೆ.

"ಕಾಂಗ್ರೆಸ್ ಸರಕಾರ ಹಿಂದಿನ ಜನತಾ ಸರಕಾರದ ಕಾಯಿದೆಯನ್ನು ಆಮೂಲಾಗ್ರವಾಗಿ ಬದಲಾಯಿಸಿ, ಆ ಬದಲಾವಣೆಯ ನೆಪದಲ್ಲೇ ಪಂಚಾಯತುಗಳಲ್ಲಿ ಸರ್ಕಾರಿ ಕರ್ಮಚಾರಿ ಸಿಬ್ಬಂದಿಯ ದರ್ಪದ ವಿಜೃಂಭಣೆಗೆ ಅವಕಾಶ ಮಾಡಿಕೊಟ್ಟಿತ್ತು. ಕೊನೆಗೂ ಪಂಚಾಯತಿ ಚುನಾವಣೆಯನ್ನು ಕಾಂಗ್ರೆಸ್ ನಡೆಸಿದ್ದು ಪಕ್ಷದಲ್ಲಿನ ಯಾದವೀ ಕಲಹದಲ್ಲಿ ಒಂದು ತಂತ್ರ ಬಳಸಿದ ರೀತಿಯಲ್ಲೇ ಎನ್ನುವುದನ್ನು ಮರೆಯುವಂತಿಲ್ಲ" ಎಂದು **ಕನ್ನಡಪ್ರಭ**(ಜ.5) ನೆನಪಿಸಿದೆ.

ಸರಕಾರೀ ಅಧಿಕಾರಿಗಳಿಗೆ ಲಭ್ಯವಿರುವ ಅಧಿಕಾರವನ್ನು ಚುನಾಯಿತ ಜನಪ್ರತಿನಿಧಿಗಳ ಅಭಿಪ್ರಾಯದಂತೆಯೇ ಚಲಾಯಿಸಬೇಕೆನ್ನುವ ಕಟ್ಟುನಿಟ್ಟಾದ ಆದೇಶವನ್ನು ಸರ್ಕಾರವನ್ನು ನೀಡಬೇಕೆಂಬ ಕನ್ನಡಪ್ರಭದ ಆಗ್ರಹವನ್ನು ಪ್ರಜಾಪ್ರಭುತ್ವದ ವಾದಿಗಳೆಲ್ಲರೂ ಒಪ್ಪುತ್ತಾರೆ. "ಆಗಲೇ ಜನತಾದಳ ಸೈದ್ಧಾಂತಿಕ ಬದ್ಧತೆಗೆ ಬೆಲೆ ಬಂದೀತು" ಎಂಬ ಮಾತು ನಿಜ.

"ಈ ತಿದ್ದುಪಡಿಯನ್ನು ವಿಧಾನಮಂಡಲದ ಮುಂದಿನ ಅಧಿವೇಶನದಲ್ಲಿಯೇ ತಂದು ಒಪ್ಪಿಗೆ ಪಡೆಯಬೇಕಾಗಿದೆ. ಇಲ್ಲವಾದರೆ ಚುನಾವಣೆಯನ್ನು ಮತ್ತೆ ಮುಂದೂಡಲು ಅದನ್ನು ನೆಪವಾಗಿ ನೀಡುವ ಸಾಧ್ಯತೆ ಇದೆ. ಅಧಿಕಾರ ವಿಕೇಂದ್ರೀಕರಣದಲ್ಲಿ ಕಳಕಳಿ ಇರುವ ಜನತಾದಳ ಆ ತಪ್ಪನ್ನು ಮಾಡದಿರಲಿ" ಎಂದು **ಪ್ರಜಾವಾಣಿ** ಆಶಿಸಿದೆ. ಕಾಂಗ್ರೆಸ್ ಪಕ್ಷ ನೀಡಿದ ಅನುಭವದ ಫಲ!

"ಉದಾರ"ತರ್ಕ ಯಾರಿಗೆಉದಾರ?

"ಖಾಸಗೀಕರಣ ಒಂದು ಸ್ವೀಕೃತ ರಾಷ್ಟ್ರೀಯ ನೀತಿ" ಎಂದಿದೆ 'ಪ್ರಜಾವಾಣಿ'(ಡಿ.31)ಯ ಒಂದು ಸಂಪಾದಕೀಯ. ಯಾರು ಇದಕ್ಕೆ ಸ್ವೀಕೃತಿ ನೀಡಿದ್ದು? ನರಸಿಂಹರಾಯರ 'ಸರ್ವಸಮ್ಮತ' ರಾಜಕೀಯಕ್ಕೆ ಮೋಸಹೋದವರು ಅಥವಾ ಅದನ್ನು ಬೇರೆಯವರುನಂಬಬೇಕೆನ್ನುವವರು ಮಾತ್ರ ಹೀಗೆನ್ನಬಲ್ಲರು.

ಸರ್ಕಾರಿ ಉದ್ದಿಮೆಗಳನ್ನು ಕುರಿತ ಕರ್ನಾಟಕ ಶಾಸಕಾಂಗ ಸಮಿತಿಯ 1994-95ನೇ ಸಾಲಿನ ವರದಿ ಸರ್ಕಾರದ ನಿಷ್ಕ್ರಿಯ ಪ್ರವೃತ್ತಿಯನ್ನು ತೀವ್ರವಾಗಿ ಟೀಕಿಸಿರುವ ಬಗ್ಗೆ ಬರೆದಿರುವ ಈ ಸಂಪಾದಕೀಯ "ಉದ್ದಿಮೆಗಳು ನರಳಿ, ನರಳಿ ಸಾಯುವಂತಾಗುವ ಬದಲು ಅದಕ್ಕೆ ತಕ್ಕ ಚಿಕಿತ್ಸೆ ನೀಡುವುದೇ ವಾಸಿ" ಎಂದಿದೆ. ಹೀಗೆ ನರಳಿ ನರಳಿ ಸಾಯುವಂತಾಗಲು ಕಾರಣ ಏನೆಂದು ಪರಿಶೀಲಿಸದೆ ಎಲ್ಲದಕ್ಕೂ 'ಖಾಸಗೀಕರಣ'ವೇ ತಕ್ಕ ಚಿಕಿತ್ಸೆ ಎನ್ನುವುದು ತರ್ಕಬದ್ಧವೇ?

'ಉದಾರೀಕರಣ'ದ ಸಹಾನುಭೂತಿಯ ಪ್ರತೀಕ?

ಬಡವರು ಉಪಯೋಗಿಸುವ ಯಾವುದೇ ವಸ್ತುವನ್ನು ಸೂಚಿಸಿ. ನಾನು ಅದರ ಪ್ರಚಾರದ ಜಾಹೀರಾತಿಗೆ ಮಾಡೆಲ್ ಆಗುತ್ತೇನೆ" ಎಂದು ಹೇಳಿ ಪ್ರಪಂಚದ ಸುಂದರಿ ಐಶ್ವರ್ಯಾರೈ ಬಡವರ ಬಗ್ಗೆ ಸಹಾನುಭೂತಿ ವ್ಯಕ್ತಪಡಿಸಿದ್ದಾರಂತೆ!

ಈ ಹಿಂದೆ ಯಾರೂ ಇಂತಹ ಸಹಾನುಭೂತಿ ವ್ಯಕ್ತಪಡಿಸಿರಲಿಲ್ಲವಂತೆ. "ಈಗ ಬಡವರ ಎಂತೆಂಥ ಭೋಗದ ವಸ್ತುಗಳಿಗೆ ಐಶ್ವರ್ಯಾ ಅವರು ಮಾಡೆಲಿಂಗ್ ಮಾಡಬಹುದೆಂಬುದನ್ನು ನಾವು ನಿರ್ಧರಿಸಬೇಕಾಗಿದೆ. ಈಚಲ ಚಾಪೆ? ಇದ್ದಿಲು ಮೂಟೆ? ಮಣ್ಣಿನ ಮಡಕೆ? ಅವೆಲ್ಲವುಗಳ ಎದುರು ಈ ರೂಪಸಿಯನ್ನು ನಿಲ್ಲಿಸಿದರೆ ಗ್ಲಾಮರ್ ಹೆಚ್ಚುತ್ತದೆ ನಿಜ. ಆದರೆ ಆಕೆ ಅವುಗಳೆದುರು ನಿಂತಿದ್ದಾರೆಂಬ ಕಾರಣಕ್ಕೆ ಅವೆಲ್ಲವೂ ಕೈ ಗೆಟುಕದಷ್ಟು ದುಬಾರಿಯಾಗಿಬಿಟ್ಟರೆ ಕಷ್ಟ" ಎಂದು **ಪ್ರಜಾವಾಣಿ**(ಜ.3) ನಗೆಯಾಡಿದೆ.

'ಉದಾರೀಕರಣ'ದ, ಗ್ಯಾಟ್ ಯುಗದ ಸಹಾನುಭೂತಿ, ಮಾನವೀಯತೆ ಇತ್ಯಾದಿ ಇತ್ಯಾದಿಗಳ ಪರಿಯಿದು ಸ್ವಾಮಿ!